

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ನವೆಂಬರ್ 7 ಮಂಗಳವಾರ 2023

ಸಂಪುಟ: 44 | ಸಂಚಿಕೆ: 201 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.co

₹4





ಕೃಷಿ ಪಂಪ್‌ಸೆಟ್‌ಗೆ ನಿತ್ಯ ಏಳು ಗಂಟೆ ವಿದ್ಯುತ್ ಪೂರೈಕೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ● ಇಂಧನ ಇಲಾಖೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪ್ರಸ್ತುತ 5 ಗಂಟೆಯಿಂದ 6 ಗಂಟೆಗೇರಿಸುವ ನಿರ್ಧಾರ ● ಇದಕ್ಕೆ 600 ಮೆಗಾವ್ಯಾಟ್ ವಿದ್ಯುತ್ ಅಗತ್ಯ; 1500 ಕೋಟಿ ಅನುದಾನದ ಅವಶ್ಯಕತೆ ● ಮುಂದಿನ ವರ್ಷದೊಳಗೆ ಐಪಿ ಸೆಟ್‌ಗಳಿಗೆ ಸೋಲಾರ್ ಎನರ್ಜಿ ಪೂರೈಕೆ





ಬೆಂಗಳೂರು, ನ.6(ಕೆಎಂಶಿ)– ವಿದ್ಯುತ್ ತೀವ್ರ ಅಭಾವದ ನಡುವೆಯೂ ಕೃಷಿ ಪಂಪ್‌ಸೆಟ್‌ಗಳಿಗೆ ಪ್ರತಿನಿತ್ಯ 7 ಗಂಟೆ ವಿದ್ಯುತ್ ಸರಬರಾಜು ಮಾಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಿಸಿದ್ದಾರೆ.


ಗೃಹ ಕಚೇರಿ ಕೃಷ್ಣಾದಲ್ಲಿ ಇಂಧನ ಇಲಾಖೆ ಪ್ರಗತಿ ಪರಿಶೀಲನೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಅವರು, ಪ್ರಸ್ತುತ ಐದು ಗಂಟೆ ವಿದ್ಯುತ್ ಪೂರೈಕೆ ಮಾಡಲಾಗುತ್ತಿದ್ದು, ಇನ್ನು ಮುಂದೆ ಏಳು ಗಂಟೆ ಪೂರೈಕೆ ಮಾಡಲಾಗುವುದು ಎಂದರು. ನಿರಂತರ ಏಳು ಗಂಟೆ ವಿದ್ಯುತ್ ಒದಗಿಸಲು 600 ಮೆ.ವ್ಯಾ. ಯೂನಿಟ್‌ಗಳ ಅಗತ್ಯವಿದೆ. ಆದರೂ ರೈತರ ಬೇಡಿಕೆಯನ್ನು ಈಡೇರಿಸಲು ತೀರ್ಮಾನಿಸಿದ್ದೇವೆ.


ಮುಂದಿನ ದಿನಗಳಲ್ಲಿ ಐಪಿ ಸೆಟ್‌ಗಳಿಗೆ ವಿದ್ಯುತ್ ಪೂರೈಕೆಯನ್ನು ಸೌರ ವಿದ್ಯುತ್ ಮೂಲದಿಂದ ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಇದಕ್ಕಾಗಿ ಟೆಂಡರ್ ಪ್ರಕ್ರಿಯೆ ನಡೆಯುತ್ತಿದ್ದು, ಮುಂದಿನ ವರ್ಷದೊಳಗೆ ರೈತರಿಗೆ ಹಗಲಿನಲ್ಲೇ ಪೂರೈಸಲಾಗುವುದು ಎಂದು ಹೇಳಿದರು. 2022ನೇ ಇಸವಿಗೆ ಹೋಲಿಸಿದರೆ 2023ರಲ್ಲಿ ವಿದ್ಯುತ್ ಬೇಡಿಕೆ ಸರಾಸರಿ ಶೇ. 43 ರಷ್ಟು ಹೆಚ್ಚಿದೆ. ಅಕ್ಟೋಬರ್ ತಿಂಗಳಲ್ಲಿ 15,978 ಮೆಗಾವ್ಯಾಟ್ ಬೇಡಿಕೆ ದಾಖಲಾಗಿದೆ. ವಿದ್ಯುತ್ ಬಳಕೆಯಲ್ಲಿ ಕಳೆದ ವರ್ಷಕ್ಕಿಂತ ಶೇ. 45 ರಷ್ಟು ಹೆಚ್ಚಿದೆ. ಕೃಷಿ ಬಳಕೆಯಲ್ಲಿ ಶೇ. 55ರಿಂದ 119 ರಷ್ಟು ಹೆಚ್ಚಳವಾಗಿದೆ. ಇತರ ವಿಭಾಗಗಳಲ್ಲಿ ಶೇ. 9 ರಿಂದ 14 ರಷ್ಟು ಹೆಚ್ಚಳವಾಗಿದೆ. ಮಳೆ ಕೊರತೆ, ವಾಡಿಕೆಗಿಂತ ಮೊದಲೇ ಐಪಿ ಸೆಟ್‌ಗಳ ಬಳಕೆ ಪ್ರಾರಂಭವಾಗಿರುವುದು ಹಾಗೂ ಕೋವಿಡ್–19ರ ನಂತರದ ಆರ್ಥಿಕ ಪುನಶ್ಚೇತನ ಇದಕ್ಕೆ ಕಾರಣವಾಗಿದೆ.

ಕಳೆದ ಬಾರಿ ಪ್ರಗತಿ ಪರಿಶೀಲನೆಯ ನಂತರ ರಾಯಚೂರು, ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರಗಳ ಉತ್ಪಾದನೆ ಹೆಚ್ಚಾಗಿದೆ. ಉತ್ತರ ಪ್ರದೇಶ, ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಿಂದ ವಿದ್ಯುತ್ ಪಡೆಯಲಾಗುತ್ತಿದೆ. ಸೆಕ್ಷನ್ 11ರ ಅಡಿ ನಮ್ಮಲ್ಲಿ ಖಾಸಗಿಯಾಗಿ ಉತ್ಪಾದನೆಯಾಗುವ ವಿದ್ಯುತ್ ಬೇರೆ ▶ 9ನೇ ಪುಟಕ್ಕೆ

ಮೈಸೂರಲ್ಲಿ ಮಹಾಮಳೆ ಆರ್ಭಟ

ವಿವಿಧೆಡೆ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳ ಪರದಾಟ; ಹಲವೆಡೆ ವಿದ್ಯುತ್ ಕಡಿತ









ಮೈಸೂರು, ನ6(ಎಸ್‌ಬಿಡಿ)– ಮೈಸೂರಿನಲ್ಲಿ ಸೋಮವಾರ ಸಂಜೆಯಿಂದ ಧಾರಾಕಾರ ಮಳೆ ಸುರಿದ ಪರಿಣಾಮ ಜನ ಜೀವನ ಅಸ್ತವ್ಯಸ್ತವಾಗಿತ್ತು.

ಬೆಳಗ್ಗೆ ಮೋಡ ಕವಿದ ವಾತಾವರಣ ವಿತ್ತಾದರೂ ನಂತರದಲ್ಲಿ ಬಿಸಿಲು ಜೋರಾಗಿತ್ತು. ಸಂಜೆ ವೇಳೆಗೆ ಮತ್ತೆ ಕಾರ್ಮೋಡ ಕವಿದು ಗುಡುಗು ಸಹಿತ ಭಾರಿ ಮಳೆ ಸುರಿಯಲಾರಂಭಿಸಿತು. ಸಂಜೆ 6.30 ರಿಂದ ಆರ್ಭಟಿಸಿದ ಮಳೆಯಿಂದ ರಸ್ತೆಗಳೆಲ್ಲಾ ಜಲಾವೃತವಾಗಿದ್ದವು. ಹಲವು ಬಡಾವಣೆಗಳಲ್ಲಿ ತಗ್ಗು ಪ್ರದೇಶದ ಮನೆಗಳಿಗೆ ನೀರು ತುಂಬಿ ನಿವಾಸಿಗಳು ಹೈರಾಣಾದರು. ತಡರಾತ್ರಿವರೆಗೂ ಬಿಟ್ಟು ಬಿಡದಂತೆ ಸುರಿದ ಮಳೆ ಭಾರಿ ಅವಾಂತರವನ್ನೇ ಸೃಷ್ಟಿಸಿತು. ಬನ್ನಿಮಂಟಪ, ಎರಡನೇ ಹಂತದ ನಿವಾಸಿ 92 ವರ್ಷದ ನಿವೃತ್ತ ಯೋಧ ಸಿ.ಪಿ.ಬಿದ್ದಪ್ಪ ಅವರ ಮನೆಗೆ ನೀರು ನುಗ್ಗಿ ಪೀಠೋಪಕರಣ ಸೇರಿದಂತೆ ಅಗತ್ಯ ವಸ್ತುಗಳೆಲ್ಲಾ ಜಲಾವೃತವಾಗಿದ್ದವು. ವಯೋವೃದ್ಧ ಬಿದ್ದಪ್ಪನವರು ಸೇರಿದಂತೆ ಮನೆಯವರೆಲ್ಲಾ ಊಟ ಮಾಡುವುದಕ್ಕೂ ಸಾಧ್ಯವಾಗದೆ ತುಂಬಾ ತೊಂದರೆ ಅನುಭವಿಸಿದರು. ಮಳೆ ಆರ್ಭಟ ಸ್ವಲ್ಪ ಮಟ್ಟಿಗೆ ತಗ್ಗಿದ ನಂತರ ಮನೆಯೊಳಗೆ ತುಂಬಿದ್ದ ನೀರನ್ನು ಪಾತ್ರೆಗಳ ಸಹಾಯದಿಂದ ಹೊರಹಾಕಿದರು. ಆದರೂ ರಾತ್ರಿ ಬಹು ಹೊತ್ತಿನವರೆಗೂ ಮಳೆ ಸುರಿದಿದ್ದರಿಂದ ನಿದ್ದೆಯೂ ಇಲ್ಲದೆ ಪರದಾಡಿದರು. ಹೂಟಗಳ್ಳಿ ಪಾಲಾಕ್ಷ ಆಸ್ಪತ್ರೆಗೆ ನೀರು ನುಗ್ಗಿ ಅವಾಂತರವಾಗಿತ್ತು. ವಿಷಯ ತಿಳಿದ ಹೆಬ್ಬಾಳು ಅಗ್ನಿಶಾಮಕ ಠಾಣೆ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ, ನೀರು ● 6ನೇ ಪುಟಕ್ಕೆ

90 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರ ಮನೆ ಬಾಗಿಲಿಗೆ ಪಡಿತರ ಪದಾರ್ಥ

ಮೈಸೂರಿನಲ್ಲಿ 'ಅನ್ನ ಸುವಿಧ' ಯೋಜನೆಗೆ ವಿಧ್ಯುಕ್ತ ಚಾಲನೆ



ಮೈಸೂರು, ನ.6(ಬಿಎಲ್‌ಯು)– 90 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರ ಮನೆ ಬಾಗಿಲಿಗೆ ಪಡಿತರ ಆಹಾರ ಪದಾರ್ಥ ತಲುಪಿಸುವ "ಅನ್ನ ಸುವಿಧ" ಯೋಜನೆಗೆ ಮೈಸೂರಿನಲ್ಲಿ ಇಂದು ವಿಧ್ಯುಕ್ತವಾಗಿ ಚಾಲನೆ ನೀಡಲಾಯಿತು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಸೋಮವಾರ ನಡೆದ 'ಒಂದು ದೇಶ ಒಂದು ಪಡಿತರ ಚೀಟಿ ಯೋಜನೆ'ಯ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ, ಹಿರಿಯ ನಾಗರಿಕರಿಗೆ ಸಾಂಕೇತಿಕವಾಗಿ ಅಕ್ಕಿ ವಿತರಣೆ ಮಾಡುವ ಮೂಲಕ ಅನ್ನ ಸುವಿಧ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

90 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರು ಅಶಕ್ತರಾಗಿರುತ್ತಾರೆ. ಒಂದೆಡೆಯಿಂದ ಮತ್ತೊಂದೆಡೆಗೆ ಓಡಾಡಲು ಅವರಿಗೆ ಸಾಧ್ಯವಾಗುವುದಿಲ್ಲ. ಇಂತಹವರನ್ನು ಗುರುತಿಸಿ ಅವರ ಮನೆ ಬಾಗಿಲಿಗೆ ಅಕ್ಕಿ ಸೇರಿದಂತೆ ಇತರೆ ಪಡಿತರ ಆಹಾರವನ್ನು ತಲುಪಿಸಲಾಗುವುದು. ಇದು ಇಡೀ ದೇಶದಲ್ಲೇ ಆರಂಭವಾದ ಮೊದಲ ಮಾದರಿ ಯೋಜನೆಯಾಗಿದೆ ಎಂದು ಮುನಿಯಪ್ಪ ತಿಳಿಸಿದರು. ತರುವಾಯ ಪತ್ರಕರ್ತರ ಜೊತೆ ಮಾತನಾಡಿದ ಅವರು, ಬಿಪಿಎಲ್ ಹಾಗೂ ಎಪಿಎಲ್‌ಗಾಗಿ ಹೊಸದಾಗಿ ಪಡಿತರ ಚೀಟಿ ಪಡೆಯಲು 2.95 ಲಕ್ಷ ಜನರು ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಸಿದ್ದಾರೆ. ಇವರ ದಾಖಲಾತಿಯನ್ನು ಪರಿಶೀಲನೆ ಮಾಡಲಾಗುತ್ತಿದ್ದು, ▶ 6ನೇ ಪುಟಕ್ಕೆ

ನ್ಯಾಯಬೆಲೆ ಅಂಗಡಿಗಳಲ್ಲಿ ಕಳಪೆ ಗುಣಮಟ್ಟದ ಅಕ್ಕಿ ನೀಡಿದರೆ ಕಠಿಣ ಕ್ರಮ

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಮುನಿಯಪ್ಪ ಎಚ್ಚರಿಕೆ

- ಜನ ದೂರು ನೀಡಿದರೆ ಕಠಿಣ ಕ್ರಮ ಖಚಿತ
- ಸದ್ಯಕ್ಕೆ 5 ಕೆ.ಜಿ. ಅಕ್ಕಿ ಬದಲು ಹಣ ವರ್ಗಾವಣೆ
- ನ್ಯಾಯಬೆಲೆ ಅಂಗಡಿಯವರ ಬೇಡಿಕೆಗೆ ಸ್ಪಂದನೆ
- ರಾಗಿ ಬದಲು 5 ಕೆ.ಜಿ.ಅಕ್ಕಿ ನೀಡುವಂತೆ ಸೂಚನೆ

ಮೈಸೂರು, ನ.6(ಬಿಎಲ್‌ಯು)–ನ್ಯಾಯಬೆಲೆ ಅಂಗಡಿಗಳಲ್ಲಿ ಕಳಪೆ ಗುಣಮಟ್ಟದ ಅಕ್ಕಿ ಸೇರಿದಂತೆ ಇತರೆ ಪಡಿತರ ಆಹಾರ ನೀಡಿದರೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಹೆಚ್.ಮುನಿಯಪ್ಪ ಎಚ್ಚರಿಕೆ ನೀಡಿದ್ದಾರೆ. ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು ನಡೆದ 'ಒಂದು ರಾಷ್ಟ್ರ ಒಂದು ಪಡಿತರ ಚೀಟಿ' ಯೋಜನೆಯ ಜಾಗೃತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಭಾರತೀಯ ಆಹಾರ ನಿಗಮದಿಂದ ಗುಣಮಟ್ಟದ ಅಕ್ಕಿ ಸೇರಿದಂತೆ ಇತರೆ ಆಹಾರ ಪದಾರ್ಥಗಳನ್ನು ಪಡೆದು, ನ್ಯಾಯಬೆಲೆ ಅಂಗಡಿಗಳ ಮೂಲಕ ಸರ್ಕಾರ ಫಲಾನುಭವಿಗಳಿಗೆ ವಿತರಣೆ ಮಾಡುತ್ತಿದೆ. ಒಂದು ವೇಳೆ ಅಕ್ಕಿ ಸೇರಿದಂತೆ ಇತರೆ ಪಡಿತರ ಆಹಾರ ಪದಾರ್ಥ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಜನ ದೂರು ನೀಡಿದರೆ ನಿರ್ದಾಕ್ಷಿಣ್ಯವಾಗಿ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ರೈತರಿಂದ ಗುಣಮಟ್ಟದ ಭತ್ತ ಖರೀದಿಸಿ ಮಿಲ್‌ಗಳಲ್ಲಿ ಅಕ್ಕಿ ಮಾಡುತ್ತೀರಾ. ಆದರೆ ನ್ಯಾಯಬೆಲೆ ಅಂಗಡಿಗಳಲ್ಲಿ ಮಾತ್ರ ಕಳಪೆ ಗುಣಮಟ್ಟದ ಅಕ್ಕಿ ನೀಡಲಾಗುತ್ತದೆ. ಹಾಗಾದರೆ ರೈತರಿಂದ ಪಡೆದ ಗುಣಮಟ್ಟದ ಅಕ್ಕಿ ಎಲ್ಲಿಗೆ ಹೋಗುತ್ತಿದೆ ಎಂದು ರೈತ ಮುಖಂಡರು ಕೇಳಿದ ● 6ನೇ ಪುಟಕ್ಕೆ

ಹುಲಿ ದಾಳಿಗೆ ಮತ್ತೊಬ್ಬ ರೈತ ಬಲಿ

● ಮೊಳೆಯೂರು ವಲಯ ಅರಣ್ಯದಂಚಿನ ಹೊಸಕೋಟೆ ರಸ್ತೆ ಬಳಿ ಘಟನೆ
● ಆನೆ, ಹುಲಿ, ಚಿರತೆ ದಾಳಿಯಿಂದ ತತ್ತರಿಸಿರುವ ಕೃಷಿಕ ಸಮುದಾಯ



ಬಾಲಾಜಿ ನಾಯಕ

ಸರಗೂರು, ನ.6–ಹೆಚ್.ಡಿ.ಕೋಟೆ ಹಾಗೂ ಸರಗೂರು ಭಾಗದಲ್ಲಿ ಆನೆ, ಹುಲಿ ಸೇರಿದಂತೆ ವನ್ಯಜೀವಿಗಳ ದಾಳಿಯಿಂದ ಕೃಷಿಕ ಸಮುದಾಯ ತತ್ತರಿಸಿ ಹೋಗಿದೆ. ಇತ್ತೀಚೆಗಂತೂ ಸಾವು–ನೋವುಗಳು ಹೆಚ್ಚಾಗುತ್ತಿದ್ದು, ಸರಗೂರು ತಾಲೂಕಿನ ಕಾಡಬೇಗೂರು ಲಂಬಾಣಿ ಕಾಲೋನಿಯ ರೈತ ಹಾಗೂ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಬಾಲಾಜಿ ನಾಯಕ (40) ಸೋಮವಾರ ಹುಲಿ ದಾಳಿಗೆ ಬಲಿಯಾಗಿದ್ದಾರೆ. ಈತ ಮೊಳೆಯೂರು ವಲಯ ಅರಣ್ಯದಂಚಿನ ಹೊಸಕೋಟೆ ಸಂಪರ್ಕ ರಸ್ತೆ ಪಕ್ಕದ ತಮ್ಮ ಜಮೀನಿನಲ್ಲಿ ಎಂದಿನಂತೆ ಶುಂಠಿ ಕೃಷಿಯಲ್ಲಿ ತೊಡಗಿದ್ದರು. ಮಧ್ಯಾಹ್ನ ಸುಮಾರು 1.30 ಗಂಟೆಯಲ್ಲಿ ದಿಢೀರ್ ಪ್ರತ್ಯಕ್ಷವಾದ ಹುಲಿ, ದಾಳಿ ನಡೆಸಿ ಸಮೀಪದ ಕಾಡಂಚಿನ ಟ್ರಂಚ್‌ನೊಳಗೆ ಎಳೆದೊಯ್ದು ದೇಹದ ಬಹು ಭಾಗವನ್ನು ತಿಂದು ಪರಾರಿಯಾಗಿದೆ. ರೈತ ಬಾಲಾಜಿ ನಾಯಕನ ದುರಂತ ಸಾವಿನ ಸುದ್ದಿ ತಿಳಿಯುತ್ತಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು ಘಟನಾ ಸ್ಥಳಕ್ಕೆ ಆಗಮಿಸಿ, ಟ್ರಂಚ್‌ನೊಳಗೆ ಬಿದ್ದಿದ್ದ ಅರೆಬರೆ ಶವವನ್ನು ಮೇಲೆತ್ತಿದ್ದಾರೆ. ಗ್ರಾಮಸ್ಥರು ಅರಣ್ಯಾಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಸ್ಥಳದಲ್ಲೇ ಪ್ರತಿಭಟನೆ ನಡೆಸಿದರು. ನಂತರ ಪೊಲೀಸರು ಆಗಮಿಸಿ ಪ್ರತಿಭಟನಾಕಾರರನ್ನು ಸಮಾಧಾನಪಡಿಸಿದರು. ಆದರೆ, ರಾತ್ರಿ 7 ಗಂಟೆಯಾದರೂ ಅರಣ್ಯ ಇಲಾಖೆಯ ಯಾವುದೇ ಅಧಿಕಾರಿ ಹಾಗೂ ಸಿಬ್ಬಂದಿ ▶ 9ನೇ ಪುಟಕ್ಕೆ







ಪೆರಿಫೆರಲ್ ರಿಂಗ್ ರಸ್ತೆಗೆ ಡಿಪಿಆರ್ ತಯಾರಿಗೆ ಟೆಂಡರ್

3,500 ಕೋಟಿ ರೂ. ಯೋಜನೆ ಸಂಬಂಧ ಮುಡಾ ಅಧಿಕಾರಿಗಳೊಂದಿಗೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಭೆ



ಮೈಸೂರು, ನ. 6(ಆರ್‌ಕೆ)– ಮೈಸೂರಿನ ಮಹತ್ವಾಕಾಂಕ್ಷೆಯ ಪೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ ಸಮಗ್ರ ಯೋಜನಾ ವರದಿ (ಡಿಪಿಆರ್) ತಯಾರಿಸಲು ಟೆಂಡರ್ ಕರೆಯಲಾಗಿದೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ.

ಈ ಸಂಬಂಧ ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಮುಡಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು. ರಾಜ್ಯ ರಾಜಧಾನಿ ಬೆಂಗಳೂರನ್ನು ಹೊರತುಪಡಿಸಿದರೆ, ಸಾಂಸ್ಕೃತಿಕ ರಾಜಧಾನಿ ಮೈಸೂರು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರವಾಗಿರುವುದರಿಂದ ಇಲ್ಲಿನ ವಾಹನ ಸಂಚಾರ ದಟ್ಟಣೆಗನುಸಾರ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಬೇಕೆಂಬ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿದೆ ಎಂದು ಅವರು ತಿಳಿಸಿದರು. ಕೈಗಾರಿಕೆಗಳು, ಐಟಿ–ಬಿಟಿ, ಪ್ರವಾಸೋದ್ಯಮ, ಶಿಕ್ಷಣ ಕ್ಷೇತ್ರ, ಎಕ್ಸ್‌ಪ್ರೆಸ್ ವೇ, ಮಂಡಕಳ್ಳಿ ವಿಮಾನ ನಿಲ್ದಾಣ ಉನ್ನತೀಕರಣ, ಮೈಸೂರು–ಚೆನ್ನೈ ಬುಲೆಟ್ ಟ್ರೈನ್ ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳು ಅನುಷ್ಠಾನವಾಗಿರುವುದರಿಂದ ಮೈಸೂರಿನಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಿಸಲು ಮುಡಾ ಮೂಲಕ ಸರ್ಕಾರ ಯೋಜನೆ ರೂಪಿಸಿದೆ ಎಂದರು.

ಮಹಾಯೋಜನೆಯಲ್ಲಿ ಅನುಮೋದನೆಯಾಗಿರುವಂತೆ 105 ಕಿ.ಮೀ. ಉದ್ದ, 90 ಮೀಟರ್ ಅಗಲದ 6 ಪಥದ ಪೆರಿಫೆರಲ್ ರಿಂಗ್ ರಸ್ತೆಗೆ 2,350 ಎಕರೆ ಭೂಮಿ, ಭೂಸ್ವಾಧೀನಕ್ಕೆ 3550 ● 6ನೇ ಪುಟಕ್ಕೆ

ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ಶೀಘ್ರ ಫ್ಲೈಓವರ್ ನಿರ್ಮಾಣ



ಮೈಸೂರು, ನ. 6(ಆರ್‌ಕೆ)–ಮೈಸೂರಿನ ಮಣಿಪಾಲ್ ಆಸ್ಪತ್ರೆ–ರಿಂಗ್ ರೋಡ್ ಜಂಕ್ಷನ್‌ನಲ್ಲಿ ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಹೆಚ್‌ಎಐ)ದಿಂದ ಶೀಘ್ರ ಫ್ಲೈಓವರ್ ನಿರ್ಮಿಸಲಾಗುವುದು ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಇಂದಿಲ್ಲಿ ತಿಳಿಸಿದ್ದಾರೆ. ಈ ಕುರಿತಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ದಿನದಿಂದ ದಿನಕ್ಕೆ ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ವಾಹನ ಸಂಚಾರ ದಟ್ಟಣೆ ಜಾಸ್ತಿಯಾಗುತ್ತಿರುವುದರಿಂದ ಮೈಸೂರಿನ ಪ್ರವೇಶ ದ್ವಾರವಾದ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ● 6ನೇ ಪುಟಕ್ಕೆ

ಸೂಕ್ತ ಸಮಯಕ್ಕೆ ಮೈಸೂರು ಪಾಲಿಕೆ ಚುನಾವಣೆ



ಮೈಸೂರು, ನ.6(ಆರ್‌ಕೆ) – ಮೈಸೂರು ಮಹಾನಗರ ಪಾಲಿಕೆ ಚುನಾವಣೆಯನ್ನು ಮುಂದೂಡುವ ಪ್ರಶ್ನೆಯೇ ಇಲ್ಲ. ಸರಿಯಾದ ಸಮಯಕ್ಕೆ ನಡೆಸುತ್ತೇವೆ ಎಂದು ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ತಿಳಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅವಧಿ ಮುಗಿಯುತ್ತಿರುವ ಮೈಸೂರು ಮಹಾನಗರ ಪಾಲಿಕೆ ಚುನಾವಣೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ದೇಶನ ನೀಡಿದ್ದಾರೆ. ಮೀಸಲಾತಿ ಸಂಬಂಧವೂ ಪೌರಾಡಳಿತ ನಿರ್ದೇಶನಾಲಯವು ಪ್ರಕ್ರಿಯೆ ಆರಂಭಿಸಿದೆ ಎಂದರು. ಅದೇ ರೀತಿ ಲೋಕಸಭಾ ಚುನಾವಣೆ ಸಂಬಂಧ ಅಭ್ಯರ್ಥಿಗಳಾಗ ಬಯಸುವ ಆಕಾಂಕ್ಷಿಗಳಿಂದ ತಾವು ಅಭಿಪ್ರಾಯ ಸಂಗ್ರಹಿಸಿ ಪೂರಕ ಮಾಹಿತಿ ಸಂಗ್ರಹಿಸಿ ಪಕ್ಷದ ಹಿರಿಯ ನಾಯಕರಿಗೆ ವರದಿ ಸಲ್ಲಿಸುತ್ತೇನೆ. ಎಲ್ಲಾ ಪಕ್ಷಗಳಲ್ಲಿರುವಂತೆ ಕಾಂಗ್ರೆಸ್‌ನಲ್ಲೂ ಆಕಾಂಕ್ಷಿಗಳ ಸಂಖ್ಯೆ ಜಾಸ್ತಿ ಇದೆ. ಪಕ್ಷದ ವರಿಷ್ಠರು ಅಭ್ಯರ್ಥಿಗಳನ್ನು ಸೂಚಿಸುತ್ತಾರೆ ಎಂದು ಅವರು ತಿಳಿಸಿದರು.

ಸಿಎಂ, ಡಿಸಿಎಂಗಳು ಹಣ ವಸೂಲಿ ಮಾಡುತ್ತಿದ್ದಾರೆಂಬ ಪ್ರಧಾನಮಂತ್ರಿಗಳ ಹೇಳಿಕೆಗೆ ಪ್ರತಿಕ್ರಿಯಿಸಿದ ಭೈರತಿ ಸುರೇಶ್, ಬಿಜೆಪಿ ಭ್ರಷ್ಟಾಚಾರದ ಪಿತಾಮಹ ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿದ್ದು, ಅವರ ತಪ್ಪು ಮುಚ್ಚಿಕೊಳ್ಳಲು ಬೇರೆಯವರ ಮೇಲೆ ಭ್ರಷ್ಟಾಚಾರದ ಆರೋಪ ಹೊರಿಸುತ್ತಿದ್ದಾರೆ ಎಂದರು.

ಅಭಿವೃದ್ಧಿ ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗಳಲ್ಲಿ ತಾವು ಹಸ್ತಕ್ಷೇಪ ಮಾಡುತ್ತಾರೆಂಬ ಆರೋಪಕ್ಕೆ ಉತ್ತರಿಸಿದ ಸಚಿವರು, ಇಲಾಖಾ ಅಧಿಕಾರಿಗಳು ಪಾರದರ್ಶಕ ನೀತಿಯನ್ವಯ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯುತ್ತಾರೆ. ಅರ್ಹರಿಗೆ ಕಾಮಗಾರಿ ಒಪ್ಪಿಸುವುದರಿಂದ ಅಲ್ಲಿ ನನ್ನ ಹಸ್ತಕ್ಷೇಪದ ಪ್ರಶ್ನೆಯೇ ಬರುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಈವರೆಗೆ ನನ್ನ ಅಥವಾ ನನ್ನ ಕಡೆಯವರ ಹೆಸರಲ್ಲಿ 200 ರೂ. ಕೆಲಸವೂ ನಡೆದಿಲ್ಲ. ಹಾಗೇನಾದರೂ ಇದ್ದಲ್ಲಿ ದಾಖಲೆ ಸಮೇತ ಮಾಹಿತಿ ನೀಡಲಿ ಎಂದು ಸಚಿವರು ತಿಳಿಸಿದರು.

Anmol's Retirement Paradise
Near GRS Fantasy Park, Mysuru
PREMIUM SENIOR CARE FACILITY [OLD AGE HOME]
1, 2 and 3 Sharing fully furnished Rooms for Senior Retired Citizens with Attached Bathrooms.
- 24x7 in-house nurse along with housekeeping services
- in-house laundry services
- regular sugar and BP checkup
- on call doctor available at all times
- special activities will be held at our facility such as meditation and yoga classes, art workshops, etc.,
Day care facility also available
For further information contact : 96114 99069

ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ

ಮೈಸೂರು, ನ.6–ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಹಾಗೂ ಮೈಸೂರಿನ ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆಗಳ ವತಿಯಿಂದ ನವೆಂಬರ್ 1, 1985ರಿಂದ ಕರ್ನಾಟಕದಲ್ಲಿರುವ ಕನ್ನಡ ಬಾರದ ಎಲ್ಲ ಸರ್ಕಾರಿ ನೌಕರರಿಗಾಗಿ 12 ತಿಂಗಳುಗಳ ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಕರ್ನಾಟಕದಲ್ಲಿರುವ ಎಲ್ಲ ನಗರ ಸಭೆ, ಕವಿಪ್ರನಿನಿ ಕೆಎಸ್ಆರ್‌ಟಿಸಿ, ವಿಶ್ವವಿದ್ಯಾಲಯಗಳು, ಶಾಲಾ ಕಾಲೇಜುಗಳು ಮತ್ತಿತರ ಸರ್ಕಾರಿ, ಅನುದಾನ ಪಡೆಯುವ ಸಂಸ್ಥೆಗಳ ನೌಕರರು ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರು ಸಹ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು.

ಕರ್ನಾಟಕದ ಸರ್ಕಾರಿ ನೌಕರರು, ಸಂಪರ್ಕ ಶಿಬಿರ ಹಾಗೂ ಪರೀಕ್ಷೆಗಳಿಗೆ ಹಾಜರಾಗುವಾಗಿನ ಅವರ ಕಚೇರಿ ಗೈರುಹಾಜರಿಯನ್ನು ಅನ್ಯ ಕಾರ್ಯ ನಿಮಿತ್ತ ಎಂದು ಪರಿಗಣಿಸಲಾಗುವುದು. ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆಗೆ ನೋಂದಾಯಿಸಿಕೊಂಡು ಉತ್ತೀರ್ಣರಾದವರಿಗೆ ವಿನಾಯಿತಿ ಇರುತ್ತದೆ. ಈ ಯೋಜನೆಯನ್ನು ಈಗ ಸಾರ್ವಜನಿಕರಿಗೂ ವಿಸ್ತರಿಸಿದ್ದು, ಇವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು ಹಾಗೂ ವಯೋಮಿತಿ 18ರಿಂದ 50 ರೊಳಗಿರಬೇಕು. ಆಸಕ್ತರು, ಭರ್ತಿ ಮಾಡಿದ ಅರ್ಜಿಯ ಜೊತೆಯಲ್ಲಿ ರೂ. 250/– ಡಿಮ್ಯಾಂಡ್ ಡ್ರಾಫ್ಟ್ ಸಲ್ಲಿಸಬೇಕು.

ಅರ್ಜಿ ನಮೂನೆ ಮತ್ತು ತರಬೇತಿ ವಿವರಗಳನ್ನು ಮಾನಸಗಂಗೋತ್ರಿ, ಭಾರತೀಯ ಭಾಷೆಗಳ ಕೇಂದ್ರ ಸಂಸ್ಥೆ, ಅಂಚೆ ಮೂಲಕ ಕನ್ನಡ ಶಿಕ್ಷಣ ಯೋಜನೆ ವಿಭಾಗದಲ್ಲಿ ಪಡೆಯಬಹುದು. ಭರ್ತಿ ಮಾಡಿದ ಅರ್ಜಿಗಳು ನ.30ರೊಳಗೆ ಸಲ್ಲಿಸಬಹುದಾಗಿದೆ. ಮಾಹಿತಿಗಾಗಿ ದೂ.ಸಂ. 0821–2345128 ಸಂಪರ್ಕಿಸಬಹುದು.

ವಸ್ತುಪ್ರದರ್ಶನದ ಈ ಮಳಿಗೆಗೆ ಭೇಟಿ ನೀಡಿದರೆ ಮಕ್ಕಳ ಕೌಶಲ್ಯಕ್ಕೆ ಮಾರುಹೋಗದವರೇ ಇಲ್ಲ...!

■ ಮೋಹನ್ ಕಾಯಕ

ಕಿರಿಯ ವಯಸ್ಸಲ್ಲಿ ಹಿರಿದಾದ ಚಿಂತನೆ–ಚಮತ್ಕಾರ.. ವಾಹ್..!!





ಮೈಸೂರು, ನ.6– ವಸತಿ ಶಾಲೆಯ ವಿದ್ಯಾರ್ಥಿಗಳ ಚಮತ್ಕಾರಕ್ಕೆ ಬೆರಗಾದ ಪೋಷಕರು.... ಕೃಷಿ, ಅಪಘಾತ, ವನ್ಯಜೀವಿಗಳ ಸಂರಕ್ಷಣೆ, ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಪ್ರವಾಹ ನಿವಾರಣೆಗೆ ಪರ್ಯಾಯ ಮಾರ್ಗಗಳನ್ನು ಅನಾವರಣಗೊಳಿಸಿರುವ ಸರ್ಕಾರಿ ಶಾಲಾ ಮಕ್ಕಳು....!

ಮೈಸೂರು ದಸರಾ ವಸ್ತುಪ್ರದರ್ಶನದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಮಳಿಗೆಯಲ್ಲಿ ವಸತಿ ಶಾಲೆಗಳ ಮಕ್ಕಳಲ್ಲಿನ ಕೌಶಲ್ಯಕ್ಕೆ ಪೋಷಕರು, ಪ್ರವಾಸಿಗರು ಮಾರುಹೋಗಿದ್ದಾರೆ. ಕಾಡುಪ್ರಾಣಿಗಳಿಂದ ಬೆಳೆಗಳು ನಾಶವಾಗದಂತೆ ಕಾಪಾಡುವುದು, ರಸ್ತೆ ತಿರುವುಗಳಲ್ಲಾಗುವ ಅಪಘಾತಗಳನ್ನು ತಡೆಗಟ್ಟುವುದು, ಕೃಷಿಯಲ್ಲಿ ತಂತ್ರಜ್ಞಾನದ ಅಳವಡಿಕೆಯ ಪ್ರಯೋಜನ, ಮಳೆ ನೀರಿನ ಸಂಗ್ರಹಣೆ ಸೇರಿದಂತೆ ಹಲವು ವಿಚಾರಗಳ ಕುರಿತು ಜಾಗೃತಿ ಮೂಡಿಸುತ್ತಿದ್ದಾರೆ.

ಕಾಡಂಚಿನ ಪ್ರದೇಶಗಳಲ್ಲಿ ಕಾಡುಪ್ರಾಣಿಗಳಿಂದ ನಾಶವಾಗುವ ಬೆಳೆಗಳ ರಕ್ಷಣೆ ಜೊತೆಗೆ ಕಾಡುಪ್ರಾಣಿಗಳಿಗೂ ತೊಂದರೆಯಾಗದಂತೆ ಮಾದರಿ(model)ಯೊಂದನ್ನು ಸಿದ್ಧ ಪಡಿಸಿರುವ ಮಳವಳ್ಳಿ ತಾಲೂಕಿನ ಬ್ಯಾಡರಹಳ್ಳಿಯ ಮೊರಾರ್ಜಿ ದೇಸಾಯಿ ಶಾಲೆ(ಎಂಡಿಆರ್‌ಎಸ್)ಯ ವಿದ್ಯಾರ್ಥಿಗಳಾದ ಬಿ.ಆರ್. ಮಿಥುನ್ ಮತ್ತು ಸಿ.ಎ.ಪ್ರಶಾಂತ್, ವೆಯ್ಟ್ ಸೆನ್ಸಾರ್ ಅಥವಾ ಅಲ್ಟ್ರಾಸೊನಿಕ್ ಸೆನ್ಸಾರ್ ಹಾಗೂ ಸೌರಶಕ್ತಿ ಬಳಕೆಯಿಂದ ಬೆಳೆಗಳ ನಾಶವಾಗದಂತೆ ರೈತರು ಮುಂಜಾಗ್ರತೆ ವಹಿಸುವುದ್ಹೇಗೆ ಎಂಬುದನ್ನು ಸವಿಸ್ತಾರವಾಗಿ ತಿಳಿಸಿದ್ದಾರೆ.

ಕಾಡಂಚಿನ ರೈತರ ಜಮೀನು ಬಳಿ(ಕಾಡಿನ ಮತ್ತು ಜಮೀನಿನ ಮಧ್ಯೆ) ನೆಲಕ್ಕೆ ವೆಯ್ಟ್ ಸೆನ್ಸಾರ್ ಅಳವಡಿಸಿದರೆ, ಸೆನ್ಸಾರ್ ಮೇಲೆ ಕಾಡುಪ್ರಾಣಿಗಳು ಹಾದು ಜಮೀನಿಗೆ ನುಗ್ಗುವಾಗ ಸೆನ್ಸಾರ್‌ನಿಂದ ದೊಡ್ಡಮಟ್ಟದ ಶಬ್ದ ಬಂದು ರೈತರ ಗಮನಕ್ಕೆ ಬರುವಂತಾಗುತ್ತದೆ. ಅಲ್ಲದೆ ಜಮೀನಿನಲ್ಲಿ ಅಳವಡಿಸಿದ್ದ ಸೌರಶಕ್ತಿಯ ವಿದ್ಯುತ್ ಸ್ಪರ್ಶ(ಕಡಿಮೆ ಪ್ರಮಾಣದ ವಿದ್ಯುತ್ ಹರಿವಿನ ತಂತಿಗಳ ಅಳವಡಿಕೆ)ದಿಂದ ಮತ್ತೆ ಕಾಡಿನೊಳಗೆ ಪ್ರಾಣಿಗಳು ಹೋಗುತ್ತವೆ. ಇದರಿಂದ ಪ್ರಾಣಿಗಳ ಜೀವವೂ ಉಳಿಯುತ್ತದೆ, ಜಮೀನಿನಲ್ಲಿ ರೈತರು ಕಷ್ಟಪಟ್ಟು ಬೆಳೆದಿದ್ದ ಬೆಳೆಯೂ ದಕ್ಕುತ್ತದೆ ಎಂದು ವಿದ್ಯಾರ್ಥಿಗಳಿಬ್ಬರು ಪ್ರವಾಸಿಗರಿಗೆ ವಿವರ ನೀಡುತ್ತಿದ್ದಾರೆ.

ಹಾಗೆಯೇ ಹೊಲ ಉಳುವುದು, ಬೀಜ ಬಿತ್ತನೆ, ನೀರು ಹಾಯಿಸುವುದು, ಕೊಯ್ಲು ಹಾಗೂ ಕಳೆ ತೆಗೆಯುವುದಕ್ಕೆಲ್ಲವೂ ಒಂದೇ ಯಂತ್ರವನ್ನು ಕಂಡು ಹಿಡಿದಿರುವ ನಾಗಮಂಗಲ ತಾಲೂಕಿನ ಸೋಮನಹಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲಾ ವಿದ್ಯಾರ್ಥಿಗಳಾದ ಸಿ.ಎಸ್.ಗೌತಮ್ ಹಾಗೂ ಸಿ.ಜೆ.ರಾಹುಲ್, ರೈತರಿಗೆ ಸಮಯದ ಉಳಿತಾಯದ ಜೊತೆಗೆ ವ್ಯವಸಾಯದ ಖರ್ಚು ಕಡಿಮೆಯಾಗಲು ಇಂತಹ ಯಂತ್ರಗಳು ಸಹಕಾರಿಯಾಗುತ್ತವೆ. ಬೀಜ ಬಿತ್ತನೆಯಿಂದ ಹಿಡಿದು ಕಟಾವು ಮಾಡುವವರೆಗೂ ಒಂದೇ ಯಂತ್ರವನ್ನು ಬಳಸಬಹುದು ಎಂದು ಅರಿವು ಮೂಡಿಸುತ್ತಿದ್ದಾರೆ.

ತಿರುವು ಇದೆ ಎಚ್ಚರ..!: ರಸ್ತೆ ತಿರುವುಗಳಲ್ಲಾಗುವ(accident prevention in hairpin curves)ಅಪಘಾತಗಳ ಕುರಿತು ಮಾದರಿ ತಯಾರು ಮಾಡಿರುವ ಪಾಂಡವಪುರ ತಾಲೂಕಿನ ಮಹದೇಶ್ವರಪುರದ ಡಾ.ಬಿ.ಆರ್.ಅಂಬೇಡ್ಕರ್ ಬಾಲಕಿಯರ ವಸತಿ ಶಾಲೆಯ ವಿದ್ಯಾರ್ಥಿನಿಯರು, ರೆಡ್ ಸಿಗ್ನಲ್ ಮೂಲಕ ತಿರುವು ಬರುವುದಕ್ಕಿಂತ ಮುಂಚೆಯೇ ಎದುರಿನಿಂದ ವಾಹನವೊಂದು ಬರುತ್ತಿದೆ ಎಂದು ಚಾಲಕರನ್ನು ಎಚ್ಚರಿಸಿದರೆ ಅಪಘಾತಗಳನ್ನು ತಡೆಯಬಹುದು.

ನಮ್ಮ ಶಾಲೆ ಕಾಡಂಚಿನಲ್ಲಿದೆ...!

"ನಮ್ಮ ಶಾಲೆ ಇರುವುದು ಕಾಡಂಚಿನಲ್ಲಿ. ಆಗಾಗ ಕಾಡುಪ್ರಾಣಿಗಳಿಂದ ರೈತರು ಕಷ್ಟಪಟ್ಟು ಬೆಳೆದ ಬೆಳೆ ನಾಶವಾಗುತ್ತಿರುವುದನ್ನು ನೋಡುತ್ತಿರುತ್ತೇವೆ. ಆದ್ದರಿಂದಾಗಿ ಕಾಡುಪ್ರಾಣಿಗಳಿಂದ ರೈತರ ಬೆಳೆ ಹಾಳಾಗದಂತೆ ಹಾಗೂ ಕಾಡುಪ್ರಾಣಿಗಳ ಜೀವಕ್ಕೂ ತೊಂದರೆಯಾಗದಂತೆ ಮಾದರಿಯೊಂದನ್ನು ತಯಾರಿಸಿದ್ದೇವೆ.

–ಬಿ.ಆರ್.ಮಿಥುನ್, ವಿದ್ಯಾರ್ಥಿ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಬ್ಯಾಡರಹಳ್ಳಿ





ಇದು ಅತ್ಯಂತ ಸುಲಭ ವಿಧಾನವಾಗಿದೆ. ತಿರುವು ಇನ್ನೂ ಸ್ವಲ್ಪ ದೂರ ಇರುವಂತೆ ರೆಡ್ ಸಿಗ್ನಲ್ ಆನ್ ಆಗಿದ್ದರೆ, ಚಾಲಕರು ತಮ್ಮ ವಾಹನದ ವೇಗ ಕಡಿಮೆ ಮಾಡುವುದರ ಜೊತೆಗೆ ಸರಿಯಾದ ಮಾರ್ಗದಲ್ಲಿ ವಾಹನ ಚಲಾಯಿಸಲು ಅನುಕೂಲವಾಗುತ್ತದೆ ಎಂದು ಮನದಟ್ಟು ಮಾಡಿಕೊಡುತ್ತಿದ್ದಾರೆ.

ಕಣ್ ಮುಚ್ಚಂಗಿಲ್ಲ... ಹೆಲ್ಮೆಟ್ ಇಲ್ಲದೆ ಹತ್ತಂಗಿಲ್ಲ..!: ಕಾರು ಚಾಲಕ 3 ಸೆಕೆಂಡ್ ಕಣ್ಣು ಮುಚ್ಚಿದರೂ ಸಿಗ್ನಲ್ ಕೊಡುವ ಕನ್ನಡಕ(ಆಪ್ಟಿಕಲ್), ಹೆಲ್ಮೆಟ್ ಇಲ್ಲದಿದ್ದರೆ, ಇದ್ದರೂ ಸರಿಯಾಗಿ ಹಾಕಿಕೊಳ್ಳದಿದ್ದರೆ, ಹಾಕಿಕೊಂಡರೂ ಮದ್ಯಪಾನ ಮಾಡಿದ್ದರೆ ಸ್ಟಾರ್ಟ್ ಆಗದ ಬೈಕ್ ಕಂಡು ಹಿಡಿದಿರುವ ಕೆ.ಆರ್.ಪೇಟೆ ತಾಲೂಕಿನ ಮಾದಾಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಜಿ.ವಿ.ಶ್ರೀವಂತ್ ಮತ್ತು ಎಸ್.ಎನ್. ರೇವಂತ್‌ಕುಮಾರ್, ನೋಡುಗರಲ್ಲಿ ಅಚ್ಚರಿ ಮೂಡಿಸಿದ್ದಾರೆ.

ವಿದ್ಯಾರ್ಥಿ ರೂಪಿಸಿರುವ ಕನ್ನಡಕ(Anti Sleep Alert for Drivers) ಹಾಕಿಕೊಂಡು ಕಾರು ಚಾಲನೆ ಮಾಡುವಾಗ, ಚಾಲಕ 3 ಸೆಕೆಂಡ್ ಕಣ್ಣು ಮುಚ್ಚಿದರೆ ಸಾಕು ಕನ್ನಡಕ ಜೋರಾಗಿ ಸಿಗ್ನಲ್ ಕೊಡಲಿದೆ. ಇದರಿಂದ ಚಾಲಕ ಎಚ್ಚರಗೊಳ್ಳುವುದರ ಜೊತೆಗೆ ಅಪಘಾತ ಉಂಟಾಗುವುದನ್ನು ತಪ್ಪಿಸಬಹುದು. ಹಾಗೆಯೇ ಡ್ರಂಕ್ ಅಂಡ್ ಡ್ರೈವ್ ಅನ್ನು ಮೊದಲೇ ಪತ್ತೆ ಮಾಡುವ ಹೆಲ್ಮೆಟ್, ನೇರವಾಗಿ ಬೈಕ್ ಸಿಗ್ನಲ್ ಕೊಡಲಿದೆ. ಹೆಲ್ಮೆಟ್ ಸರಿಯಾಗಿ ಹಾಕಿಕೊಳ್ಳದಿದ್ದರೂ, ಹಾಕದಿದ್ದರೂ ಸ್ಟಾರ್ಟ್ ಆಗದ ತಂತ್ರಜ್ಞಾನ ಹೊಂದಿರುವ ಬೈಕ್(Alcohol Detection in Vehicle) ನಿಂದಾಗಿ ಪ್ರತಿದಿನ ರಸ್ತೆ ಅಪಘಾತದಿಂದ ಸಾವನ್ನಪ್ಪುವ ದ್ವಿಚಕ್ರ ವಾಹನ ಸವಾರರ ಜೀವ ಉಳಿಸಬಹುದು ಎಂದು ಎಚ್ಚರಿಸಿದ್ದಾರೆ.

ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಪ್ರವಾಹ ನಿವಾರಣೆ: ನೈಸರ್ಗಿಕ ಸಂಪನ್ಮೂಲಗಳಾದ ಗಾಳಿ, ನೀರು, ಸೂರ್ಯನ ಬೆಳಕು, ಮಣ್ಣು ಇತ್ಯಾದಿಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವುದರ ಜೊತೆಗೆ ಪ್ರವಾಹಗಳಿಂದ ಪಾರಾಗಲೂ ಕೆರೆ, ಕಟ್ಟೆಗಳ ಅವಶ್ಯವೆಂಬುದನ್ನು ಆಕರ್ಷಕ ಮಾದರಿಯೊಂದಿಗೆ ತಿಳಿಸಿರುವ ಮಂಡ್ಯ ತಾಲೂಕಿನ ಬಸರಾಳು ಗ್ರಾಮದ ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಯ ವಿದ್ಯಾರ್ಥಿನಿಯರಾದ ಸಿ.ಕೆ. ಮೌಲ್ಯ ಹಾಗೂ ಪ್ರಿಯಾ, ನೈಸರ್ಗಿಕ ಸಂಪನ್ಮೂಲಗಳ ಮಹತ್ವವನ್ನು ತಿಳಿಸಿದ್ದಾರೆ. ಪವನ ಶಕ್ತಿ, ಸೌರಶಕ್ತಿ, ನೈಸರ್ಗಿಕ ಗೊಬ್ಬರ ತಯಾರಿಗೆ, ಸಾವಯವ ಕೃಷಿ ಪದ್ಧತಿ ಹಲವು ವಿಷಯಗಳ ತಿಳಿಸಿರುವ ವಿದ್ಯಾರ್ಥಿನಿಯರು ನೋಡುಗರಿಂದ ಮೆಚ್ಚುಗೆ ಪಡೆದಿದ್ದಾರೆ. ಅದೇ ರೀತಿ ಮಳೆ ನೀರಿನ ಸಂಗ್ರಹಣೆ, ಮಳೆ ನೀರಿನ ಕೊಯ್ಲು, ಬೇಸಾಯಕ್ಕೆ ಮಳೆ ನೀರಿನ ಸಮರ್ಪಕ ಬಳಕೆ ಕುರಿತು ಮಾದರಿ ಮೂಲಕ ತಿಳಿಸಿರುವ ತುಂಬಕರೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ವಿದ್ಯಾರ್ಥಿಗಳಾದ ಪ್ರೇಮ್‌ಕುಮಾರ್ ಮೌರ್ಯ ಹಾಗೂ ಮನೀಶ್, ಹನಿ ನೀರಾವರಿ ಪದ್ಧತಿ ಮೇಲೂ ಬೆಳಕು ಚೆಲ್ಲಿದ್ದಾರೆ.



ಮೈಸೂರಿಗೆ ಆಗಮಿಸಿದ ವಿಜಯಪುರ ಶಾಸಕ ಬಸನಗೌಡಪಾಟೀಲ್ ಯತ್ನಾಳ್ ಅವರನ್ನು ಖಾಸಗಿ ಹೋಟೆಲ್‌ನಲ್ಲಿ ಶಾಸಕ ಶ್ರೀವತ್ಸ ಮಾಜಿ ಶಾಸಕರಾದ ಎಲ್.ನಾಗೇಂದ್ರ ನಿರಂಜನಕುಮಾರ್, ಎನ್.ಮಹೇಶ್, ಸಿ.ಹೆಚ್.ವಿಜಯಶಂಕರ್, ನಗರ ಬಿಜೆಪಿ ಮಾಧ್ಯಮ ಸಂಚಾಲಕ ಕೇಬಲ್ ಮಹೇಶ್, ವಕೀಲ ಶಿವರಾಜ್ ಅಭಿನಂದಿಸಿದರು.

ನಾಳೆ ಉದ್ಯಮಿ ಜಿ.ಮಂಜುಗೌಡರ ಹುಟ್ಟುಹಬ್ಬ



ಮೈಸೂರು,ನ.6– ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿಕಟಪೂರ್ವ ಅಧ್ಯಕ್ಷರೂ ಆದ ಉದ್ಯಮಿ ಜಿ. ಮಂಜುಗೌಡರವರ 51ನೇ ಹುಟ್ಟುಹಬ್ಬದ ಅಂಗವಾಗಿ ನಗರದ ವಿವಿಧೆಡೆ ಬುಧವಾರ (ನ.8) ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬೆಳಗ್ಗೆ 8.30ಕೆ ಚಾಮುಂಡಿಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ, ಬೆಳಗ್ಗೆ 9.30ಕ್ಕೆ ಆದಿಚುಂಚನಗಿರಿ ಮೈಸೂರು ಶಾಖಾ ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಗಳಿಂದ ಆಶೀರ್ವಾದ ಪಡೆಯಲಿದ್ದಾರೆ. ಬೆಳಗ್ಗೆ 10 ಗಂಟೆಗೆ ಅಶ್ವಿನಿ ಗೋಲ್ಡ್ ಕಂಪನಿ ಕಚೇರಿ ಮುಂಭಾಗ ಪೌರ ಕಾರ್ಮಿಕರಿಗೆ ಮತ್ತು ಬಡ ಜನರಿಗೆ ಬಟ್ಟೆ ಹಾಗೂ ಸಿಹಿ ವಿತರಣೆ. ಮಧ್ಯಾಹ್ನ 11ಕ್ಕೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಕರ್ತವ್ಯ ನಿರ್ವಹಿಸುವ ಪೌರಕಾರ್ಮಿಕರಿಗೆ, ತೋಟಗಾರಿಕೆ ಕಾರ್ಮಿಕರಿಗೆ, ಹಾಗೂ ಭದ್ರತಾ ಸಿಬ್ಬಂದಿಗೆ ಮಳಿಗೆದಾರರ ವತಿಯಿಂದ ಸೀರೆ, ಬಟ್ಟೆ ಹಾಗೂ ಸಿಹಿ ವಿತರಣೆ. ಮಧ್ಯಾಹ್ನ 12 ಗಂಟೆಗೆ ಕರಾವಳಿ ಸೀ ಫುಡ್ ರೆಸ್ಟೋರೆಂಟ್ ವತಿಯಿಂದ ಟಿ.ಕೆ.ಲೇಔಟ್‌ನಲ್ಲಿರುವ ಪುಟ್ಟೀರಮ್ಮ ವಿಶೇಷ ಮಕ್ಕಳ ಶಾಲೆಯಲ್ಲಿ ಆಟಿಕೆ ವಸ್ತುಗಳು, ಹಣ್ಣು ಹಾಗೂ ಸಿಹಿ ವಿತರಣೆ. ಭಾಗ್ಯ ಸಾಗರ ಎಜುಕೇಶನಲ್ ಟ್ರಸ್ಟ್ ವತಿಯಿಂದ ಮಧ್ಯಾಹ್ನ 1ಕ್ಕೆ ಬನ್ನಿಮಂಟಪದಲ್ಲಿರುವ ಸಾಯಿರಂಗ ವಿಶೇಷ ಮಕ್ಕಳ ಶಾಲೆಯಲ್ಲಿ ಮಧ್ಯಾಹ್ನದ ಊಟ, ಸಿಹಿ ಮತ್ತು ಹಣ್ಣುಗಳ ವಿತರಣೆ. ಸಂಜೆ 5ಕ್ಕೆ ಮೈಸೂರಿನ ಕೇಂದ್ರ ಕಾರಾಗೃಹದಲ್ಲಿ ಸೀರೆ ಹಾಗೂ ಸಿಹಿ ವಿತರಣೆ. ಮಳಿಗೆದಾರರು ಹಾಗೂ ಜಿ.ಮಂಜುಗೌಡ ಸ್ನೇಹಿತರ ವತಿಯಿಂದ ರಾತ್ರಿ 9ಕ್ಕೆ ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಮಂಜುಗೌಡರನ್ನು ಸನ್ಮಾನಿಸಿ ಬೃಹತ್ ಗಾತ್ರದ ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಣೆ ಹಾಗೂ ಭೋಜನ ವ್ಯವಸ್ಥೆ ಮಾಡಲಾಗಿದೆ ಎಂದು ಭಾಗ್ಯ ಸಾಗರ ಎಜುಕೇಶನಲ್ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಸಾಗರ ಗೌಡ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ಭಾರತ ರತ್ನ ಸರ್ ಸಿ.ವಿ.ರಾಮನ್ ಒಂದು ನೆನಪು



ಮೈಸೂರು,ನ.6–ಮೈಸೂರಿನ ವಿದ್ಯಾರಣ್ಯ ಟ್ರಸ್ಟ್ ವತಿಯಿಂದ ನೊಬೆಲ್ ಪ್ರಶಸ್ತಿ ಪಡೆದ ಪ್ರಥಮ ಭಾರತೀಯ ವಿಜ್ಞಾನಿ ಭಾರತ ರತ್ನ ಸರ್ ಸಿ ವಿ ರಾಮನ್ ಜನ್ಮ ದಿನಾಚರಣೆ ಹಿನ್ನೆಲೆಯಲ್ಲಿ ಸರ್ ಸಿ.ವಿ.ರಾಮನ್ ಒಂದು ನೆನಪು ಕಾರ್ಯಕ್ರಮವನ್ನು ವಿದ್ಯಾರಣ್ಯಪುರಂ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣದಲ್ಲಿ ನಾಳೆ (ನ.7) ಸಂಜೆ 5.30 ಗಂಟೆಗೆ ಏರ್ಪಡಿಸಲಾಗಿದೆ ಎಂದು ವಿದ್ಯಾರಣ್ಯ ಟ್ರಸ್ಟ್‌ನ ಅಧ್ಯಕ್ಷ ಜಿ.ವಿ.ರವಿಶಂಕರ್ ತಿಳಿಸಿದ್ದಾರೆ. ಮುಖ್ಯ ಅತಿಥಿಗಳಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಚಾಲಕರಾದ ಅನಂತರಾಮು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ.ಪವಿತ್ರ, ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ನಗರ ಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ವಿಕ್ರಂ ಅಯ್ಯಂಗಾರ್ ಇನ್ನಿತರರು ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ನ.6–ಮೈಸೂರಿನ ಉತ್ತರಾದಿ ಮಠದ ರಸ್ತೆಯಲ್ಲಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ನ.18 ರಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 2 ರವರೆಗೆ ವೀರಶೈವ ಲಿಂಗಾಯತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ನ.17ರೊಳಗೆ ನೋಂದಣಿ ಮಾಡಿಕೊಳ್ಳಬೇಕೆಂದು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9686205346 ಸಂಪರ್ಕಿಸಬಹುದು.

ಕೆಪಿಎಸ್‌ಸಿ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಲು ನಿರುದ್ಯೋಗಿಗಳ ನಿರಾಸಕ್ತಿ

ಮೈಸೂರು, ನ.6(ಬಿಎಲ್‌ಯು)– ಕರ್ನಾಟಕ ಲೋಕಸೇವಾ ಆಯೋಗವು ವಿವಿಧ ಸರ್ಕಾರಿ ಹುದ್ದೆಗಳಿಗೆ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಇದೇ ಮೊದಲ ಬಾರಿಗೆ ನೋಂದಣಿ ಮಾಡಿಸಿಕೊಂಡಿದ್ದ ಅರ್ಧದಷ್ಟು ಅಭ್ಯರ್ಥಿಗಳು ಮಾತ್ರ ಭಾಗಿಯಾಗಿ, ಉಳಿದವರು ಗೈರಾಗಿದ್ದರು. ಸರ್ಕಾರಿ ಉದ್ಯೋಗ ಪಡೆಯುವ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಲು ನಿರುದ್ಯೋಗಿಗಳು ನಿರಾಸಕ್ತಿ ತೋರಿದ್ದೇಕೆ ಎಂಬ ಪ್ರಶ್ನೆ ಎದುರಾಗಿದೆ.

ಕರ್ನಾಟಕ ಲೋಕಸೇವಾ ಆಯೋಗವು ಗ್ರೂಪ್ ಸಿ ಹುದ್ದೆಗೆ ಮೈಸೂರಿನ 14 ಪರೀಕ್ಷಾ ಕೇಂದ್ರಗಳಲ್ಲಿ ನಿನ್ನೆ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ 2,580 ಅಭ್ಯರ್ಥಿಗಳು ಪಾಲ್ಗೊಂಡಿದ್ದರು. ಆದರೆ ನೋಂದಣಿ ಮಾಡಿಸಿಕೊಂಡಿದ್ದ 3,881 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು.

ಲೆಕ್ಕ ಸಹಾಯಕರ 242 ಹುದ್ದೆಗಳಿಗೆ ಹಾಗೂ ಸಹಕಾರ ಸಂಘಗಳ ನಿರೀಕ್ಷಕರ 47 ಹುದ್ದೆಗಳಿಗೆ ಇಂದು 11 ಪರೀಕ್ಷಾ ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಲಾಯಿತು. ಈ ಪರೀಕ್ಷೆಗಾಗಿ 5,332 ಅಭ್ಯರ್ಥಿಗಳು ನೋಂದಣಿ ಮಾಡಿಸಿಕೊಂಡಿದ್ದರು. ಇವರಲ್ಲಿ 2,221 ಅಭ್ಯರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಉಳಿದ 3,111 ಅಭ್ಯರ್ಥಿಗಳು ಗೈರು ಹಾಜರಾಗಿದ್ದರು.

ನೋಂದಣಿ ಮಾಡಿಸಿಕೊಂಡಿದ್ದ ಅರ್ಧ ಅಭ್ಯರ್ಥಿಗಳು ಗೈರು



ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಕರ್ನಾಟಕ ಲೋಕಸೇವಾ ಆಯೋಗವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿತ್ತು. ಪರೀಕ್ಷಾ ಕೇಂದ್ರಗಳಲ್ಲಿ ಅಳವಡಿಸಿದ್ದ ಸಿಸಿಟಿವಿ ಕ್ಯಾಮರಾಗಳ ಜೊತೆಗೆ ಪ್ರತ್ಯೇಕವಾಗಿ ಮತ್ತಷ್ಟು ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಪರೀಕ್ಷೆ ಕೇಂದ್ರದಲ್ಲಿ ವಿಡಿಯೋ ಚಿತ್ರೀಕರಣ ಮಾಡಲಾಯಿತು. ಪರೀಕ್ಷಾ ಕೊಠಡಿಯಲ್ಲಿರುವ ಮೇಲ್ವಿಚಾರಕರಿಗೆ ಬಾಡಿ ಕ್ಯಾಮರಾ ನೀಡಲಾಗಿತ್ತು. ಪ್ರತಿಯೊಬ್ಬ ಅಭ್ಯರ್ಥಿಯನ್ನು ಕ್ಯಾಮರಾದಲ್ಲಿ ಸೆರೆ ಹಿಡಿದು ಅವರ ನೋಂದಣಿ ಸಂಖ್ಯೆ ದಾಖಲು ಮಾಡಿಕೊಳ್ಳಲಾಗಿತ್ತು.

ಪ್ರತಿ ಪರೀಕ್ಷಾ ಕೇಂದ್ರಕ್ಕೂ ಪೊಲೀಸರನ್ನು ನಿಯೋಜಿಸಲಾಗಿತ್ತು. ಪರೀಕ್ಷೆ ಬರೆಯುವ ಅಭ್ಯರ್ಥಿಗಳು ಹಾಗೂ ಸಿಬ್ಬಂದಿ ಹೊರತುಪಡಿಸಿ ಯಾರನ್ನು ಹತ್ತಿರ ಕೂಡ ಸೇರಿಸುತ್ತಿರಲಿಲ್ಲ.

ಖಾಸಗಿ ಕಂಪನಿಗಳಿಗಿಂತ ಸರ್ಕಾರಿ ಹುದ್ದೆಗೆ ಸೇರಲು ನಿರುದ್ಯೋಗಿಗಳು ಹಾತೊರೆಯುತ್ತಿರುತ್ತಾರೆ. ಅದರಲ್ಲೂ ಕರ್ನಾಟಕ ಲೋಕಸೇವಾ ಆಯೋಗ ಆಯೋಜಿಸುವ ಸ್ಪರ್ಧಾತ್ಮಕ ಪರೀಕ್ಷೆಗೆ ತಪ್ಪದೆ ಹಾಜರಾಗುತ್ತಾರೆ. ಆದರೆ ಇಂದು ಅರ್ಧಕ್ಕೆ ಅರ್ಧ ಅಭ್ಯರ್ಥಿಗಳು ಪರೀಕ್ಷೆಗೆ ಗೈರು ಹಾಜರಾಗಿದ್ದರು.

ಪರೀಕ್ಷಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಅಭ್ಯರ್ಥಿಗಳಿಗೆ ತಮ್ಮ ತವರು ಜಿಲ್ಲೆಯಲ್ಲಿ ಪರೀಕ್ಷೆ ಬರೆಯಲು ಅವಕಾಶ ನೀಡದೆ ಅಕ್ಕಪಕ್ಕದ ಜಿಲ್ಲೆಗಳನ್ನು ಸೂಚಿಸಲಾಗಿತ್ತು. ಅದೂ ಅಲ್ಲದೆ ಇಂದು ವಿವಿಧ ಬ್ಯಾಂಕಿಂಗ್ ಪರೀಕ್ಷೆ ನಡೆಯುತ್ತಿರುವ ಕಾರಣ ಇಂದು ಹೆಚ್ಚಿನ ಪ್ರಮಾಣದಲ್ಲಿ ಅಭ್ಯರ್ಥಿಗಳು ಗೈರು ಹಾಜರಿರಬಹುದು ಎಂದು ಪರೀಕ್ಷೆಗೆ ನಿಯೋಜನೆಗೊಂಡಿದ್ದ ಅಧಿಕಾರಿಯೊಬ್ಬರು ಕಾರಣ ನೀಡಿದರು.

ಪರಿಶಿಷ್ಟ ಜಾತಿಯ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

ಮೈಸೂರು, ನ.6– ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2023ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ (ರಾಜ್ಯ ಪಠ್ಯಕ್ರಮದಲ್ಲಿ ಪ್ರಥಮ ಪ್ರಯತ್ನದಲ್ಲಿ ಶೇ.60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರೋತ್ಸಾಹ ಧನ ಜಮಾ ಮಾಡಲಾಗುತ್ತದೆ ಅರ್ಹ ವಿದ್ಯಾರ್ಥಿಗಳು sw.kar.nic.in -> SSLC prize money-> application Status ಲಿಂಕ್‌ನಲ್ಲಿ ತಮ್ಮ ಎಸ್.ಎಸ್.ಎಲ್.ಸಿ ರಿಜಿಸ್ಟ್ರೇಷನ್ ನಂ. ನಮೂದಿಸಿ ಅರ್ಜಿ ಸ್ಥಿತಿ ತಿಳಿಯಬಹುದಾಗಿದೆ. Statusನಲ್ಲಿ Aadhar not seeded ಎಂದು ನಮೂದಾಗಿದ್ದಲ್ಲಿ. ಅಂತಹ ವಿದ್ಯಾರ್ಥಿಗಳು ತಮ್ಮ ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮಾಡಿಸಿ ನಂತರ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ ಹಾಗೂ ಆಧಾರ್‌ನ ನಕಲು ಪ್ರತಿಗಳನ್ನು ಸಹಾಯಕ ನಿರ್ದೇಶಕರು ಗ್ರೇಡ್–1 ಕಚೇರಿ ಸಮಾಜ ಕಲ್ಯಾಣ ಇಲಾಖೆ, ಮೈಸೂರು ತಾಲೂಕು, ಡಾ.ಬಾಬು ಜಗಜೀವನರಾಂ ಭವನ ಕಟ್ಟಡ, ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ ಬಡಾವಣೆ, ಪಡುವಾರಹಳ್ಳಿ ಮೈಸೂರು ಇಲ್ಲಿಗೆ ಸಲ್ಲಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.11.2023 ಮಂಗಳವಾರ, ಮಳೆ ನಕ್ಷತ್ರ: ವಿಶಾಖ, 07.11.2023ರಿಂದ 19.11.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರಾ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಸವಿತಾ ಸಮಾಜ ಸಂಘ :** ಶ್ರೀ ಚಾಮುಂಡೇಶ್ವರಿ ಸವಿತಾ ಮಹರ್ಷಿ ಕಪ್ ರಾಜ್ಯ ಮಟ್ಟದ ಟೆನ್ನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ, ಸ್ಥಳ: ಬಿಇಎಂಎಲ್ ಕ್ರೀಡಾಂಗಣ, ಕೂರ್ಗಳ್ಳಿ, ಬೆಳಗ್ಗೆ 10ಕ್ಕೆ.

■ **ದಿ ಆರ್ಟ್ ಆಫ್ ಲಿವಿಂಗ್ (ವೇದ ವಿಜ್ಞಾನ ಮಹಾ ವಿದ್ಯಾಪೀಠ):** ಶ್ರೀ ಶ್ರೀ ರವಿಶಂಕರ್ ಗುರೂಜಿಯವರ ಆರ್ಟ್ ಆಫ್ ಲಿವಿಂಗ್ ಶಿಬಿರ, ಆನಂದದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್ ಆಶ್ರಮ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6ರಿಂದ 8.30, ಸಂಜೆ 6ರಿಂದ 8.30ರವರೆಗೆ.

■ **ಬಾಸುದೇವ ಸೋಮಾನಿ ಕಾಲೇಜು :** ಖಾದಿ ಮಹೋತ್ಸವ ಅಭಿಯಾನ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ವಿಷಯ : ಖಾದಿ : ಸ್ವದೇಶಿ, ಸ್ವಾವಲಂಬನೆಯ ಕೌಶಲ್ಯ ಶಿಕ್ಷಣ, ಉದ್ಘಾಟನೆ : ಗಾಂಧಿ ಅಧ್ಯಯನ ವಿಭಾಗದ ನಿರ್ದೇಶಕ ಪ್ರೊ. ಎಸ್. ನರೇಂದ್ರಕುಮಾರ್, ಮುಖ್ಯ ಅತಿಥಿಗಳು : ಡಾ. ಎಂ. ಪುಟ್ಟಸ್ವಾಮಿ, ಕುಬೇರ್ ಪಿ.ಗೌಡ, ಶ್ರೀಮತಿ ಎಸ್. ಪ್ರಭಾ, ಅಧ್ಯಕ್ಷತೆ : ಬಾಸುದೇವ ಸೋಮಾನಿ ಕಾಲೇಜು ಪ್ರಾಂಶುಪಾಲ ಡಾ. ಎಂ.ಮಹದೇವಸ್ವಾಮಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.45ಕ್ಕೆ.

■ **ಸರ್ಕಾರಿ ಪ್ರೌಢಶಾಲೆ, ಹೂಟಗಳ್ಳಿ, ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಸರ್ ಸಿ.ವಿ. ರಾಮನ್ ಮತ್ತು ಮೇರಿಕ್ಯೂರಿ ಜನ್ಮ ದಿನಾಚರಣೆ, ಅಧ್ಯಕ್ಷತೆ : ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ಶ್ರೀಮತಿ ಪಿ.ವಿ. ಸಂಗೀತಾ, ಪ್ರಧಾನ ಭಾಷಣ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಂಖ್ಯಾಶಾಸ್ತ್ರಜ್ಞ ಎಸ್.ಜಿ. ಸೀತಾರಾಂ, ಬಹುಮಾನ ವಿತರಣೆ : ಕಲಾವಿದೆ ಡಾ. ಜಮುನಾರಾಣಿ ಮಿರ್ಲೆ, ಉಪಸ್ಥಿತರು : ಕಾವೇರಿ ಬಳಗದ ಅಧ್ಯಕ್ಷೆ ಶ್ರೀಮತಿ ಎನ್.ಕೆ. ಕಾವೇರಿಯಮ್ಮ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಸರ್ಕಾರಿ ಪ್ರೌಢಶಾಲೆ, ಹೂಟಗಳ್ಳಿ, ಬೆಳಗ್ಗೆ 11.30ಕ್ಕೆ.

■ **ವಿದ್ಯಾರಣ್ಯ ಟ್ರಸ್ಟ್ :** ಭಾರತ ರತ್ನ ಸರ್ ಸಿ ವಿ ರಾಮನ್ ಜನ್ಮ ದಿನಾಚರಣೆ, ಸರ್ ಸಿ ವಿ ರಾಮನ್ ಒಂದು ನೆನಪು ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ ಸಂಚಾಲಕ ಅನಂತರಾಮು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಆರ್ ಎಚ್ ಪವಿತ್ರ, ಹಿರಿಯ ಸಮಾಜ ಸೇವಕರಾದ ಕೆ ರಘುರಾಮ್ ವಾಜಪೇಯಿ, ನಗರಪಾಲಿಕಾ ಸದಸ್ಯರಾದ ಮಾ ವಿ ರಾಮಪ್ರಸಾದ್, ಸಾಮಾಜಿಕ ಹೋರಾಟಗಾರ ವಿಕ್ರಂ ಅಯ್ಯಂಗಾರ್, ಸ್ಥಳ: ವಿದ್ಯಾರಣ್ಯಪುರಂ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ಆವರಣ, ಸಂಜೆ 5.30ಕ್ಕೆ.

■ **ವಸುಂಧರ ಪ್ರದರ್ಶಕ ಕಲೆಗಳ ಕೇಂದ್ರ :** ವಸುಂಧರೋತ್ಸವ–2023, ಸಂಜೆ 6.15 ರಿಂದ ಕು. ಮೇಘನಾ ಭೋಜಲ ಮತ್ತು ಕು. ಪ್ರೀತಿ ರಾಮಮೂರ್ತಿ ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ವಿದುಷಿ ಶ್ರೀಮತಿ ಸಂಧ್ಯಾ ಉಡುಪ ಅವರಿಂದ ಭರತನಾಟ್ಯ, ಗೌರವ ಸಮರ್ಪಣೆ : ಪೂರ್ಣಾದೇವಿ ಕೆ. ಅರಸ್, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ.

■ **ಗಾನಭಾರತೀ:** ಚೌಡಿಕೆ ಪದ ಮತ್ತು ಭರತನಾಟ್ಯ ಕಾರ್ಯಕ್ರಮ, ಸಂಜೆ 6ರಿಂದ ಪದ್ಮಶ್ರೀ ಬಿ. ಮಂಜಮ್ಮ ಜೋಗತಿ, ರಾಮವ್ವ ಜೋಗತಿ ಸಂಗಡಿಗರು ಅವರಿಂದ ಚೌಡಿಕೆ ಪದಗಳ ಹಾಡುಗಾರಿಕೆ–ಉಪನ್ಯಾಸ, ಸಂಜೆ 7ರಿಂದ ಕನ್ನಡ ಹಾಡುಗಳಿಗೆ ನೃತ್ಯ, ವಿದುಷಿ ಸುಹಾಸಿನಿ ಕೌಲಗಿ ಮತ್ತು ತಂಡದಿಂದ ಅಭಿವ್ಯಕ್ತಿ ನೃತ್ಯ ತಂಡ, ವಿದುಷಿ ನಾಗಶ್ರೀ ಫಣೀಂದ್ರ ಮತ್ತು ತಂಡದಿಂದ ನಟರಾಜ ನೃತ್ಯಶಾಲೆ, ವಿದ್ವಾನ್ ಪವನ್‌ಕುಮಾರ್ ತಂಡದಿಂದ ತಪಸ್ಯಾ ನೃತ್ಯಶಾಲೆ, ವಿದುಷಿ ಕೃಪಾಫಡ್ಕೆ ಅವರ ವಿದ್ಯಾರ್ಥಿಗಳಿಂದ ನೃತ್ಯಗಿರಿ ನೃತ್ಯಶಾಲೆ, ಸ್ಥಳ: ವೀಣೆ ಶೇಷಣ್ಣ ಭವನ, ಕುವೆಂಪುನಗರ.

■ **ಸಾವರ್ಕರ್ ಪ್ರತಿಷ್ಠಾನ :** ಸ್ವಾತಂತ್ರ್ಯ ಹೋರಾಟಗಾರ ಸಾವರ್ಕರ್ ಅವರ ಜೀವನಾಧಾರಿತ 'ಕರಿನೀರ ವೀರ' ಕನ್ನಡ ನಾಟಕ ಪ್ರದರ್ಶನ, ನಿರ್ದೇಶನ : ರಂಗಾಯಣ ಮಾಜಿ ಅಧ್ಯಕ್ಷ ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಕಲಾಮಂದಿರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಶ್ರದ್ಧೆಯ ಶಿಲ್ಪ–ಲೇಖನ ಮತ್ತು ಪ್ರಸ್ತುತಿ– ಟಿ.ಎಸ್. ಗೋಪಾಲ್, 6.40 ಸಿರಿಗನ್ನಡಂ ಗೆಲ್ಗೆ,ಪ್ರಸ್ತುತಿ– ಜಿ.ಕೆ. ರವೀಂದ್ರ ಕುಮಾರ್, 6.45 ಕಲ್ಯಾಣ ಕರೆದಿದೆ ಕಲ್ಯಾಣ–ಪ್ರಾಯೋಜಿತ ಕಾರ್ಯಕ್ರಮ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ– ಉಮೇಶ್, 8.30 ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 8.45 ಕರೆಗೊಂದು ಗೀತೆ, 10.00 ವಿ.ದೇಶಿಕಾಚಾರ್–ವೇಣುವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ– ವೃಂದಗಾನ, 12.45 ಕನ್ನಡ ಕರ್ನಾಟಕ–ಮಾತನಾಡುತ್ತಾರೆ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, 1.20 ಭಾವಗೀತೆಗಳು, 3.00 ಹೆಚ್.ಕೆ. ನರಸಿಂಹಮೂರ್ತಿ–ವಯೋಲಿನ್ ವಾದನ, 4.00 ಕಥಾ ಕಾಲಕ್ಷೇಪ–ಭಕ್ತ ಪ್ರಹ್ಲಾದ, ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕೃಷಿಕರಿಗಾಗಿ ಆಯುರ್ವೇದ ಕುರಿತು ಡಾ.ಕೆ.ವಿ.ವೆಂಕಟಕೃಷ್ಣ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್.ಕೇಶವಮೂರ್ತಿ, 9.30 ಅರುಂದತಿ ಸರ್ಕಾರ್–ಹಾಡುಗಾರಿಕೆ, 10.00 ಗಮಕ ವ್ಯಾಖ್ಯಾನ, 10.30 ಸವಿನೆನಪು

ವೀಕ್ಷಕರೂ ಆದ ಸಚಿವ ಭೈರತಿ ಸುರೇಶ್ ಸಮ್ಮುಖದಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಸ್ಪರ್ಧಾಕಾಂಕ್ಷಿಗಳ ಮಾಹಿತಿ ಸಂಗ್ರಹ

● ಗೆಲುವಿನ ಮಾನದಂಡದಲ್ಲಿ ಅಭ್ಯರ್ಥಿ ಆಯ್ಕೆ ● ಯಾವುದೇ ಲಾಬಿಗೆ ಮನ್ನಣೆ ಇಲ್ಲ ● ಮೂರು ಸುತ್ತಿನ ಸರ್ವೆ ನಂತರ ಅಭ್ಯರ್ಥಿಗಳ ಅಂತಿಮ ಪಟ್ಟಿ





ಮೈಸೂರು,ನ.6(ಎಸ್‌ಬಿಡಿ)-ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಚುನಾವಣೆ ತಯಾರಿ ಆರಂಭಿಸಿದೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ಸಂಬಂಧ ವೀಕ್ಷಕರಾದ ನಗರಾಭಿವೃದ್ಧಿ ಸಚಿವ ಭೈರತಿ ಎಸ್.ಸುರೇಶ್ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ನಗರದ ಹೊರವಲಯದ ಖಾಸಗಿ ರೆಸಾರ್ಟ್‌ನಲ್ಲಿ ಸೋಮವಾರ ಸಂಜೆ ಎರಡೂ ಜಿಲ್ಲೆಗಳ ಜನಪ್ರತಿನಿಧಿಗಳು ಹಾಗೂ ಪದಾಧಿಕಾರಿಗಳ ಸಭೆ ನಡೆಸಿ, ಚರ್ಚಿಸಲಾಗಿದೆ.

ಆಕಾಂಕ್ಷಿಗಳ ಮನವಿ: ಮೈಸೂರು-ಕೊಡಗು ಕ್ಷೇತ್ರದ ಅಭ್ಯರ್ಥಿ ಆಯ್ಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಉಭಯ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಸಚಿವರಿಗೆ ವಹಿಸಲು ಇತ್ತೀಚೆಗೆ ಎರಡೂ ಜಿಲ್ಲಾ ಸಮಿತಿಗಳ ಜಂಟಿ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಆದರೂ ಸ್ಪರ್ಧಾಕಾಂಕ್ಷಿಗಳ ಪಟ್ಟಿ ಬೆಳೆಯುತ್ತಲೇ ಇದೆ. ಚುನಾವಣೆ ಉಸ್ತುವಾರಿ ಸಚಿವರ ಮೊದಲ ಸಭೆಯಲ್ಲಿ 10ಕ್ಕೂ ಹೆಚ್ಚು ಸ್ಪರ್ಧಾಕಾಂಕ್ಷಿಗಳು ಅವಕಾಶ ಕೋರಿದ್ದಾರೆ ಎಂದು ತಿಳಿದುಬಂದಿದೆ.

ಮೂರು ಸುತ್ತಿನ ಸರ್ವೆ: ಮುಂದಿನ ಹಂತದಲ್ಲಿ ಆಕಾಂಕ್ಷಿಗಳ ಸಂಬಂಧ ಮೂರು ಸುತ್ತಿನ ಸರ್ವೆ ಮಾಡಿ ಮಾಹಿತಿ ಸಂಗ್ರಹಿಸಿ ಶಿಫಾರಸು ಮಾಡಲು ಸಭೆಯಲ್ಲಿ ನಿರ್ಧರಿಸಲಾಗಿದೆ ಎನ್ನಲಾಗಿದೆ. ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಪ್ರಾಮಾಣಿಕವಾಗಿ ಸಾಮೂಹಿಕ ಹೋರಾಟ ನಡೆಸುವುದು, ಪಕ್ಷದಲ್ಲಿ ಕನಿಷ್ಠ 5 ವರ್ಷದಿಂದ ಶ್ರಮಿಸುತ್ತಿರುವವರ ಪರಿಗಣನೆ ಹಾಗೂ ದೀರ್ಘಕಾಲದಿಂದ ಕೆಲಸ ಮಾಡುತ್ತಿರುವವರಿಗೆ ಆದ್ಯತೆ ನೀಡುವುದು ಸೇರಿದಂತೆ ಮೈಸೂರು-ಕೊಡಗು ಜಿಲ್ಲಾ ಸಮಿತಿಗಳ ಜಂಟಿ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಅಭ್ಯರ್ಥಿ ಆಯ್ಕೆ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದು ಎಂದು ಸಚಿವದ್ವಯರು ತಿಳಿಸಿದ್ದಾಗಿ ಹೇಳಲಾಗಿದೆ.

ವೈಯಕ್ತಿಕ ಅಭಿಪ್ರಾಯ ಸಂಗ್ರಹ: ಸಭೆಯ ನಂತರ ಸಚಿವರಾದ ಭೈರತಿ ಸುರೇಶ್ ಹಾಗೂ ಡಾ.ಹೆಚ್.ಸಿ.ಮಹದೇವಪ್ಪ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ಕ್ಷೇತ್ರಗಳ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಿಂದ ಪ್ರತ್ಯೇಕವಾಗಿ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಆಕಾಂಕ್ಷಿಗಳ ಹಿನ್ನೆಲೆ, ಪಕ್ಷದ ಸಂಘಟನೆಯಲ್ಲಿ ಅವರ ಸೇವೆ, ಅವರ ಬಗ್ಗೆ ಸಾರ್ವಜನಿಕರಲ್ಲಿ ಅಭಿಪ್ರಾಯ ಇನ್ನಿತರ ವಿಚಾರಗಳ ಬಗ್ಗೆ ಮಾಹಿತಿ ಪಡೆದಿದ್ದಾರೆ ಎಂದು ಹೇಳಲಾಗಿದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಕೆ.ಆರ್.ನಗರ ಶಾಸಕ ಡಿ.ರವಿಶಂಕರ್, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಸುನಿತಾ ವೀರಪ್ಪಗೌಡ ಸೇರಿದಂತೆ ಎರಡೂ ಜಿಲ್ಲೆಗಳ ಹಲವು ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.

ಲಾಬಿ ನಡೆಯೋದಿಲ್ಲ

ಉಭಯ ಜಿಲ್ಲೆಗಳ ಕಾಂಗ್ರೆಸ್ ಸಮಿತಿಗಳ ತೀರ್ಮಾನದಂತೆ ಆಕಾಂಕ್ಷಿಗಳ ಸಂಬಂಧ ಕೆಪಿಸಿಸಿಗೆ ವರದಿ ಸಲ್ಲಿಸಿ, ಆಯ್ಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಬೋಸರಾಜ್ ಹಾಗೂ ಕೆ.ವೆಂಕಟೇಶ್ ಅವರಿಗೆ ವಹಿಸಲಾಗುವುದು. ಮಾನದಂಡದಡಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಲಾಗುವುದೇ ಹೊರತು ಯಾವುದೇ ಲಾಬಿ ಅಥವಾ ನಾಯಕರ ಮೂಲಕ ಒತ್ತಡ ಹೇರುವುದನ್ನು ಪರಿಗಣಿಸುವುದಿಲ್ಲ. ಅಂತಿಮವಾಗಿ ಅಭ್ಯರ್ಥಿ ಆಯ್ಕೆ ಸಂಬಂಧ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಬೇಕು ಎಂದು ವೀಕ್ಷಕ ಭೈರತಿ ಸುರೇಶ್, ಸಭೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ತಿಳಿದುಬಂದಿದೆ.

ಕಾಂಗ್ರೆಸ್ ಮೈಸೂರು ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪರಾಭವಗೊಂಡ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಚಾಮರಾಜ ಕ್ಷೇತ್ರದ ಮಾಜಿ ಶಾಸಕ ವಾಸು, ಡಾ.ಸುಶ್ರುತ್‌ಗೌಡ, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮಾಜಿ ಶಾಸಕಿ ಸುನಿತಾ ವೀರಪ್ಪಗೌಡ, ಪಕ್ಷದ ವಕ್ತಾರ ಎಂ.ಲಕ್ಷ್ಮಣ್, ಗುರುಪಾದಸ್ವಾಮಿ, ಗುರುಮಲ್ಲೇಶ್, ಜೆ.ಜೆ.ಆನಂದ್, ಮಾಜಿ ಮೇಯರ್ ಆರಿಫ್ ಹುಸೇನ್, ವರುಣಾ ಮಹೇಶ್ ಸೇರಿದಂತೆ ಎರಡೂ ಜಿಲ್ಲೆಗಳ ಹಲವು ಮುಖಂಡರು ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ ಎನ್ನಲಾಗಿದೆ.

ಉಚಿತ ಭಾಗ್ಯದಿಂದ ಪರಿಶಿಷ್ಟರ ಅಂತ್ಯಕ್ರಿಯೆಗೂ ಸರ್ಕಾರದ ಬಳಿ ದುಡ್ಡಿಲ್ಲ

ತುಮಕೂರು: ರಾಜ್ಯ ಕಾಂಗ್ರೆಸ್ ಸರ್ಕಾರ ಎಷ್ಟರಮಟ್ಟಿಗೆ ದಿವಾಳಿಯಾಗಿದೆ ಅಂದರೆ ಪರಿಶಿಷ್ಟರ ಅಂತ್ಯಸಂಸ್ಕಾರಕ್ಕೆ ಹಣ ಕೊಡಲೂ ಇವರ ಬಳಿ ದುಡ್ಡಿಲ್ಲ. ಅಂತ್ಯಸಂಸ್ಕಾರಕ್ಕಾಗಿ ಕೊಟ್ಟ ಚೆಕ್ ಕೂಡ ಬೌನ್ಸ್ ಆಗಿದೆ



ಇಷ್ಟರ ಮಟ್ಟಿಗೆ ಸಿದ್ದರಾಮಯ್ಯರ ಸರ್ಕಾರ ದಿವಾಳಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ತುಮಕೂರು ಜಿಲ್ಲೆಯ ಬರ ವೀಕ್ಷಣೆ ಮಾಡಿದ ನಂತರ ಮಾತನಾಡಿದ ಅವರು, ಉಚಿತ ಭಾಗ್ಯಗಳನ್ನು ಕೊಟ್ಟು ಸರ್ಕಾರ ದಿವಾಳಿಯ ಅಂಚಿಗೆ ಸಾಗಿದೆ. ಗೃಹ ಸಚಿವ ಪರಮೇಶ್ವರ್ ಕ್ಷೇತ್ರದಲ್ಲಿ ಪರಿಶಿಷ್ಟರ ಅಂತ್ಯಸಂಸ್ಕಾರಕ್ಕೆಂದು ಸರ್ಕಾರದಿಂದ ಕೊಟ್ಟಿದ್ದ ಚೆಕ್ ಕೂಡಾ ಬೌನ್ಸ್ ಆಗಿದ್ದು ನಾಚಿಕೆಗೇಡು ಎಂದು ಕಿಡಿಕಾರಿದ್ದಾರೆ. ಜಿಲ್ಲೆಯಲ್ಲಿ ಇಬ್ಬರು ಸಚಿವರು ಇದ್ದರೂ ಕೈಗಾರಿಕೋದ್ಯಮಿಗಳ ಸಮಸ್ಯೆ ಆಲಿಸಿಲ್ಲ, ಬರ ವೀಕ್ಷಣೆ ಮಾಡಿಲ್ಲ. ಅನಗತ್ಯ ಉಚಿತ ಭಾಗ್ಯ ಕೊಟ್ಟು ಸರ್ಕಾರ ದಿವಾಳಿಯಾಗುತ್ತಿದೆ. ವಿದ್ಯುತ್ ಕಣ್ಣಾಮುಚ್ಚಾಲೆ, ತೆರಿಗೆ ಜಾಸ್ತಿ ಮಾಡಿ ಸಂಕಷ್ಟ ತಂದಿದ್ದಾರೆ ಎಂದು ಹರಿಹಾಯ್ದರು.

7ನೇ ರಾಜ್ಯ ವೇತನ ಆಯೋಗದ ಅವಧಿ ಮಾರ್ಚ್ 15ರವರೆಗೆ ವಿಸ್ತರಣೆ

ಬೆಂಗಳೂರು, ನ.6- 7ನೇ ರಾಜ್ಯ ವೇತನ ಆಯೋಗದ ಕಾಲಾವಧಿ 2024ರ ಮಾರ್ಚ್ 15ರವರೆಗೆ ವಿಸ್ತರಣೆ ಮಾಡಿ ರಾಜ್ಯ ಸರ್ಕಾರ ಸೋಮವಾರ ಆದೇಶ ಹೊರಡಿಸಿದೆ. ವೇತನ ಆಯೋಗ ಸರ್ಕಾರಕ್ಕೆ ವಿವರವಾದ ವರದಿ ಸಲ್ಲಿಸಬೇಕಿದೆ. ಅವಧಿ ವಿಸ್ತರಣೆಗೆ ಸಚಿವಾಲಯ ನೌಕರರ ಸಂಘದಿಂದ ವಿರೋಧ ವ್ಯಕ್ತವಾಗಿದ್ದು, ಹೋರಾಟ ಮಾಡಲಿದ್ದಾರೆ.

ಈ ಹಿಂದೆ ರಾಜ್ಯಪಾಲರ ಆದೇಶದಂತೆ ಮೇ 19ರಿಂದ 6 ತಿಂಗಳ ಕಾಲ ಆಯೋಗದ ಅವಧಿ ವಿಸ್ತರಣೆ ಮಾಡಿ, ಸರ್ಕಾರ ಆದೇಶ ಹೊರಡಿಸಿತ್ತು. ಇದೀಗ ಮತ್ತೆ ಕಾಲಾವಧಿ ವಿಸ್ತರಣೆ ಮಾಡಲಾಗಿದೆ. 2022ರ ನ.19ರಂದು ವೇತನ ಆಯೋಗ ರಚನೆಯಾಗಿತ್ತು. ಆಯೋಗದ ಶಿಫಾರಸ್ಸು ಆಧರಿಸಲು ಮುಂದಿನ ಕ್ರಮ ಕೈಗೊಳ್ಳಲು 2023-24ನೇ ಸಾಲಿನಲ್ಲಿ ಹಣವನ್ನೂ ತೆಗೆದಿಡಲಾಗಿತ್ತು. ಮಾರ್ಚ್ ಒಳಗೆ ಮಧ್ಯಂತರ ವರದಿ ಪಡೆದು ಅವಲೋಕಿಸಿ 2023-24ರಲ್ಲಿಯೇ ಜಾರಿಗೊಳಿಸಲು ಸಿದ್ಧರಿದ್ದೇವೆ ಎಂದು ಈ ಹಿಂದಿನ ಸಿಎಂ ಬಸವರಾಜ ಬೊಮ್ಮಾಯಿ ಹೇಳಿದ್ದರು.

ರಾಜ್ಯ ಸರ್ಕಾರಿ ನೌಕರರ ವೇತನ ಶ್ರೇಣಿಗಳನ್ನು ಪರಿಷ್ಕರಿಸಲು ಮತ್ತು ನೂತನ ವೇತನ ರಚನೆ ಇತ್ಯಾದಿಗಳನ್ನು ರೂಪಿಸಲು ನ.19ರ ಸರ್ಕಾರಿ ಆದೇಶದಲ್ಲಿ 7ನೇ ರಾಜ್ಯ ವೇತನ ಆಯೋಗವನ್ನು ರಚಿಸಲಾಗಿರುತ್ತದೆ.

ಮೇ 15ರಂದು ಸರ್ಕಾರಿ ಆದೇಶದಲ್ಲಿ 7ನೇ ರಾಜ್ಯ ವೇತನ ಆಯೋಗದ ಕಾಲಾವಧಿಯನ್ನು ವಿಸ್ತರಿಸಲಾಗಿದೆ. ಪ್ರಸ್ತುತ 7ನೇ ರಾಜ್ಯ ವೇತನ ಆಯೋಗದ ಕಾಲಾವಧಿ ನ.18ರಂದು ಕೊನೆಗೊಳ್ಳುತ್ತಿದೆ. ಇತ್ತೀಚೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ತುರ್ತು ಕಾರ್ಯಕಾರಿಣಿ ಸಭೆಯಲ್ಲಿ 7ನೇ ವೇತನ ಆಯೋಗದಲ್ಲಿ ಹಳೇ ಪಿಂಚಣಿ ನೀತಿ ಅನುಷ್ಠಾನಕ್ಕೆ ರಾಜ್ಯ ಸರ್ಕಾರಕ್ಕೆ ಫೆಬ್ರವರಿ 22ರಿಂದ 7 ದಿನಗಳ ಗಡುವು ನೀಡಿತ್ತು.

ಒಂದು ವೇಳೆ ಗಡುವಿಗೆ ಸರ್ಕಾರ ಸ್ಪಂದಿಸದಿದ್ದರೆ ಅನಿರ್ದಿಷ್ಟಾವಧಿ ಹೋರಾಟ ನಡೆಸಲಾಗುವುದು ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಷಡಕ್ಷರಿ ಎಚ್ಚರಿಕೆ ನೀಡಿದ್ದರು. ತಮ್ಮ ಬೇಡಿಕೆಯನ್ನು ಈಡೇರಿಸದಿದ್ದರೆ ಮಾರ್ಚ್ 1ರಿಂದಲೇ ಕರ್ತವ್ಯಕ್ಕೆ ಗೈರಾಗಲು ನೌಕರರು ಸಭೆಯಲ್ಲಿ ನಿರ್ಧಾರಿಸಿದ್ದರು.

ಸಭಿಕರ ಮನಸೂರೆಗೊಂಡ ಇದು ನಾಟಕವಲ್ಲ ಬದುಕು



ಮೈಸೂರು, ನ.6 (ಎಸ್‌ಪಿಎನ್)- ಉದ್ಯೋಗಕ್ಕೆ ಅರ್ಜಿ ಹಾಕಿ, ಕೆಲಸ ಸಿಗದೇ ನಿರುದ್ಯೋಗ ಸಮಸ್ಯೆಯಲ್ಲಿ ತೊಳಲಾಡುವ ನಿರುದ್ಯೋಗಿ ಯುವಕರು ಕೃಷಿ, ಕೌಶಲ್ಯಾಧರಿತ ಕೆಲಸದಲ್ಲಿ ತೊಡಗಿಕೊಳ್ಳುವಂತೆ ಪ್ರೋತ್ಸಾಹಿಸುವ 'ಇದು ನಾಟಕವಲ್ಲ ಬದುಕು' ನಾಟಕ ಇತ್ತೀಚೆಗೆ ಪ್ರದರ್ಶನಗೊಂಡು ಸಭಿಕರ ಮನಸೂರೆಗೊಂಡಿತು.

ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಲೀಡ್ ಟ್ರೈನಿಂಗ್ ಅಂಡ್ ಸಲ್ಯೂಷನ್ಸ್ ವತಿಯಿಂದ ಪ್ರದರ್ಶನಗೊಂಡ ಲೇಖಕಿ ಶ್ರೀವಿದ್ಯಾ ರಚಿತ 'ಇದು ನಾಟಕವಲ್ಲ ಬದುಕು' ನಾಟಕ ಪ್ರದರ್ಶನ ಹಾಗೂ 16 ಮಂದಿ ಸ್ವಯಂ ಉದ್ಯೋಗದಡಿ ತರಬೇತಿ ಪಡೆದವರಿಗೆ ಡಿಆರ್‌ಸಿ ಸಿನಿಮಾ ಮಂದಿರದ ವೈಶಾಲಿ ಹನುಮಂತ ಅವರು ಪ್ರಮಾಣ ಪತ್ರವನ್ನು ನೀಡಿ ಗೌರವಿಸಿದರು.

ನಂತರ ಮಾತನಾಡಿದ ಅವರು, ಸ್ಪರ್ಧಾತ್ಮಕ ಜಗತ್ತಿನಲ್ಲಿ ಸ್ವಯಂ ಉದ್ಯೋಗದಡಿ ಕೆಲಸ ನಿರ್ವಹಿಸುವುದು ಸಂತೋಷದ ಸಂಗತಿ. ಆದರೆ, ಈ ಹಾದಿ ಕಠಿಣವಾಗಿದ್ದು, ಇದರಲ್ಲಿ ಯಶಸ್ವಿಯಾಗಲು ನಿಷ್ಠೆ, ಸಮಯ ಪ್ರಜ್ಞೆ, ತಾವು ನಂಬಿರುವ ಸಿದ್ಧಾಂತಗಳಲ್ಲಿ ರಾಜಿಯಾಗದಂತೆ ಕಿವಿಮಾತು ಹೇಳಿದರಲ್ಲದೆ, ಲೇಖಕಿ ಶ್ರೀ ವಿದ್ಯಾ ರಚಿತ 'ಇದು ನಾಟಕವಲ್ಲ ಬದುಕು' ಸತ್ಯ ಕಥೆ ಆಧಾರಿತ ನಾಟಕವಾಗಿದ್ದು, ಈ ನಾಟಕ ಇತರೆ ಯುವಕ, ಯುವತಿಯರಿಗೆ ಸ್ಫೂರ್ತಿಯಾಗುತ್ತದೆ ಎಂದರು.

ನಂತರ ಫ್ಯಾಷನ್ ವಿನ್ಯಾಸಕಿ ಜಯಂತಿ ಬಲ್ಲಾಳ್ ಮಾತನಾಡಿ, ಸ್ವಯಂ ಉದ್ಯೋಗದಡಿ ತರಬೇತಿ ಪಡೆದು ಕೆಲಸದಲ್ಲಿ ತೊಡಗಿಸಿಕೊಂಡವರಿಗೆ ಆತ್ಮ ವಿಶ್ವಾಸ ಅತೀ ಮುಖ್ಯ. ಈ ಕ್ಷೇತ್ರದಲ್ಲಿ ಸಮಾಜದ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದರೂ ತಮ್ಮ ಕೆಲಸದಲ್ಲಿ ಆಸಕ್ತಿ ಕಳೆದುಕೊಳ್ಳದಂತೆ ಕಿವಿಮಾತು ಹೇಳಿದರು.

ಈ ವೇಳೆ ಮಂಜುನಾಥ್, ಶೋಭ, ಶಾಲಿನಿ, ಚೂಡಾಮಣಿ, ಉಷಾ, ಆಶಾ, ಶಿಲ್ಪ, ಶಂಕರ್, ಸಾವಿತ್ರಿ, ಗೀತಾ, ತೇಜಸ್ವಿನಿ ದಿಕ್ಷಿತ್, ಸುನಿತಾ ಪ್ರಕಾಶ ಸೇರಿದಂತೆ ಇತರರಿಗೆ ಪ್ರಮಾಣ ಪತ್ರ ವಿತರಿಸಲಾಯಿತು. ಈ ವೇಳೆ ಪ್ರದರ್ಶನಗೊಂಡ 'ಇದು ನಾಟಕವಲ್ಲ ಬದುಕು' ನಾಟಕದ ನೈಪಥ್ಯದಲ್ಲಿ ರಂಗ ರೂಪ ಶ್ರೀ ವಿದ್ಯಾ ಕಾಮತ್, ಸಂಗೀತ-ದಿಗ್ವಿಜಯ ಹೆಗ್ಗೋಡು, ಬೆಳಕು- ಮಧುಸೂದನ್ ಅಯ್ಯಂಗಾರ್, ಸಲಹೆ ಮತ್ತು ಸಹಕಾರ ಎಸ್.ರಾಮನಾಥ್ ನೀಡಿದ್ದಾರೆ.

ಕರ್ನಾಟಕ ಸುಳ್ಳಿನ ಕಂತೆ ಸರ್ಕಾರ: ಆರೋಪಗಳಿಗೆ ಸಾಕ್ಷ್ಯ ನೀಡಲಿ

ಪ್ರಧಾನಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು

ಬೆಂಗಳೂರು: ಕರ್ನಾಟಕದಲ್ಲಿರುವುದು ಸುಳ್ಳಿನ ಕಂತೆ ಸರ್ಕಾರ ಎಂಬ ಪ್ರಧಾನಿ ನರೇಂದ್ರ ಮೋದಿಯವರ ಆರೋಪಗಳನ್ನು ತಿರಸ್ಕರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಧಾನಿಯಿಂದ ಇಂತಹ ಮಾತನ್ನು ನಿರೀಕ್ಷಿಸಿರಲಿಲ್ಲ, ಅಂತಹ ಮಾತುಗಳಿಗೆ ಸಾಕ್ಷ್ಯಾಧಾರ ನೀಡಲಿ ಎಂದು ಸೋಮವಾರ ಆಗ್ರಹಿಸಿದ್ದಾರೆ.



ಭಾನುವಾರ ಮಧ್ಯಪ್ರದೇಶದ ಖಾಂಡ್ವಾದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಮೋದಿ, ಕಾಂಗ್ರೆಸ್ ಕರ್ನಾಟಕವನ್ನು ಹಾಳು ಮಾಡಿದೆ. ರಾಜ್ಯದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದೆ ಎಂದು ಹೇಳಿದ್ದರು. ಅಲ್ಲದೇ ತಾನೆಷ್ಟು ದಿನ ಸಿಎಂ ಎಂಬುದು ಸಿದ್ದುಗೇ ಗೊತ್ತಿಲ್ಲ ಎಂದು ಅವರು ಅನುಮಾನ ವ್ಯಕ್ತಪಡಿಸಿದರು.

ಕಾಂಗ್ರೆಸ್ ಸರ್ಕಾರ ಇರುವ ಕಡೆಗಳಲ್ಲಿ ಭ್ರಷ್ಟಾಚಾರ, ಆಂತರಿಕ ಕಚ್ಚಾಟ ಮತ್ತು ರಾಜ್ಯಗಳನ್ನು ಹಾಳು ಮಾಡುತ್ತಿದೆ. ಆ ರಾಜ್ಯಗಳಲ್ಲಿ ಮುಖ್ಯಮಂತ್ರಿ ಮತ್ತು ಅವರ ಉಪಮುಖ್ಯಮಂತ್ರಿಗಳ ನಡುವೆ ಲೂಟಿಗಾಗಿ ಪೈಪೋಟಿ ನಡೆಯುತ್ತಿದೆ ಎಂದು ಆರೋಪಿಸಿದರು. ಇಂತಹ ಹೇಳಿಕೆ ಸುಳ್ಳಿನ ರಾಜಕೀಯ ಮತ್ತು ಚುನಾವಣಾ ಭಾಷಣ ಎಂದು ಸಿಎಂ ಸಿದ್ದರಾಮಯ್ಯ ಹೇಳುವ ಮೂಲಕ ಪ್ರಧಾನಿಗೆ ತಿರುಗೇಟು ನೀಡಿದ್ದಾರೆ.

ಪ್ರಧಾನಿ ಅವರ ಆರೋಪ ಸಂಪೂರ್ಣ ಸುಳ್ಳು. ಮೇ ತಿಂಗಳಲ್ಲಿ ನಡೆದ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಸೋತ ನಂತರ ಪ್ರಧಾನಿ ಹತಾಶರಾಗಿದ್ದಾರೆ. ಅವರು 48 ಬಾರಿ ರಾಜ್ಯಕ್ಕೆ ಬಂದರು, ಆದರೆ ಅವರು ಪ್ರಚಾರಕ್ಕೆ ಹೋದಲ್ಲೆಲ್ಲಾ, ಬಿಜೆಪಿ ಸೋತಿದೆ. ಅದಕ್ಕಾಗಿಯೇ ಇಂದಿನವರೆಗೂ ವಿರೋಧ ಪಕ್ಷದ ನಾಯಕನನ್ನು ನೇಮಿಸಿಲ್ಲ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಕಾಂಗ್ರೆಸ್ ನಾಯಕರು ಲೂಟಿ ಮಾಡಿದ್ದಾರೆ ಎಂಬ ಪ್ರಧಾನಿಯವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಕರ್ನಾಟಕದಲ್ಲಿ 40 ಪರ್ಸೆಂಟ್ ಕಮಿಷನ್ ಲೂಟಿ ನಡೆದಾಗ ಯಾವ ಪಕ್ಷದ ಸರ್ಕಾರ ಅಧಿಕಾರದಲ್ಲಿತ್ತು? ನಾವು ಅದನ್ನು ತನಿಖೆ ಮಾಡುತ್ತಿದ್ದೇವೆ. ಪ್ರಧಾನಿಯಾಗಿ ನರೇಂದ್ರ ಮೋದಿ ಅದರ ಬಗ್ಗೆ ಸರಿಯಾಗಿ ಮಾತನಾಡಬೇಕು, ಸಾಕ್ಷ್ಯಾಧಾರಗಳು ಅಥವಾ ದಾಖಲೆಗಳಿದ್ದರೆ ಆರೋಪ ಮಾಡಬಹುದು, ಅವರು ಸುಳ್ಳು ಮಾತನಾಡಬಾರದು, ಹಗುರವಾಗಿ ಮಾತನಾಡಬಾರದು. "ಯಾವುದೇ ಪುರಾವೆಗಳು ಅಥವಾ ದಾಖಲೆಗಳಿದ್ದರೆ IB, RAW, CBI, ಗುಪ್ತಚರ ಸಂಸ್ಥೆಗಳಿಗೆ ನೀಡಲಿ ಎಂದರು.

ದೇಶದ ಪ್ರಧಾನಿಯಿಂದ ಈ ರೀತಿಯ ಹೇಳಿಕೆಯನ್ನು ನಾನು ಎಂದಿಗೂ ನಿರೀಕ್ಷಿಸಿರಲಿಲ್ಲ. ಇದು ಅವರಿಗೆ ಸರಿಹೊಂದುವುದಿಲ್ಲ ಎಂದ ಸಿದ್ದರಾಮಯ್ಯ, ಕರ್ನಾಟಕದ ಬಗ್ಗೆ ಕೇಂದ್ರ ಸರ್ಕಾರ "ಮಲತಾಯಿ ಧೋರಣೆ" ಹೊಂದಿದೆ. ರಾಜ್ಯಕ್ಕೆ ನೀಡಬೇಕಾದ ಹಣವನ್ನು ನೀಡಲು ಸಾಧ್ಯವಾಗುತ್ತಿಲ್ಲ. ಬರ ಪರಿಹಾರ ಹಣ ಬಿಡುಗಡೆ ಮಾಡಲು ಕೇಂದ್ರ ಸರಕಾರಕ್ಕೆ ಇನ್ನೂ ಸಾಧ್ಯವಾಗಿಲ್ಲ ಎಂದು ಆರೋಪಿಸಿದರು.

ದೇಶದ ಭವಿಷ್ಯದ ದೃಷ್ಟಿಯಿಂದ ಮೋದಿ ಅಧಿಕಾರದಲ್ಲಿ ಮತ್ತೆ ಮುಂದುವರೆಯುವಂತೆ ನೋಡಿಕೊಳ್ಳಬೇಕಿದೆ

● ಬಿಜೆಪಿ ಕಾರ್ಯಕರ್ತರಿಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕಿವಿಮಾತು ● ವಿಧಾನಸಭಾ ಚುನಾವಣಾ ಸೋಲಿನ ಕಹಿ ಘಟನೆ ಮರೆತು ಕೆಲಸ ಮಾಡಿ ● ಗ್ಯಾರಂಟಿಯ ದುರ್ಗತಿಯನ್ನು ಜನರಿಗೆ ಮನವರಿಕೆ ಮಾಡಿಕೊಡುವಂತೆ ಸಲಹೆ



ಮೈಸೂರು, ನ.6(ಎಸ್‌ಪಿಎನ್)- ಮೈಸೂರು-ಕೊಡಗು, ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಗಳೇ ಮತ್ತೆ ಆಯ್ಕೆಯಾಗುವಂತೆ ನೋಡಿಕೊಳ್ಳುವುದು ನಮ್ಮ-ನಿಮ್ಮೆಲ್ಲರ ಜವಾಬ್ದಾರಿ ಎಂದು ಕರ್ನಾಟಕ ಹಿಂದುತ್ವದ ಫೈರ್ ಬ್ರಾಂಡ್ ಬಸನಗೌಡ ಪಾಟೀಲ್ ಯತ್ನಾಳ್ ಕಾರ್ಯಕರ್ತರಿಗೆ ಕರೆ ನೀಡಿದರು.

ಮೈಸೂರು ಚಾಮರಾಜಪುರಂನ ಭಾರತೀಯ ಜನತಾ ಪಾರ್ಟಿ ಕಚೇರಿಯಲ್ಲಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಯತ್ನಾಳ್, 2023ರ ವಿಧಾನಸಭೆ ಚುನಾವಣೆ ಸೋಲಿನ ಕಹಿ ಘಟನೆಯನ್ನು ಕಾರ್ಯಕರ್ತರು ಮರೆಯಬೇಕು. ಕರ್ನಾಟಕದಿಂದ 25ಕ್ಕೂ ಹೆಚ್ಚು ಸಂಸದರನ್ನು 2024ರ ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸಿ, ಮತ್ತೆ ಪ್ರಧಾನಿ ನರೇಂದ್ರ ಮೋದಿ ಅಧಿಕಾರದಲ್ಲಿ ಮುಂದುವರೆಯುವಂತೆ ನೋಡಿಕೊಳ್ಳುವುದು ದೇಶದ ಭವಿಷ್ಯದ ದೃಷ್ಟಿಯಿಂದ ಅನಿವಾರ್ಯವಾಗಿದೆ ಎಂದರು.

ಸರ್ಕಾರಿ ನೌಕರರಿಗೂ ವೇತನಕ್ಕೆ ಹಣವಿಲ್ಲ: ಚುನಾವಣೆಯಲ್ಲಿ 5 ಗ್ಯಾರಂಟಿ ಯೋಜನೆಗಳ ಆಸೆಗಾಗಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದ ಕರ್ನಾಟಕ ಮತದಾರರು ಈಗ ಚಿಂತಿಸುವಂತೆ ಮಾಡಿದೆ. ಗೃಹ ಜ್ಯೋತಿ ಯೋಜನೆ ಜಾರಿಗೆ ತಂದ ಫಲವಾಗಿ ಇಡೀ ರಾಜ್ಯದ ಜನರು ಕತ್ತಲಲ್ಲಿ ಕಾಲ ಕಳೆಯುವಂತಾಗಿದೆ. ಗೃಹಲಕ್ಷ್ಮೀ ಹಣ ಎಷ್ಟೋ ಫಲಾನುಭವಿಗಳ ಕೈ ಸೇರಿಲ್ಲ. ಅಭಿವೃದ್ಧಿ ಕಾರ್ಯ ನಿಂತು ಹೋಗಿವೆ. ಅಲ್ಲದೆ, ಆರ್ಥಿಕ ಇಲಾಖೆ ಅಧಿಕಾರಿಯೊಬ್ಬರ ಮಾಹಿತಿ ಪ್ರಕಾರ ಪರಿಸ್ಥಿತಿ ಹೀಗೆ ಮುಂದುವರೆದರೆ ಜನವರಿಯಿಂದ ಸರ್ಕಾರಿ ನೌಕರರಿಗೆ ಸಂಬಳ ನೀಡಲೂ ದುಡ್ಡಿಲ್ಲವಂತೆ. ಕೆಎಸ್‌ಆರ್‌ಟಿಸಿ ನೌಕರರ ಇದಕ್ಕಿಂತ ಭಿನ್ನವಲ್ಲ ಎಂದರು.

ಇತ್ತ ಗ್ಯಾರಂಟಿ ಯೋಜನೆಗಳೂ ಜನರ ಕೈ ಸೇರುತ್ತಿಲ್ಲ. ಅತ್ತ ರಾಜ್ಯದ ಅಭಿವೃದ್ಧಿಯೂ ಕುಂಠಿತವಾಗಿದೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧಿಕಾರದ ಅಸ್ಥಿರತೆಗೆ ಕಾರಣವಾಗಿದೆ. ಲೋಕಸಭಾ ಚುನಾವಣೆ ನಂತರ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಉಳಿಯುತ್ತಾರೋ ಇಲ್ಲವೋ ತಿಳಿಯದು. ಹಾಗಾಗಿಯೇ ಒಬ್ಬೊಬ್ಬ ಶಾಸಕರು ಡಿಸಿಎಂ ಡಿ.ಕೆ.ಶಿವಕುಮಾರ್, ಮುಂದೆ ಮುಖ್ಯಮಂತ್ರಿಯಾಗುತ್ತಾರೆ ಎಂದು ಮಾಧ್ಯಮಗಳ ಮುಂದೆ ಹೇಳಿಕೆ ನೀಡುತ್ತಿರುವುದೇ ಸಾಕ್ಷಿ ಎಂದರು.

'ಹಮಾಸ್' ಬೆಂಬಲಿಗರಿದ್ದಾರೆ: ಅಂತರರಾಷ್ಟ್ರೀಯ ಮಟ್ಟದಲ್ಲಿ ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವಿನ ಕದನಕ್ಕೆ ವಿರಾಮ ಇಲ್ಲದಂತಾಗಿದೆ. 2024ರ ಚುನಾವಣೆಯಲ್ಲಿ ಐ.ಎನ್.ಡಿ.ಐ.ಎ(ಇಂಡಿಯಾ) ಮೈತ್ರಿ ಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ, ಇಸ್ರೇಲ್ ನಾಗರಿಕರ ಪರಿಸ್ಥಿತಿ ನಮಗೂ ಬರಲಿದೆ. ಇದನ್ನು ಮನದಲ್ಲಿಟ್ಟುಕೊಂಡು ಬಿಜೆಪಿ ಕಾರ್ಯಕರ್ತರು ಬೀದಿಗಿಳಿದು ಬಿಜೆಪಿ ಪರ ಕೆಲಸ ಮಾಡಬೇಕು. ಮತದಾರರು ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟರೆ ನೀವು ನಿಮ್ಮ ಮನೆ ಮಗಳ ಸುರಕ್ಷತೆ, ದೇಶದ ಭವಿಷ್ಯ, ಇಸ್ರೇಲ್ ನಾಗರಿಕರ ರೀತಿ ಭಾರತೀಯರು ಬೀದಿಗೆ ಬರದಂತೆ ತಡೆಯುವುದೇ ನಮ್ಮ ಗ್ಯಾರಂಟಿ ಎಂದು ತಿಳಿಸಿ ಎಂದು ಮತದಾರರಿಗೆ ಮನವರಿಕೆ ಮಾಡಿಕೊಡುವಂತೆ ತಿಳಿಸಿದರು.

ವೀರಶೈವ-ಲಿಂಗಾಯತರೂ ಹಿಂದೂಗಳೇ: ಹಿಂದೂ ಧರ್ಮದನ್ವಯ ವೀರಶೈವ ಲಿಂಗಾಯತರು ಜೀವನ ನಡೆಸುತ್ತಿದ್ದೇವೆ. ಆದರೆ, ಇತ್ತೀಚೆಗೆ ಸ್ವಾಮೀಜಿಯೊಬ್ಬರು ಗಣೇಶ ಹಬ್ಬ ಲಿಂಗಾಯತರ ಸಂಸ್ಕೃತಿ ಅಲ್ಲ ಎಂದಿದ್ದಾರೆ. ಅವರಿಗೆ ಗಣೇಶ ಹಬ್ಬ ಸಾರ್ವಜನಿಕ ಆಚರಣೆ ಹೇಗೆ ಬಂತು ಎಂಬುದನ್ನು ತಿಳಿಸಬೇಕು. ಕೆಲವರು ಮುಂದಿನ ಬಾರಿಯಾದರೂ ರಾಜ್ಯೋತ್ಸವ ಪ್ರಶಸ್ತಿ ಕೊಡಲಿ ಎಂದು ಸಿದ್ದರಾಮಯ್ಯ ಅವರನ್ನು ಓಲೈಸಲು ಹಿಂದೂ ವಿರೋಧಿ ಹೇಳಿಕೆ ನೀಡುತ್ತಿದ್ದಾರೆ. ಇದು ದುರ್ದೈವದ ಸಂಗತಿ ಎಂದು ಯತ್ನಾಳ್ ಕಿಡಿಕಾರಿದರು.

ತಮ್ಮ ಗೆಲುವಿನ ಗುಟ್ಟು ಬಿಚ್ಚಿಟ್ಟ ಯತ್ನಾಳ್: ವಿಜಯಪುರ ಮತ ಕ್ಷೇತ್ರದಲ್ಲಿ 2 ಲಕ್ಷ 70 ಮತದಾರರಿದ್ದಾರೆ. ಅದರಲ್ಲಿ ಹಿಂದೂಗಳ ಸಂಖ್ಯೆ 1.60 ಲಕ್ಷ ಇದ್ದಾರೆ. ಅಲ್ಪಸಂಖ್ಯಾತರ ಮತಗಳು 1.10 ಲಕ್ಷ ಇವೆ. ಈ ಬಾರಿ ನಮ್ಮ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಲು ಮುಂದಾಗ ಪ್ರಚಾರ ವೇಳೆ ಮತದಾರರಿಗೆ ನಾನು ಹೇಳಿದ್ದು, ನಿಮ್ಮ ಸುರಕ್ಷತೆ ಬೇಕಿಲ್ಲದಿದ್ದರೆ ಕಾಂಗ್ರೆಸ್ ಅಭ್ಯರ್ಥಿಯನ್ನೇ ಗೆಲ್ಲಿಸಿಕೊಳ್ಳಿ ಎಂದು ಧೈರ್ಯವಾಗಿ ಹೇಳಿದೆ. ಅವರಿಗೆ ಸತ್ಯದ ಅರಿವಾಗಿದೆ ಬಿಜೆಪಿಗೆ ಮತದ ನೀಡಿದ ಪ್ರಸಂಗವನ್ನು ಮೈಸೂರು ಬಿಜೆಪಿ ಕಾರ್ಯಕರ್ತರಿಗೆ ತಮ್ಮ ಗೆಲುವಿನ ಗುಟ್ಟನ್ನು ಬಿಚ್ಚಿಟ್ಟರು. ಈ ವೇಳೆ ಶಾಸಕ ಶ್ರೀವತ್ಸ, ಮಾಜಿ ಸಚಿವ ಎನ್.ಮಹೇಶ್, ಮೈಸೂರು ಗ್ರಾಮಾಂತರ ಘಟಕದ ಅಧ್ಯಕ್ಷೆ ಮಂಗಳ ಸೋಮಶೇಖರ್, ಮಾಜಿ ಶಾಸಕರಾದ ನಿರಂಜನಕುಮಾರ್, ಹರ್ಷವರ್ಧನ್, ಬಿಜೆಪಿ ಮುಖಂಡ ಸೋಮಸುಂದರ್, ಗಿರಿಧರ್, ಗ್ರಾಮಾಂತರ ಘಟಕದ ಸಹ ಮಾಧ್ಯಮ ವಕ್ತಾರ ವಸಂತಕುಮಾರ್, ಕೇಬಲ್ ಮಹೇಶ್ ಸೇರಿದಂತೆ ಇತರರಿದ್ದರು.

ಇಂದು ಜಿಲ್ಲೆಯಲ್ಲಿ ಬರ ಅಧ್ಯಯನ

ಪಿರಿಯಾಪಟ್ಟಣ, ಹುಣಸೂರು ವ್ಯಾಪ್ತಿಯ ರೈತರನ್ನು ನಾಳೆ(ನ.7) ಭೇಟಿಯಾಗಿ ಬರ ಅಧ್ಯಯನ ನಡೆಸುತ್ತೇವೆ. ಅಲ್ಲದೆ, ಈ ಭಾಗದಲ್ಲಿ ಸಾಲಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಮನೆಗೆ ಭೇಟಿ ನೀಡಿ, ಆ ಕುಟುಂಬಸ್ಥರಿಗೆ ಸಾಂತ್ವನ ಹೇಳಿ, ಪಕ್ಷದಿಂದ ಆರ್ಥಿಕ ಸಹಾಯ ನೀಡಿ ಬರುತ್ತೇವೆ. **-ಬಸವನಗೌಡ ಯತ್ನಾಳ್**

ಗ್ಯಾರಂಟಿಯಿಂದಾಗಿ ರೈತರ ಜೀವನ ಅಧೋಗತಿ

ಗ್ರಾಮೀಣ ಪ್ರದೇಶದಲ್ಲಿ ನಿರಂತರ ವಿದ್ಯುತ್ ಸರಬರಾಜು ಇಲ್ಲದೆ, ಬೆಳೆ ಒಣಗಿ ಹೋಗಿವೆ. ಮೈತುಂಬಾ ಸಾಲ ಮಾಡಿಕೊಂಡಿದ್ದಾರೆ. ಕುಟುಂಬ ನಿರ್ವಹಣೆಗೆ ಹಣವಿಲ್ಲದೆ ರೈತ ದಿವಾಳಿಯಾಗಿದ್ದಾನೆ. ಗ್ಯಾರಂಟಿ ನಂಬಿ ಗ್ರಾಮೀಣ ಜನರ ಬದುಕು ಬೀದಿಗೆ ಬಂದಿದೆ. ನಾವು ಕಾಂಗ್ರೆಸ್ ಗ್ಯಾರಂಟಿ ನಂಬಿ ಮತ ಹಾಕಬಾರದಿತ್ತು ಎಂದು ರೈತರು ಹಲುಬುತ್ತಿದ್ದಾರೆ. ಮುಂದೆ ಈ ತಪ್ಪು ಮಾಡಬೇಡಿ ಎಂದು ಗ್ರಾಮೀಣ ಜನರಿಗೆ ಬರ ಅಧ್ಯಯನ ಸಂದರ್ಭದಲ್ಲಿ ಮನವಿ ಮಾಡುತ್ತಿದ್ದೇವೆ ಎಂದರು.

ಮೋದಿ ಮತ್ತೊಮ್ಮೆ ಏಕೆ ಅಧಿಕಾರಕ್ಕೆ ಬರಬೇಕು?

ಕಳೆದ 35 ವರ್ಷಗಳ ಕಾಲ ಕೇಂದ್ರದಲ್ಲಿ ಅಸ್ಥಿರ ಸರ್ಕಾರ ಅಧಿಕಾರ ನಡೆಸಿದ ಪರಿಣಾಮ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ಪರಿಸ್ಥಿತಿ ಹೇಗಿತ್ತು. ಈಗ ಹೇಗಿದೆ ಎಂದು ನಾವು ಕಣ್ಣಾರೆ ಕಂಡಿದ್ದೇವೆ. ಪಕ್ಕದ ಪಾಕಿಸ್ತಾನದ ಜನತೆ ತುತ್ತು ಅನ್ನ ಸಿಗದೇ ಬೇರೆ ಬೇರೆ ದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಅಂತೆಯೇ ಭಾರತದಲ್ಲಿ ಮತ್ತೊಮ್ಮೆ ಮೋದಿ ಅಧಿಕಾರಕ್ಕೆ ಬರದಂತೆ ತಡೆಯಲು ಅಂತರರಾಷ್ಟ್ರೀಯ ಮಟ್ಟದಲ್ಲೂ ಪಿತೂರಿ ನಡೆಯುತ್ತಿದೆ. ಹಾಗಾಗಿ ನಮ್ಮ-ನಿಮ್ಮೆಲ್ಲರ ಸುರಕ್ಷತೆಗಾಗಿ 2024ರ ಚುನಾವಣೆಯಲ್ಲಿ ಮತ್ತೊಮ್ಮೆ ಮೋದಿ ಅಧಿಕಾರಕ್ಕೆ ಬರಲೇಬೇಕು ಎಂದು ಮೈಸೂರು, ಚಾಮರಾಜನಗರ ಮತ್ತು ಕೊಡಗು ಮತದಾರರಿಗೆ ಮನವರಿಕೆ ಮಾಡಿಕೊಡುವಂತೆ ಸಲಹೆ ನೀಡಿದರು.

ಸಚಿವ ಪ್ರಿಯಾಂಕ ಖರ್ಗೆ, ಮೈಸೂರಲ್ಲಿ ಜೆಡಿಎಸ್ ಪೀಪಲ್ ಲೆಸ್ ಪಾರ್ಟಿ, ಬಿಜೆಪಿ ಲೀಡರ್ ಲೆಸ್ ಪಾರ್ಟಿ ಎಂದು ಕುಹಕವಾಡಿದ್ದಾರೆ. ನಮ್ಮದು ಲೀಡರ್ ಲೆಸ್ ಪಾರ್ಟಿಯಾದರೆ, ಅವರದು ಶೇಮ್ ಲೆಸ್ ಪಾರ್ಟಿ. -ಬಸನಗೌಡ ಪಾಟೀಲ್ ಯತ್ನಾಳ್, ಶಾಸಕ

ಹಿಂದೂಗಳ ರಕ್ಷಣೆಗಾಗಿ ಬಿಜೆಪಿ ಗೆಲ್ಲಬೇಕು

ಈಗಾಗಲೇ ಓರ್ವ ಸ್ವಾಮೀಜಿಗೆ ರಾಜ್ಯೋತ್ಸವ ಪ್ರಶಸ್ತಿ, ಮುಂದೆ ಜೀವನ ವೆಚ್ಚ ಎಲ್ಲವನ್ನೂ ಕೊಡುತ್ತಾರೆ. ಅಲ್ಲದೆ, ಹಿಂದೂ ಧರ್ಮದ ವಿರುದ್ಧ ಮಾತನಾಡಲು ಪೇಯ್ಡ್ ಸಾಹಿತಿಗಳಿದ್ದಾರೆ. ಭಗವಾಧ್ವಜ ಹಾಕಿಕೊಂಡು ದುಡ್ಡು ಪಡೆಯುವ ಕಳ್ಳರಿದ್ದಾರೆ. ಅಲ್ಲದೆ, ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಮಗನೇ ಸನಾತನ ಧರ್ಮ ನಾಶದ ಬಗ್ಗೆ ಮಾತನಾಡುತ್ತಾನೆ. ಮಹಾರಾಷ್ಟ್ರದಲ್ಲಿ ಶಾಸಕನೋರ್ವ ಹಿಂದೂ ಧರ್ಮ ನಾಶದ ಕುರಿತು ಮಾತನಾಡುತ್ತಾನೆ. ಹೀಗೆ ರಾಜಕಾರಣಿಗಳು ಹಿಂದೂಗಳ ಸರ್ವನಾಶದ ಬಗ್ಗೆ ಮಾತನಾಡಿದರೆ, ಮುಂದಿನ ದಿನಗಳಲ್ಲಿ ಹಿಂದೂಗಳ ಭವಿಷ್ಯದ ಗತಿಯೇನು ಎಂದು ಪ್ರಶ್ನಿಸಿದರು.

ಭಾರತದಲ್ಲಿ ಹಿಂದೂ ಧರ್ಮದ ಪರಿಸ್ಥಿತಿ ಶೋಚನೀಯವಾಗಿದೆ. ಅದರಲ್ಲೂ ಬಿಜೆಪಿಯೇತರ ರಾಜ್ಯಗಳಲ್ಲಿ ಮತ್ತಷ್ಟು ಶೋಚನೀಯವಾಗಿದೆ. ಮುಂದೆ ಇಂಡಿಯಾ ಮೈತ್ರಿಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ, ನಿಮ್ಮ ಭವಿಷ್ಯ ಹೀಗೆ ಇರುತ್ತದೆ ಎಂದು ಯಾರೂ ಗ್ಯಾರಂಟಿ ಕೊಡಲ್ಲ. ಕರ್ನಾಟಕದಲ್ಲಿ ಗ್ಯಾರಂಟಿ ಯೋಜನೆಗಳ ಫಲ ನೋಡುತ್ತಿದ್ದೀರಿ. ಹಾಗಾಗಿ ಲೋಕಸಭಾ ಚುನಾವಣೆಯಲ್ಲಿ ಮೈಮರೆಯದೇ ಮತದಾರರನ್ನು ಓಲೈಸುವ ಕೆಲಸವನ್ನು ಕಾರ್ಯಕರ್ತರು ಈಗಿನಿಂದಲೇ ಮಾಡಬೇಕು ಎಂದು ತಿಳಿಸಿದರು.

ಕೃಷ್ಣೇಗೌಡ ನಿಧನ



ಪಾಂಡವಪುರ, ನ.6- ತಾಲೂಕಿನ ಕಟ್ಟೇರಿ ಗ್ರಾಮದ ನಿವಾಸಿ ಕೃಷ್ಣೇಗೌಡ(70) ಅವರು ಸೋಮವಾರ ಸಂಜೆ ಸ್ವಗೃಹದಲ್ಲಿ ನಿಧನರಾದರು. ಇವರು ಪತ್ನಿ ಇಂದಿರಾ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮದ ಜಮೀನಿನಲ್ಲಿ ಮೃತರ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

MAHAN

Apollo HOSPITALS

ಅಪೋಲೊ ಬಿಜಿಎಸ್ ಆಸ್ಪತ್ರೆ, ಮೈಸೂರು
ಸಹಯೋಗದಲ್ಲಿ
ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ (AIISH)
ಪ್ರಸ್ತುತಪಡಿಸುತ್ತಿರುವ

ಆಟಿಸಮ್ ಅರಿವು ಕಾರ್ಯಕ್ರಮ

ಆಟಿಸಮ್ ಹೊಂದಿರುವ ಮಕ್ಕಳೊಂದಿಗೆ ಇರುವ ಪೋಷಕರು ಮತ್ತು ಮಕ್ಕಳ ಆರೈಕೆ ಮಾಡುವವರು ಕಾರ್ಯಕ್ರಮದಲ್ಲಿ ಭಾಗವಹಿಸಬಹುದು

ಕಾರ್ಯಕ್ರಮದ ಮುಖ್ಯಾಂಶಗಳು

» ಆಟಿಸಮ್ ಹೊಂದಿರುವ ಮಕ್ಕಳ ದೈನಂದಿನ ಜೀವನದ ಸವಾಲುಗಳನ್ನು ಎದುರಿಸಲು ಪ್ರಾಯೋಗಿಕ ಉಪಾಯಗಳು.
» ಸೂಕ್ತ ಪುನಶ್ಚೇತನ ಕಾರ್ಯತಂತ್ರಗಳ ಕುರಿತು ಮಾರ್ಗದರ್ಶನ ಮತ್ತು ಭರವಸೆಯ ಭವಿಷ್ಯಕ್ಕಾಗಿ ಯೋಜನೆ ರೂಪಿಸುವುದು
» ಪೀಡಿಯಾಟ್ರಿಕ್ ನ್ಯೂರಾಲಜಿಸ್ಟ್ ಮತ್ತು ತಜ್ಞರೊಂದಿಗೆ ಸಂವಾದ ಹಾಗೂ ಪ್ಯಾನಲ್ ಚರ್ಚೆಯ
» ಪೋಷಕರೊಂದಿಗೆ ಪ್ರಶ್ನೋತ್ತರ ಅವಧಿ

ಮಾತನಾಡುತ್ತಿರುವವರು | ಡಾ. ನವೀನ್ ನಾಗರಾಜನ್
ನ್ಯೂರೋಸೈಂಟಿಸ್ಟ್, ಯುಟಾಹ್ ವಿಶ್ವವಿದ್ಯಾಲಯ, ಸಾಲ್ಟ್ ಲೇಕ್ ಸಿಟಿ, ಯುನೈಟೆಡ್ ಸ್ಟೇಟ್ಸ್

ದಿನಾಂಕ: 8 ನವೆಂಬರ್, 2023 । ಸಮಯ: ಸಾಯಂಕಾಲ 5:00 ರಿಂದ 6:30ರ ವರೆಗೆ
ಸ್ಥಳ: ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ(AIISH) ಸಭಾಂಗಣ, ಮೈಸೂರು

ಕಾರ್ಯಕ್ರಮ ಸಂಯೋಜಕರು | ಡಾ. ಜ್ಯೋತ್ಸ್ನಾ ಎ. ಎಸ್., ಪೀಡಿಯಾಟ್ರಿಕ್ ನ್ಯೂರಾಲಜಿಸ್ಟ್, ಅಪೋಲೊ ಬಿಜಿಎಸ್ ಆಸ್ಪತ್ರೆ, ಮೈಸೂರು & ಡಾ. ಜಯಶ್ರೀ ಶಾನ್‌ಬಾಳ್, ಮುಖ್ಯಸ್ಥರು, ಆಟಿಸಮ್ ಯೂನಿಟ್, AIISH, ಮೈಸೂರು

ಬೆಂಬಲಿಸುವವರು
ಪುಟ್ಟ ಹೆಜ್ಜೆ ಅರ್ಲಿ ಇಂಟರ್ವೆನ್ಷನ್ ಪ್ರೋಗ್ರಾಮ್ । ಜೆಎಸ್‌ಎಸ್ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ ಅಂಡ್ ಹಿಯರಿಂಗ್ ಡಿಸ್ಟ್ರಿಕ್ಟ್ ಅರ್ಲಿ ಇಂಟರ್ವೆನ್ಷನ್ ಸೆಂಟರ್ । ಪ್ರೇರಣಾ ಹಾಸ್ಪಿಟಲ್ । ಮೈಸೂರ್ ಸ್ಪಾಸ್ಟಿಕ್ ಸೊಸೈಟಿ । ಮಹಾನ್

ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ: +91 8921001586

ನಕ್ಕರೆ ಅದೇ ಸ್ವರ್ಗ

ಅವರು : (ಚಿಂತಾಕ್ರಾಂತರಾಗಿದ್ದವರಿಗೆ) "ಯಾಕೆ, ಏನು ವಿಷಯ?"
ಇವರು : "ಏನು ಇಲ್ಲ ಸಕ್ಕರೆ ಇಲ್ಲ ಅಂದು ಬಿಟ್ರು"
ಅವರು : "ಅದು ಸಂತೋಷಪಡುವ ವಿಚಾರ. ಬೇಜಾರು ಯಾಕೆ?"
ಇವರು : "ಡಾಕ್ಟರ್ ಅಂದಿದ್ರೆ ಸಂತೋಷಪಡಬಹುದಿತ್ತು.
ಸಕ್ಕರೆ ಇಲ್ಲ ಅಂದವರು ರೇಷನ್ ಅಂಗಡಿಯವರು"

ಮೈಸೂರು ಮಿತ್ರ

ಮಂಗಳವಾರ, 7 ನವೆಂಬರ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಪರೋಪಕಾರಕ್ಕಾಗಿ ಮರಗಳು ಹಣ್ಣು ಬಿಡುತ್ತವೆ. ನದಿಗಳು ಹರಿಯುತ್ತವೆ. ಹಸುಗಳು ಹಾಲು ಕರೆಯುತ್ತವೆ. ನಮ್ಮ ಈ ಶರೀರವೂ ಪರೋಪಕ್ಕಾರಕ್ಕಾಗಿಯೇ ಇದೆ

– ವಿಕ್ರಮ ಚರಿತ

ವೇದ ಸುಳ್ಳಾದರೂ { ಲಾಭಕ್ಕೆ ಸಕ್ಕರೆ ಮಾರಿ]
ಗಾದೆ ಸುಳ್ಳಾಗದು { ಗೋಣಿ ಚೀಲ ನೆಕ್ಕಿದ

ನಿಮ್ಮ ಪತ್ರಗಳು

ಭಾರತಕ್ಕಾಗಿ ಮತ್ತೊಮ್ಮೆ ವಾಹನ ನಂಬರ್ ಪ್ಲೇಟ್ ಬದಲಾಯಿಸಬೇಕೇ!?

ಮಾನ್ಯರೆ,

2019 ಏಪ್ರಿಲ್ ಮುಂಚೆ ನೋಂದಣಿಯಾದ ವಾಹನಗಳಿಗೆ ನವೆಂಬರ್ 17ರಷ್ಟರಲ್ಲಿ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್ ಅನ್ನು ಕಡ್ಡಾಯವಾಗಿ ಅಳವಡಿಸಬೇಕು. ತಪ್ಪಿದಲ್ಲಿ ನಂತರ ದಂಡ ಪಾವತಿಸಬೇಕು ಎಂದು ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ.

ಆದರೆ, ಈಗಾಗಲೇ ಜಿ20 ಶೃಂಗಸಭೆಯಲ್ಲಿ ಇಂಡಿಯಾ ಬದಲಿಗೆ 'ಭಾರತ್'ಎಂದು ಬಳಸಲಾಗಿದೆ. ಹಾಗೆಯೇ, 1ರಿಂದ 12ನೇ ತರಗತಿವರೆಗಿನ ಶಾಲಾ ಪಠ್ಯಗಳಲ್ಲಿ 'ಇಂಡಿಯಾ' ಬದಲಿಗೆ 'ಭಾರತ್' ಎಂದು ಬಳಸುವಂತೆ ಎನ್‌ಸಿಇಆರ್‌ಟಿ ಉನ್ನತಾಧಿಕಾರ ಸಮಿತಿ ಶಿಫಾರಸು ಮಾಡಿದೆ. ರೈಲ್ವೆಯಲ್ಲಿ ಭಾರತ್'ಎಂದು ಬಳಸುವಂತೆ ರೈಲ್ವೆ ಸಚಿವಾಲಯವು ಕೇಂದ್ರ ಸಂಪುಟಕ್ಕೆ ಪ್ರಸ್ತಾವನೆ ಸಲ್ಲಿಸಿದೆ ಎಂದು ಸುದ್ದಿ ಮಾಧ್ಯಮಗಳಲ್ಲಿ ಗಮನಿಸಿದ್ದೇನೆ.

ಈಗಾಗಲೇ ಅಳವಡಿಸುತ್ತಿರುವ ಎಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್‌ಗಳಲ್ಲಿ 'IND (ಇಂಡಿಯಾ) ಎಂದು ನಮೂದಾಗಿದೆ. ದ್ವಿಚಕ್ರ ವಾಹನವೊಂದಕ್ಕೆ ನಂಬರ್ ಪ್ಲೇಟ್ ಅಳವಡಿಕೆಗೆ ಅಂದಾಜು 300– 400 ರೂಪಾಯಿಯಾಗಲಿದೆ. ಪ್ಲೇಟ್ ತೆಳುವಾಗಿದೆ ಎಂಬ ಕಾರಣಕ್ಕೆ 'ಸೆಕ್ಯೂರಿಟಿ ನಂಬರ್ ಪ್ಲೇಟ್‌ಗೊಂದು 'ಸೆಕ್ಯೂರಿಟಿ ಫ್ರೇಮ್ (!?)' ಎಂಬ ಮತ್ತೊಂದು ತಲೆನೋವನ್ನು ಅಳವಡಿಕೆದಾರರು ವಾಹನ ಮಾಲೀಕರಿಗೆ ಅಂಟಿಸುತ್ತಿದ್ದಾರೆ. ಈ ಫ್ರೇಮ್‌ಗೆ ಸುಮಾರು 350– 450 ಆಗಲಿದೆ. ಅಂದರೆ ಒಟ್ಟು ವೆಚ್ಚ ಸುಮಾರು 800– 950 ಆಗಲಿದೆ ! ಕಾರು, ಭಾರೀ ವಾಹನಗಳಿಗೆ ಈ ವೆಚ್ಚ ಮೂರಂಕಿಯನ್ನೂ ದಾಟಲಿದೆ.

ಈಗಾಗಲೇ ಎಲ್ಲಾ ಅಗತ್ಯ ವಸ್ತುಗಳ ಬೆಲೆ ಏರಿಕೆಯ ಬಾಣಲೆಯಲ್ಲಿ ಬೇಯುತ್ತಿರುವ ಬಡ ಮತ್ತು ಮಧ್ಯಮ ವರ್ಗ, ಈ ಬಿಸಿಯನ್ನು ಸಹಿಸುವುದು ಕಷ್ಟವೇ ಸರಿ. ಅಂತಹುದರಲ್ಲಿ ಎಲ್ಲಾ ಕಡೆಗಳಲ್ಲೂ 'ಭಾರತ' ಎಂದು ಬದಲಾಯಿಸಬೇಕೆಂಬ ಸರ್ಕಾರಿ ಆದೇಶ ಬಂದರೆ, ಕೆಲವೇ ದಿನಗಳಲ್ಲಿ ಈ ನಂಬರ್ ಪ್ಲೇಟ್ ಬದಲಾಯಿಸಲು ಬಾಣಲೆಯಿಂದ ನೇರವಾಗಿ ಬೆಂಕಿಗೆ ಬೀಳುವಂತಾಗುವುದೋ ಏನೋ!?

ಕರ್ನಾಟಕ ಸರ್ಕಾರ ಈ ಬಗ್ಗೆ ಜನಪರ ನಿಲುವು ತಳೆಯುವ ಬಗ್ಗೆ ಅನುಮಾನವಿದೆ. ಏಕೆಂದರೆ, ಗ್ಯಾರಂಟಿ ಭಾಗ್ಯಗಳಿಗೆ ಹಣ ಸರಿದೂಗಿಸಲು ಬೇರೆ ಬೇರೆ ನೆಪಗಳ ಮೂಲಕ ಜನರಿಂದಲೇ ಹಣ ವಸೂಲಿ ಮಾಡಲೇಬೇಕಿದೆ. ಹಾಗಾಗಿ, ಈ ಕೂಡಲೇ ಸುದ್ದಿ ಮಾಧ್ಯಮಗಳು ಜೋರಾದ ದನಿ ಎತ್ತಲೇಬೇಕು. ಕಳಕಳಿಯುಳ್ಳ ವಕೀಲರು ಅಥವಾ ಸಾಮಾಜಿಕ ಕಾರ್ಯಕರ್ತರು ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೂಡಿ, ಮುಗ್ಧ ಜನತೆಯ ಜೇಬಿಗೆ ಅನಗತ್ಯವಾಗಿ ಕತ್ತರಿ ಬೀಳುವುದನ್ನು ತಪ್ಪಿಸಬೇಕೆಂದು ಕೋರುತ್ತಿದ್ದೇನೆ.

– ಎಂ. ರಾಜ್, ಮೈಸೂರು.

ರಾಮಕೃಷ್ಣನಗರಕ್ಕೆ ಸರಿಯಾದ ಬಸ್ ವ್ಯವಸ್ಥೆ ಕಲ್ಪಿಸಿ

ಮಾನ್ಯರೆ,

ಮೈಸೂರು ನಗರದ ಪ್ರತಿಷ್ಠಿತ ಏರಿಯಾಗಳಲ್ಲೊಂದಾದ ರಾಮಕೃಷ್ಣನಗರಕ್ಕೆ ಸರಿಯಾದ ವೇಳೆಗೆ ಬಸ್ ಇಲ್ಲದಿರುವುದರಿಂದ ಎಲ್ಲ ವರ್ಗದವರಿಗೂ ತೊಂದರೆಯಾಗುತ್ತಿದೆ.

ದಿನ ನಿತ್ಯ ಗಂಟೆಗಟ್ಟಲೇ ಕಾದು ಕುಳಿತರೂ ಸಹ ಬಸ್ ಬಾರದೇ, ವಿಧಿಯಿಲ್ಲದೆ ಆಟೋ ಹತ್ತಿಕೊಂಡೋ, ರ್‍ಯಾಪಿಡ್‌ನಲ್ಲೋ ಮನೆ ಸೇರಿದ ಉದಾಹರಣೆಗಳು ಸಾಕಷ್ಟಿವೆ. ಹತ್ತಿರದಲ್ಲೇ ಆಸ್ಪತ್ರೆ ಇರುವುದರಿಂದ ಆಸ್ಪತ್ರೆಗೆ ಬರುವ ರೋಗಿಗಳು ಮತ್ತು ಪಾಲಕರಂತೂ ನರಕಯಾತನೆ ಜತೆಗೆ ನಿತ್ಯ ರೋಧನೆ ಅನುಭವಿಸುತ್ತಿದ್ದಾರೆ.

ನಗರ ಬಸ್ ನಿಲ್ದಾಣದಲ್ಲಿ ಸಂಚಾರಿ ನಿಯಂತ್ರಕರು ರಾಮಕೃಷ್ಣನಗರಕ್ಕೆ ಬಸ್ ಎಷ್ಟು ಗಂಟೆಗೆ ಎಂದು ವಿಚಾರಿಸಿದರೆ ಬೇಜವಬ್ದಾರಿಯಿಂದ ನನ್ನನ್ನೇ ಬೈದು ಕಳುಹಿಸಿದ ಉದಾಹರಣೆಗಳು ಸಾಕಷ್ಟಿವೆ.! ಕೂಗಳತೆಯ ದೂರದಿಂದ ದೂರ ದೂರಿಗೆ ಬಸ್ ವ್ಯವಸ್ಥೆ ಮಾಡುವ ಸಮೀಪದ ಕುವೆಂಪುನಗರ ಡಿಪೋ ಅಧಿಕಾರಿಗಳು ಮಾತ್ರ ರಾಮಕೃಷ್ಣನಗರಕ್ಕೆ ಸರಿಯಾದ ಬಸ್ ವ್ಯವಸ್ಥೆ ಕಲ್ಪಿಸದೇ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಯಾಕೆ? ಈ ಹಿಂದೆ ಇದ್ದ 61, 62ನೇ ಬಂಬರ್ ಬಸ್‌ಗಳನ್ನು ತೆಗೆದು ಹಾಕಿದ್ದು, ಪ್ರಸ್ತುತ ಕೇವಲ 62 ನಂಬರಿನ ಬಸ್ ಮಾತ್ರ ಸಂಚರಿಸುತ್ತಿವೆ. ಇವು ಬಂದರೂ ಸಹ ಒಂದೇ ಸಮಯಕ್ಕೆ ಬರುತ್ತವೆ.

ಈ ಎಲ್ಲಾ ಸಮಸ್ಯೆಗಳ ಬಗ್ಗೆ ಪ್ರಶ್ನಿಸಿದರೆ ನಿಮ್ಮಿಷ್ಟಕ್ಕೆ ಬಸ್ ಓಡಿಸಲು ಆಗುವುದಿಲ್ಲ ಎಂದು ಅಧಿಕಾರಿಗಳು ಹಾಗೂ ನೌಕರರು ಹೇಳುವ ಮಾತುಗಳು ನಮ್ಮನ್ನು ಹತಾಶರನ್ನಾಗಿ ಮಾಡಿವೆ. ದಿನ ನಿತ್ಯ ಇವರೊಂದಿಗೆ ಜಗಳವಾಡಿ ಸುಮ್ಮನಿರುವಂತಾಗಿದೆ ನಮ್ಮ ಪರಿಸ್ಥಿತಿ. ಇನ್ನಾದರೂ ಸಂಬಂಧ ಪಟ್ಟ ಅಧಿಕಾರಿಗಳು ಈ ಸಮಸ್ಯೆಗೆ ಪರಿಹಾರ ಕಲ್ಪಿಸಲಿ.

–ರೋಜ.ಐ.ಎನ್., ರಾಮಕೃಷ್ಣನಗರ ನಿವಾಸಿ, ಮೈಸೂರು.

ಪರದೇಶಗಳಲ್ಲಿ ಭಾರತೀಯರಿಗೆ ಮರಣ ದಂಡನೆ ಶಿಕ್ಷೆ– ಕೇಂದ್ರ ಮಧ್ಯೆ ಪ್ರವೇಶಿಸಲಿ

ಮಾನ್ಯರೆ,

ಕತಾರ್ ರಾಷ್ಟ್ರವು ವಿನಾಕಾರಣ ಭಾರತೀಯ ನೌಕಾದಳದ ಎಂಟು ಮಾಜಿ ಯೋಧರನ್ನು ಬಂಧಿಸಿ ಮರಣದಂಡನೆ ಶಿಕ್ಷೆ ವಿಧಿಸಿರುವುದನ್ನು ಖಂಡಿಸಿ, ಇತ್ತೀಚೆಗೆ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಮೈಸೂರು ಜಿಲ್ಲಾ ಘಟಕದ ವತಿಯಿಂದ ಮೌನ ಪ್ರತಿಭಟನೆ ನಡೆಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಕೆಲವು ಹೊರ ದೇಶಗಳು ಆರೋಪಿತ ಭಾರತೀಯರಿಗೆ ಮರಣದಂಡನೆ ಸೇರಿದಂತೆ ಅತ್ಯಂತ ಕಠಿಣ ಹಾಗೂ ಅಮಾನವೀಯ ಶಿಕ್ಷೆ ವಿಧಿಸುತ್ತಿರುವುದು ತೀವ್ರ ಖಂಡನೀಯ. ಇವರ ವಿಚಾರಣೆ ಕೂಡ ನ್ಯಾಯಸಮ್ಮತವಾಗಿ ನಡೆದಿರುವುದಿಲ್ಲ. ಆಯಾ ದೇಶಗಳ ಕಾನೂನಿಗೆ ಅನುಗುಣವಾಗಿ ಹಾಗೂ ಕೆಲವೊಮ್ಮೆ ಏಕಪಕ್ಷೀಯವಾಗಿ ಕಠಿಣ ರೀತಿಯ ಶಿಕ್ಷೆ ನೀಡಿರುವುದು ಬೆಳಕಿಗೆ ಬರುತ್ತಿದೆ. ವಿಶೇಷವಾಗಿ ಅರಬ್ ಮತ್ತು ಕೊಲ್ಲಿ ರಾಷ್ಟಗಳಲ್ಲಿ ಸಣ್ಣ ಪುಟ್ಟ ಅಪರಾಧಗಳಿಗೂ ಘೋರ ಶಿಕ್ಷೆ ವಿಧಿಸುವ ಪರಿಪಾಠವಿದೆ. ಅಂತಹ ಆರೋಪಗಳ ವಿಚಾರಣೆ ಅಂತರಾಷ್ಟ್ರೀಯ ನ್ಯಾಯಾಲಯಗಳಲ್ಲಿ ನಡೆಯಬೇಕು ಅಥವಾ ಆರೋಪಿಗಳ ಮೂಲ ದೇಶಗಳ ಕಾನೂನುಗಳ ಅಡಿಯಲ್ಲಿ ನಡೆಯಬೇಕು. ಪರದೇಶಗಳಲ್ಲಿ ಭಾರತೀಯರಿಗೆ ನೀಡಲಾಗುತ್ತಿರುವ ಅಮಾನವೀಯ ಶಿಕ್ಷೆಯನ್ನು ತಡೆಯಲು ಭಾರತ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಅರ್ಥವಂತಿಕೆಯ ಆಸುಪಾಸಿನಲ್ಲಿ ಈ ಸ್ನೇಹ ಈ ಜೀವನ!

ಯೌವನದ ರಸ ನಿಮಿಷಗಳಲ್ಲಿ ದೇಹ ಸುಖದ ಆತುರಗಳಲ್ಲಿ ಮಾತಾಡುವ ಮಾತುಗಳೆಲ್ಲಾ ಈ ಅರ್ಥವಂತಿಕೆಯ ಅರ್ಥದಲ್ಲೇ ಹುಟ್ಟಿಬಿಟ್ಟಿರುತ್ತವೆ. ಅದೇ ಹಲವು ವರ್ಷಗಳ ಬಳಿಕ ಅರ್ಥದ ಜಾಗದಲ್ಲಿ ಅಪಾರ್ಥ ಬಂದು ಕುಳಿತು ಅಲ್ಲೋಲ ಕಲ್ಲೋಲ ಮಾಡುತ್ತಿರುತ್ತದೆ. ಈ ಅರ್ಥ ಮತ್ತು ಅಪಾರ್ಥಗಳ ನಡುವಿನ ಕಾಲವಿದೆಯಲ್ಲ. ಅದು ಕುಲುಮೆ. ಅಲ್ಲಿ ಕುಳಿತು ಕಾದು ಕೆಂಪಾದವರಿಗೆ ಮಾತ್ರ ಒಬ್ಬರು ಮತ್ತೊಬ್ಬರಿಗೆ ಅರ್ಥವಾಗಲು ಸಾಧ್ಯ. ಅದಕ್ಕೆ ಎಕ್ಸ್‌ಪೈರೀ ಡೇಟುಗಳಿಲ್ಲ. ಇಂಥದ್ದೇ ಎಂಬ ಅಂತಿಮ ದಿನಾಂಕಗಳಿಲ್ಲ. ಅದು ಯಾವಾಗ ಬೇಕಾದರೂ ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ ಆಗಬಹುದು. ವಯಸ್ಸಿನ ರಥ ಚಕ್ರ ನಮ್ಮ ಜೀವದ ಮೇಲೆ ಉರುಳಿಹೋದ ಕಾಲ ಹೇಳಿದ ಮಾತೇನು ಗೊತ್ತಾ! ಮೊದಲಿಗೆ ನಿನಗೆ ನೀನು ಅರ್ಥವಾಗು ಅಂತ.

ನಾವು ಯಾರಿಗೆ ಏಕೆ ಅರ್ಥವಾಗಬೇಕು ಹೇಳಿ? ಒಬ್ಬ ಬರಹಗಾರ ಓದುಗನಿಗೆ ಅರ್ಥವಾಗಲೇ ಬೇಕೆಂಬ ಹಠವಿಲ್ಲ, ಆದರೆ ಓದುಗ ಮತ್ತು ಲೇಖಕ ಇಬ್ಬರೂ ಸಮಾನ ಮಾನಸಿಕ ಬಿಂದುವಿನಲ್ಲಿ ಸಂಧಿಸಿದರೆ ಮಾತ್ರ ಒಬ್ಬರಿಗೊಬ್ಬರು ಅರ್ಥವಾಗಲು ಸಾಧ್ಯ. ಆಗ ಅವರ ಓದು ಮತ್ತು ಇವರ ಬರವಣಿಗೆ ಎರಡೂ ಸಾರ್ಥಕ! ಹಾಗೆಯೇ ಅಧ್ಯಾಪಕ ವಿದ್ಯಾರ್ಥಿಗೆ ತಲುಪದೇ ಹೋದರೆ ಮೇಷ್ಟ್ರ ಮಾತು, ಅವರ ವ್ಯಕ್ತಿತ್ವ, ಅವರ ವಿಮರ್ಶೆ, ವಿವರಣೆ, ನಿರೂಪಣೆಗಳು ಅರ್ಥವಾಗದೇ ಹೋದರೆ ವಿದ್ಯಾರ್ಥಿ ಅಧ್ಯಾಪಕನಿಗೆ, ಅಧ್ಯಾಪಕ ವಿದ್ಯಾರ್ಥಿಗೆ ಅರ್ಥವಾಗಲಾರ. ವಿದ್ಯಾರ್ಥಿಯನ್ನು ಆಳವಾಗಿ ಧ್ಯಾನಿಸುವಂತೆ ಆತ ಮಾಡಲಾರ. ವಿದ್ಯಾರ್ಥಿ, ಅಧ್ಯಾಪಕ ಇಬ್ಬರೂ ಸಮ ಪ್ರಮಾಣದಲ್ಲಿ ಸಂಧಿಸದೇ ಹೋದರೆ ಒಬ್ಬರಿಗೊಬ್ಬರು ಅರ್ಥವಾಗುವುದಿಲ್ಲ. ಅಲ್ಲಿಗೆ ಮುಗಿಯಿತು. ಅವರ ಇಡೀ ಓದು, ಮತ್ತು ವಿವರಣೆಗಳು ಎರಡೂ ಕೂಡ ವ್ಯರ್ಥವಾಗಿ ಹೋಗುತ್ತವೆ.

ಬರಿಯ ಪಾಠ ಅಷ್ಟೇ ಅಲ್ಲ, ಆಟವೂ ಅಷ್ಟೇ! ಸಚಿನ್ ತೆಂಡೂಲ್ಕರ್‌ಗೆ ಬಾಲು, ಪಿಚ್ಚುಗಳು ಅರ್ಥವಾಗದೇ ಹೋಗಿದ್ದರೆ ತೆಂಡೂಲ್ಕರ್ ಎಂಬ ಸಾಮಾನ್ಯ ಹುಡುಗನೊಬ್ಬ ಕ್ರಿಕೆಟ್ ದೇವರಾಗಿ ಕಾಣಿಸುತ್ತಿರಲಿಲ್ಲ. ಕ್ರೀಡಾಂಗಣದಲ್ಲಿ ಅವನ ಮಾಂತ್ರಿಕ ಬ್ಯಾಟಿಂಗ್ ಸೃಷ್ಟಿಯಾಗುತ್ತಿರಲಿಲ್ಲ. ಅದೇ ದಾರಿಯಲ್ಲಿ ನಡೆದ ಇವತ್ತಿನ ವಿರಾಟ್ ಕೊಹ್ಲಿಗೆ ಸಚ್ಚಿನ್ ದಾಖಲೆಗಳನ್ನು ಸರಿಗಟ್ಟುವ ಕ್ರಿಕೆಟ್ ಜಗತ್ತಿನ ದಾರಿಗಳು ಗೋಚರಿಸುತ್ತಿರಲಿಲ್ಲ. ಕೆಮರಾ, ಲೈಟು, ಸ್ಕ್ರಿಪ್ಟುಗಳು ನಟಿಸುವವರಿಗೆ ಅರ್ಥವಾಗದೇ ಹೋದರೆ ಒಬ್ಬ ಅಮಿತಾಬ್ ಬಚ್ಚನ್, ರಾಜ್‌ಕುಮಾರ್, ರಜನೀಕಾಂತರು ಮಿಂಚುತ್ತಿರಲಿಲ್ಲ. ಈ ಇಳೀ ವಯಸ್ಸಿನಲ್ಲೂ ರಜನೀಕಾಂತ್ ಜೇಲರ್ ಗೆಟಪ್ಪಿನಲ್ಲಿ ಕಾಣಿಸಿಕೊಳ್ಳುತ್ತಿರಲಿಲ್ಲ. ಶೇರ್ಪಾ ಜನಾಂಗದ ತೇನ್‌ಸಿಂಗನಿಗೆ ಚಲಿಸದೇ ನಿಂತ ಹಿಮಪರ್ವತವೊಂದು ಅರ್ಥವಾಗದೇ ಹೋಗಿದ್ದರೆ, ಹಿಮಾಲಯದ ಗೌರಿಶಂಕರ ಕೈ ಬೀಸಿ ಕರೆಯುತ್ತಿರಲಿಲ್ಲ. ಗೃಹಿಣಿಯಾದವಳಿಗೆ ಅಡುಗೆ ಮನೆ ಅರ್ಥವಾಗದೇ ಹೋದರೆ ಡೈನಿಂಗ್ ಟೇಬಲ್ಲು ರುಚಿ ಕಟ್ಟುವುದಿಲ್ಲ. ಕಾಡಿನ ಆನೆ ಮಾವುತನಿಗೆ ಅರ್ಥವಾಗದೇ ಹೋದರೆ ಬೆನ್ನ ಮೇಲಿರುವ ಮಾವುತ ಅದರ ಕಾಲಕೆಳಗಿರುತ್ತಾನೆ. ಹೀಗೆ ದಿನ ಬೆಳಗಾದರೆ ಬದುಕನ್ನು ಪಳಗಿಸುವ ಸಂತರ ಹಾಗೆ ಸಾಮಾನ್ಯರೂ ಕೂಡ ಪ್ರತಿಯೊಂದನ್ನೂ ಅರ್ಥಮಾಡಿಕೊಳ್ಳಲು ಹೆಣಗುತ್ತಿರುತ್ತಾರೆ. ಆದರೆ ಅರ್ಥಮಾಡಿಕೊಳ್ಳಲು ಯತ್ನಿಸುವ ಪ್ರಯತ್ನವಿದೆಯಲ್ಲ ಪ್ರಾರಂಭಿಸುವ ಪ್ರಾಸೆಸ್ ಮಾತ್ರ ನಿರಂತರ. ಇದಕ್ಕೆ ಆದಿ–ಅಂತ್ಯಗಳಿಲ್ಲ.

ಯಾವುದೇ ಕೆಲಸ ಪ್ರಾರಂಭವಾದ ಕೂಡಲೇ ಕೆಲಸ ಕಲಿತುಕೋ ಎನ್ನುತ್ತೇವೆ. ಕೆಲಸ ಕಲಿತ ಮೇಲೂ ಮತ್ತೂ ಅದರೊಂದಿಗೆ ನಿಪುಣತೆ ಸಾಧಿಸಲು ಹೊರಡುತ್ತೇವಲ್ಲ, ಅದೇನದು? ಕೆಲಸ ಕಲಿತ ಮೇಲೂ ನಿತ್ಯವೂ ಅದರೊಂದಿಗೆ ಇನ್ನೂ, ಇನ್ನೂ, ಇನ್ನೂ ಹೆಚ್ಚು ಕಲಿಯುವ ಮನಸ್ಸು ಮಾಡುತ್ತೇವಲ್ಲ ಅದನ್ನು ಪಳಗಿಸಲು ಹರ ಸಾಹಸ ಮಾಡುತ್ತೇವಲ್ಲ, ಏನದು? ಅದೇ ಅರ್ಥ ಮಾಡಿಕೊಳ್ಳುವ ಪರಿ. ಅರ್ಥವಾಗದ್ದನ್ನು ಒಲಿಸಿಕೊಳ್ಳಲು ಹೊರಡುವ ವಿಜಯ ಯಾತ್ರೆ. ಅಲ್ಲಿ ಸೋಲೂ ಇದೆ, ಪಕ್ಕದಲ್ಲೇ ಗೆಲುವು ಇದೆ. ಅದರ ಕಾರಣ ಏನೇ ಇರಲಿ ಅಲ್ಲಿ ಅನುಕೂಲ ಸಿಂಧು ಅಂಶಗಳೇ ಇರಲಿ. ಅದು ಖಾಸಗಿಯಾಗಿರಲಿ, ಸಾರ್ವಜನಿಕವಾದದ್ದಾಗಿರಲಿ ನಾವು ಯಾರಿಗೆ ಅರ್ಥವಾಗಬೇಕಿತ್ತೋ ಅವರಿಗೆ ಅರ್ಥವಾಗಿದ್ದೀವಾ? ಅಥವಾ ಅವರು ನಮಗೆ ಅರ್ಥವಾಗಿದ್ದಾರಾ? ಇದು ಪ್ರಶ್ನೆ?! ಸದ್ಯ ಇದು ಎಲ್ಲಾ ಕಾಲಕ್ಕೂ ಕರಾರುವಕ್ಕಾಗಿ ಹೇಳಲಾಗದ ವಿಷಯ, ಇದು ಇತ್ಯರ್ಥವಾಗದ ಒಗಟು. ಅದಕ್ಕೆ ಇವತ್ತಿಗೂ 'ಅರ್ಥ' ಎಂಬ ಈ ಎರಡಕ್ಷರದ ಪದ ವಾಕಿಂಗ್ ಮಾಡುವ ಪಾರ್ಕಿನಿಂದ ಹಿಡಿದು ಬೆಡ್‌ರೂಮಿನತನಕ, ಕ್ಲಾಸ್ ರೂಮಿನ ಬೆಂಚಿನಿಂದಿಡಿದು ಬಾಸ್ ರೂಮಿನ ತನಕ ನಿತ್ಯ ಸುಮಂಗಲಿಯಂತೆ ಓಡಾಡುತ್ತಲೇ ಇರುತ್ತದೆ. ಯಾವ ಕಾಲಕ್ಕೂ ಇದಕ್ಕೆ ಉತ್ತರ ಸಿಗುವ ಲಕ್ಷಣಗಳೇನೂ ಕಾಣುತ್ತಿಲ್ಲ. ಸಿಕ್ಕಿದರೂ ಅದಕ್ಕೆ ಮುಗಿಯಿತು ಎಂಬ ಶುಭಂ ಭಾಗ್ಯವಿಲ್ಲ.

ಪ್ರೀತಿಸಿದ ಹುಡುಗಿಗೆ, ಹುಡುಗನೊಬ್ಬ ತಾನು ಧಾವಂತದಲಿ ಹೇಳುವ ಮಾತೆಂದರೆ ನಿನ್ನನ್ನ 'ನಾನೆಷ್ಟು ಪ್ರೀತಿಸ್ತೀನಿಂತ ಅರ್ಥಮಾಡ್ಕೋ' please ಅಂತ? of course ಹುಡುಗಿಯೂ ಹಾಗೆಯೇ ಹೇಳುತ್ತಾಳೆ ಅಂತಿಟ್ಟುಕೊಳ್ಳಿ. ಆದರೆ ಇವರಿಬ್ಬರ ಮಾತಿನ ಕಷ್ಟ ಏನು ಗೊತ್ತಾ? 'ನನ್ನನ್ನು ಅರ್ಥ ಮಾಡಿಕೋ ಎಂಬ ವಿಜ್ಞಾಪನೆ'ಯಲ್ಲೇ ನೀನು ನನಗೆ ಅರ್ಥವಾಗಿ ಹೋಗಿದ್ದೀಯಾ ಎಂಬ ಷರಾ ಬರೆಯ ಹೊರಟು ಗೊಂದಲ ಸೃಷ್ಟಿಸಿಕೊಂಡ ಜೇಡರಬಲೆ ನೇಯುವುದು. ಅಂದರೆ ಅರ್ಥ ಮಾಡಿಕೊಂಡ ಮೇಲೆ ಪ್ರೀತಿನಾ ಅಥವಾ ಪ್ರೀತಿ ಮಾಡಿದ ಮೇಲೆ ಅರ್ಥ ಮಾಡಿಕೊಳ್ಳೋದಾ? ಇದೊಂಥರಾ ಬೀಜ ವೃಕ್ಷ ನ್ಯಾಯದ ಹಾಗಿನ ಮಾತು. ಅರ್ಥ ಮಾಡಿಕೊಳ್ಳೋದು ಅಂದ್ರೇನು? ಸೈಕಾಲಜಿಯಲ್ಲಿ ಅದಕ್ಕೇನು ಮೀಟರ್ರಿದೆಯಾ ಅಥವಾ ಮೈಂಡಿಗೆ ಹೀಟರ್ರಿದೆಯಾ? ಹಾಗೇ ಜೀವನಪರ್ಯಂತ ನಾವು ಯಾರಿಗೆ ಅರ್ಥವಾಗಬೇಕೋ ಅವರಿಗೆ ಅರ್ಥವಾಗಲು ಯತ್ನಿಸುತ್ತಲೇ ಇರುತ್ತೇವೆ. ಯಾರನ್ನೂ ತಲುಪಬೇಕೋ ಅವರನ್ನು ತಲುಪಲು ಪ್ರಯತ್ನಿಸುತ್ತಲೇ ಇರುತ್ತೇವೆ. ಇದು ನಿರಂತರ ಪಯಣ. ಅದು ಒಲವೇ ಇರಲಿ ಅಥವಾ ವಾತ್ಸಲ್ಯವೇ ಇರಲಿ. ಅದು ಸಂಸಾರವಿರಲಿ, ಸನ್ಯಾಸವಿರಲಿ, ಖಾಸಗಿಯಾಗಿರಲಿ, ಸಾರ್ವತ್ರಿಕವಾಗಿರಲಿ, ಎಲ್ಲರನ್ನೂ ಬಿಡದೆ ಕಾಡುವ ಪದ ಅರ್ಥಮಾಡ್ಕೋ please.

'ನಾನು ನಿನ್ನನ್ನ ತುಂಬ ಚೆನ್ನಾಗಿ ಅರ್ಥಮಾಡ್ಕೊಂಡಿದ್ದೀನಿ'? ಅಂತ ನಮ್ಮನ್ನ ನಾವು ಪ್ರೂವ್ ಮಾಡಿಕೊಳ್ಳಲು ಹೊರಡುವ ನಿತ್ಯ ಸಾಹಸವಿದೆಯಲ್ಲ ಇದು ಬಹಳ ಕಷ್ಟದ ಕೆಲಸ. ಒಂದು ನಿಮಿಷ ಹಾಗೇ ಕಣ್ಮುಚ್ಚಿ ಧ್ಯಾನಸ್ಥ ಸ್ಥಿತಿಗೆ ಹೋಗಿ ನೋಡಿ, ಮನದ ಮಾತಿಗೆ ಕಿವಿಯಾಗಿಸಿ ಕೇಳಿ ನೋಡಿ, ಮೊದಲು 'ನನಗೆ ನಾನು ಅರ್ಥವಾಗಿದ್ದೀನಾ'? ಅಂತ! ಹೊರಗಡೆ ನಮ್ಮ ಹೆಸರು ಐಡೆಂಟಿಟಿಗಳನ್ನು ಬಿಟ್ಟು ನಮ್ಮೊಳಗೆ ನಮ್ಮನ್ನ ನಾವು ಹುಡುಕುವ ನಿರಂತರ ಪ್ರಕ್ರಿಯೆಯಿದೆಯಲ್ಲಾ ಆ ಹುಡುಕಾಟದಲ್ಲಿ ನಮಗೆ ನಾವು ಕಾಣಿಸಿದರೆ ಅದೇ ಆತ್ಮಸುಖ. ಆ ನಂತರ ಮತ್ತೊಬ್ಬರನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನಕ್ಕೆ ಕೈ ಹಚ್ಚಬಹುದೇ ವಿನಃ ಬೇರೇನಿಲ್ಲ. "ನಾವಿಬ್ಬರು ಪರಸ್ಪರ ಪ್ರೀತಿಸಿದ್ದೀವಿ", "ಒಬ್ಬರನ್ನೊಬ್ಬರು ಅರ್ಥ ಮಾಡ್ಕೊಂಡಿದ್ದೀವಿ." ಅದಕ್ಕೆ ನಮ್ಮಿಬ್ಬರಿಗೂ ಮದುವೆ ಮಾಡಿಬಿಡಿ ಎನ್ನುವ ಮಾತು ಗಳನ್ನು ಆಡುತ್ತಾರಲ್ಲ! ಅವರನ್ನ ಸುಮ್ಮನೆ ಗಮನಿಸಿ ನೋಡಿ ಅವರಿಬ್ಬರ ನಡುವೆ ಪ್ರೀತಿ ಇದೆ ನಿಜ, ಅದು ವಯೋಸಹಜ. ಆದರೆ ಒಬ್ಬರಿಗೊಬ್ಬರು ಅರ್ಥ ಮಾಡ್ಕೊಂಡಿದ್ದೀವಿ ಅನ್ನೋ ಮಾತಿದೆಯಲ್ಲ Its very complication. ಅದನ್ನು ಮೀರಿ ನೀವು ಮದುವೆ ಮಾಡಿದ ಮೇಲೆ ಶುರುವಾಗುವ ಪ್ರಕ್ರಿಯೆಯಿದೆಯಲ್ಲಾ ಅದೇ ಒಬ್ಬರನ್ನೊಬ್ಬರು ಅರ್ಥೈಸಿ ಕೊಳ್ಳುವ ಪ್ರಾರಂಭ. ಆದರೆ ಪ್ರಮತ್ತತೆಗೆ ಒಳಗಾದ ಮನಸ್ಸು ಮಾತನಾಡುವಾಗ ಮಾತ್ರ ಹೀಗೆ ಮಾತಾಡಿ. ಆ ಕ್ಷಣದ ಒಲವಿಗೆ ಮದುವೆ ಎಂಬ ಮಹಾಮುದ್ರೆ ಬೀಳುವಂತೆ ಮಾಡಿಕೊಳ್ಳುವ ಆತುರಕ್ಕೆ ಬಿದ್ದುಬಿಟ್ಟಿ ರುತ್ತದೆ. ತಮಾಷೆಯೆಂದರೆ ಕೆಲವೊಮ್ಮೆ ಮದುವೆ ಯಾದ ಕೂಡಲೇ ಪ್ರೇಮಿಗಳಾಗಿದ್ದವರು ಗಂಡ– ಹೆಂಡತಿಯರಾಗಿಬಿಡುತ್ತಾರಲ್ಲ. ಆಗ ಹುಟ್ಟುವ ಸ್ವಂತದ ಚಡಪಡಿಕೆಗಳೇ ಅರ್ಥದ ಜಾಗದಲ್ಲಿ ಅಪಾರ್ಥದ ಛಾಯೆಯನ್ನ ಸೃಷ್ಟಿಸಿಬಿಟ್ಟಿರುತ್ತವೆ. ಇಲ್ಲಿಯವರೆಗೂ ಆಕೆಯ ಬಗೆಗೆ ಆತನಿಗಿದ್ದ ಮಾಹಿತಿ ಏನು ಗೊತ್ತಾ? ಆಕೆಯ ಬೇಕು ಬೇಡಗಳು. ಇವಳಿಗೂ ಅಷ್ಟೇ ಆತನ ಬೇಕುಬೇಡಗಳ ಪಟ್ಟಿಯಲ್ಲಿ ಆತ ನನಗೆ 'ಅರ್ಥ'ವಾಗಿದ್ದಾನೆ? ಎನ್ನುವ ಧಾರಾಳತನದ ಮಾತುಗಳಲ್ಲಿ ಜೀವನ ಪ್ರಾರಂಭಿಸುತ್ತಾಳೆ. ಆದರೆ ಅವರು ಪರಸ್ಪರ ಅರ್ಥವಾಗೋದಕ್ಕೆ ಶುರುವಾಗೋದೆ ಆವಾಗ ಅಂತ ಗೊತ್ತಾಗಲು ಅವರಿಗೆ ಬಹಳ ಕಾಲ ಬೇಕಾಗು ವುದಿಲ್ಲ. ಅವರಿಗೆ ಅದು ಗೊತ್ತಾಗುವಷ್ಟರಲ್ಲಿ ಒಬ್ಬರಿ ಗೊಬ್ಬರು ಅರ್ಥವಾಗುವಷ್ಟರಲ್ಲಿ, ಇಬ್ಬರಿಗೂ ವಯಸ್ಸಾಗಿರುತ್ತದೆ.

ಈ ಅರ್ಥಮಾಡಿಕೊಳ್ಳುವ ವಿಷಯ ಕೆಲವೊಮ್ಮೆ ಉತ್ತರವೇ ಇಲ್ಲದ ಪ್ರಶ್ನೆಗಳಂತೆ ನಮ್ಮನ್ನು ಕಾಡುತ್ತಿರುತ್ತದೆ. ಇದು ಕಷ್ಟ ಕಾರ್ಪಣ್ಯದ ಕಾರಣಕ್ಕಾಗಿಯಲ್ಲ. ಪರಮ ಪ್ರೇಮದ ಆತ್ಮಾನುರಾಗಕ್ಕಾಗಿಯೂ ಅಲ್ಲ. ಸರಳವಾಗಿ ಅರ್ಥಮಾಡಿಕೊಳ್ಳುವ ಸಹಜ ಪ್ರಕ್ರಿಯೆ ಹುಡುಕಾಟಕ್ಕಾಗಿ. ಸೂಫಿ ಸಂತರಿಗೂ ಚಳ್ಳೆಹಣ್ಣು ತಿನ್ನಿಸಿ ಅರ್ಥವಾಗದೆ ಓಡಿಹೋದ ಕೋಡಗಾನ ಕೋಳಿ ನುಂಗಿತ್ತ ತಂಗಿ ಎಂಬ ವ್ಯಥೆಯ ಕಥೆ ಇದು.

ಹಾಗಾಗಿ ಗುಡಿಸಲಿನಿಂದ ಬಂಗಲೆಯವರೆಗೆ ಪಶು ಪಕ್ಷಿ, ಪ್ರಾಣಿ ಸಂಕುಲದಿಂದ ಮನುಷ್ಯನವರೆಗೆ ಇರುವ ಜೀವ ಜೀವಗಳ ನಡುವೆ ಪ್ರತಿದಿನ, ಪ್ರತಿಕ್ಷಣ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಅಣಿಯಾಗುವ ಈ ಮಾನಸಿಕ ಸಿದ್ಧತೆಗಳು ನಮಗೆ ಗೊತ್ತಿಲ್ಲದಂತೆ ನಮ್ಮನ್ನ ಆಳುತ್ತಿರುತ್ತವೆ. ಕೆಲವರಿಗೆ ನಾವು ಅರ್ಥವಾಗುತ್ತೇವೆ. ಮತ್ತೆ ಕೆಲವರಿಗೆ ಅಪಾರ್ಥವಾಗುತ್ತೇವೆ. ನಿನ್ನೆ ಮೊನ್ನೆಯವರೆಗೂ ನೀನೆ ಎಲ್ಲಾ ಎನ್ನುತ್ತಿದ್ದ ಸ್ನೇಹಿತ ಸಣ್ಣ ಕಾರಣಕ್ಕೆ ಮುನಿಸಿಕೊಂಡು ಮರೆಯಾಗಿಬಿಟ್ಟಿರುತ್ತಾನೆ. ಆತನ ಬಗ್ಗೆ ನಮಗಿರುವ ವರ್ಣಿಸಲಸಾಧ್ಯವಾದ ಪ್ರೀತಿ ಅವನಿಗೆ ಅರ್ಥವಾಗುವುದೇ ಇಲ್ಲ. ಅಮ್ಮನ ಪ್ರೀತಿ ಅರ್ಥಮಾಡಿಕೊಳ್ಳಲು ಸೋಲುವ ಮಗಳು, ಕಾಲೇಜಿನಲ್ಲಿ ಸಿಕ್ಕಿದ ಹುಡುಗನ ಮುಂದೆ ನನ್ನನ್ನ ಅರ್ಥಮಾಡ್ಕೋ ಪ್ಲೀಸ್ ಅಂತ ಅವಲತ್ತುಕೊಂಡಿರುತ್ತಾಳೆ. ಒಂದೇ ಬಳ್ಳಿಯ ಹೂಗಳಂತೆ ಬೆಳೆದ ಅಣ್ಣ ತಮ್ಮಂದಿರು ದುಷ್ಮನ್‌ಗಳಾಗಿ ಹೋಗಿರುತ್ತಾರೆ. ಸೋದರತ್ವ ಒತ್ತಟ್ಟಿಗಿರಲಿ, ಅರ್ಥವಾಗಲು ಯತ್ನಿಸಿರುವುದೇ ಇಲ್ಲ. ಅರ್ಥ ಆದ ಮೇಲೆಯೇ ಸಿಕ್ಕುವ ನಿಲ್ದಾಣವೇ ನಿರಂತರ ಪ್ರಯಾಣದ ತಂಗುದಾಣ. ಅದು ಎಲ್ಲರಿಗೂ ಸಿಗಲಿ. ಮನಸ್ಸೇ ರಿಲ್ಯಾಕ್ಸ್ ಪ್ಲೀಸ್ ಎನ್ನುವ ಮಾತುಗಳು ಹುಟ್ಟುವ ಆದರಣೀಯ ಸಮಯವೇ ಇದು. ಅದು ಶುರುವಾಗುವುದೇ ಇಲ್ಲಿಂದ. ಎಲ್ಲಾ ಕಾಲಕ್ಕೂ ಎಲ್ಲಾ ವಿಷಯಕ್ಕೂ ಎಲ್ಲರನ್ನೂ ಆವರಿಸುವ ಅರ್ಥ ಮಾಡಿಕೊಳ್ಳುವ ಈ ಪ್ರಕ್ರಿಯೆ ಆದಷ್ಟು ಬೇಗ ನಮಗೂ ಇದು ಅರ್ಥವಾಗಲಿ.


ನಾವು ಯಾರಿಗೆ ಅರ್ಥವಾಗಿದ್ದೇವೆ ಹೇಳಿ? ನನ್ನ ತಂದೆಗ? ತಾಯಿಗ? ಹೆಂಡತಿಗ? ಗೆಳೆಯನಿಗ? ಸಮಾಜಕ್ಕ? ಕಚೇರಿಯ ಯಜಮಾನನಿಗ? ನಾವು ಯಾರಿಗೆ ಅರ್ಥವಾಗಿದ್ದೇವೆಂದು ನಮ್ಮನ್ನು ನಾವು ಕೇಳಿಕೊಂಡರೆ ಉತ್ತರ ಹುಡುಕೋದು ಕಷ್ಟ ಕಣ್ರೀ. ಅಷ್ಟುವರ್ಷ ಜೊತೆಗಿದ್ದು ದಾಂಪತ್ಯ ಅನುಭವಿಸಿ ಜೀವನ ಪೂರ್ತಿ ಜೊತೆಯಲ್ಲೇ ಕಳೆದವರನ್ನ ಗಮನಿಸಿದ್ದೀರಾ? ಪರಸ್ಪರ ಒಬ್ಬರಿಗೊಬ್ಬರು ಹಚ್ಚಿಕೊಂಡಿರುತ್ತಾರೆ. ಅಷ್ಟುವರ್ಷ ಜೊತೆಗಿದ್ದ ಕಾರಣಕ್ಕೆ ಅವರ ಬೇಕುಬೇಡಗಳು ಗೊತ್ತಿರುತ್ತವೆಯೇ ವಿನಃ ಸಣ್ಣಪುಟ್ಟ ವಿಷಯಕ್ಕು ಮುನಿಸಿಕೊಂಡು ಹೋಗಿ ಪಾರ್ಕಿನಲ್ಲಿ ಕುಳಿತು ಕೋಪ ಇಳಿದ ಮೇಲೆ ಮನೆಗೆ ಬರುವ ಹಿರಿಯ ಜೀವಗಳು ಮಾತು ಶುರುವಾದ ಕೂಡಲೇ ಆಡುವ ಮೊದಲ ಮಾತೇನು ಗೊತ್ತೆ? ಇಷ್ಟು ವರ್ಷ ಆದರೂ ನಾನು ಏನೂ ಅಂತ ನೀವು ಅರ್ಥಮಾಡಿಕೊಳ್ಳಲೇ ಇಲ್ವಲ್ಲ? ತುಂಬ ನೋವಾಯ್ತು? ಅಂತ ಗಳಗಳನೆ ಅತ್ತುಬಿಡುತ್ತಾರೆ. ಆ ಶುಷ್ಕ ಏಕಾಂತದ ಆಪ್ತ ವಲಯದಲ್ಲಿ, ಅಷ್ಟು ವರ್ಷಗಳ ಸುದೀರ್ಘ ಜೀವನ ಪ್ರಯಾಣದ ಕೊನೆಯ ಪಾತಳಿಯಲ್ಲಿ, ಈ ಮಾತು ಬರುತ್ತದೆಂದರೆ ಅರ್ಥ ಮಾಡಿಕೊಳ್ಳೋಕೆ ಇಷ್ಟು ವರ್ಷ ಬೇಕಾಯಿತಾ? ಅಥವಾ ಜೀವನ ಪೂರ್ತಿ ಒಬ್ಬರಿಗೊಬ್ಬರು ಅರ್ಥ ಆಗೋದೆ ಇಲ್ವ? ಅಥವಾ ಇದು ಯಾರದ್ದೋ ಜೀವನದ ಪ್ರಶ್ನೆನಾ? ಅನ್ನೋದಕ್ಕಿಂತ ನಮ್ಮ ಮನೆಯ ಪ್ರಶ್ನೆ ಅಂತಾನೆ ಅನ್ಸಲ್ವ? ನನಗೇನೋ ಹಾಗೇ ಅನ್ನಿಸುತ್ತೆ. ಅದರಲ್ಲೂ ಪ್ರೀತಿಸಿ ಮದುವೆಯಾದವರ ಪೈಕಿ ಬಹಳಷ್ಟು ಜನರನ್ನ ಈ ಪದ ತುಂಬಾನೆ ಕಾಡಿದೆ. ಮೊದಮೊದಲು ಅರ್ಥವಾದಂತೆ ಭಾಸವಾಗಿ ಆಮೇಲೆ ಅರ್ಥವಾಗದ ಈ ಪರಿ ಬರುಬರುತ್ತಾ ಅಪಾರ್ಥದ ಛಾಯೆಯನ್ನೇ ಬಿಂಬಿಸುವಂತೆ ಕಾಣುವ ರೀತಿ ಅರ್ಥ ಆಗುವುದೇ ಇಲ್ಲ!

ಅಸಲಿಗೆ ಈ ಅರ್ಥ ಆಗೋ ಮನಸ್ಥಿತಿನೇ ತುಂಬಾ ಕಾಂಪ್ಲಿಕೇಷನ್ನು. ಇದು ಎಲ್ಲಿ ಯಾರಿಗೆ ಹೇಗೆ ಅರ್ಥವಾಗುತ್ತದೆಂಬುದೇ ಗೊತ್ತಾಗುವುದಿಲ್ಲ. ಜೀವನದ ಸಂಧ್ಯಾಕಾಲದಲ್ಲಿದ್ದ ಆಂಧ್ರ ಪ್ರದೇಶದ ಮುಖ್ಯಮಂತ್ರಿ ನಟ ಎನ್.ಟಿ.ರಾಮರಾವ್ ಆ ಇಳಿವಯಸ್ಸಿನಲ್ಲಿ ಬದುಕಿನಲ್ಲಿ ಎಲ್ಲವನ್ನೂ ಅನುಭವಿಸಿ ಲಕ್ಷ್ಮೀಶಿವಪಾರ್ವತಿಯಂಥಾ ಸಾಮಾನ್ಯ ಹೆಣ್ಣುಮಗಳಿಗೆ ಅರ್ಥವಾಗಿ ಹೋಗಿದ್ದ, ಎಲ್ಲವನ್ನೂ ಮರೆಸುವ ಶಕ್ತಿ ಅರ್ಥಮಾಡಿಕೊಂಡ ಆ ಪ್ರಕ್ರಿಯೆಗೆ ಇತ್ತು. ಆದರೆ ಅವರ ಕುಟುಂಬಕ್ಕೆ, ಅವರ ಪಕ್ಷಕ್ಕೆ ಎನ್.ಟಿ.ಆರ್. ಅಪಾರ್ಥವಾಗಿ ಕಂಡರು.

ಈ ಸ್ನೇಹ ಈ ಜೀವನ ಈ ದಾಂಪತ್ಯದ ಹೊಸ ತರಲ್ಲಿ ನಾವು ಒಂದು ಮಾತು ಕೇಳುತ್ತಿರುತ್ತೇವೆ. "ಅವನು ನನಗೆ ಅರ್ಥವಾದಷ್ಟು ನಿನಗೆ ಗೊತ್ತಿಲ್ಲ." 'ಅವನು ಏನು ಅಂತ ನನಗೊತ್ತಿಲ್ವ?' ಅವಳ ಮಾತಿನ "ಅರ್ಥ ಏನೂಂತ ಅರ್ಥ ಆಯ್ತು ನಿನಗೆ?" "ಅದಕ್ಕೇ ಹೇಳಿದ್ದು ಅವಳಿನ್ನೂ ನಿನಗೆ ಅರ್ಥ ಆಗಿಲ್ಲಾಂತ." ಹೀಗೆ ಎಷ್ಟೆಷ್ಟೋ ಸಂದರ್ಭಗಳಲ್ಲಿ ಇಂಥಾ ಮಾತುಗಳು ನಮ್ಮ ಬಾಯಿಂದಲೇ ಬಾಣಬಿರುಸುಗಳ ಥರಾ ಹೊರಟಿರುತ್ತವೆ. ಆದರೆ ಅರ್ಥ ಮಾಡಿಕೊಳ್ಳೋದು ಅಂದ್ರೆ ಏನು? ಹಾಗಂತ ಒಂದಿರುತ್ತಾ? ಅರ್ಥ ಮಾಡಿಕೊಂಡವರಿಗೆ ನಾವು ಒಬ್ಬರಿಗೊಬ್ಬರು ಅರ್ಥ ಆಗಿದ್ದೀವಿ ಅಂತ ತೋರಿಸಿಕೊಳ್ಳೋಕೆ ಲಕ್ಷಣಗಳೇನಾದರೂ ಇವೆಯಾ? ಹಾಗಿದ್ದರೆ ಅಂಥಾ ಲಕ್ಷಣಗಳಾದರೂ ಏನು? ಮಂಪರು ಪರೀಕ್ಷೆ ಮಾಡಿ ಮನಸ್ಸಿನ ವಿವರಗಳನ್ನು ಪತ್ತೆ ಮಾಡುವ ಹಾಗೆ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಳ್ಳುವ ಪರಿಯನ್ನು ಅಳೆಯುವ ಮೀಟರು ಯಾವುದು ಅಂತ ಗೊತ್ತಿದೆಯಾ? ಖಂಡಿತಾ ಇಲ್ಲ.

ಯೌವನದ ರಸ ನಿಮಿಷಗಳಲ್ಲಿ ದೇಹ ಸುಖದ ಆತುರಗಳಲ್ಲಿ ಮಾತಾಡುವ ಮಾತುಗಳೆಲ್ಲಾ ಈ ಅರ್ಥವಂತಿಕೆಯ ಅರ್ಥದಲ್ಲೇ ಹುಟ್ಟಿಬಿಟ್ಟಿರುತ್ತವೆ. ಅದೇ ಹಲವು ವರ್ಷಗಳ ಬಳಿಕ ಅರ್ಥದ ಜಾಗದಲ್ಲಿ ಅಪಾರ್ಥ ಬಂದು ಕುಳಿತು ಅಲ್ಲೋಲ ಕಲ್ಲೋಲ ಮಾಡುತ್ತಿರುತ್ತದೆ. ಈ ಅರ್ಥ ಮತ್ತು ಅಪಾರ್ಥಗಳ ನಡುವಿನ ಕಾಲವಿದೆಯಲ್ಲ ಅದು ಕುಲುಮೆ. ಅಲ್ಲಿ ಕುಳಿತು ಕಾದು ಕೆಂಪಾದವರಿಗೆ ಮಾತ್ರ ಒಬ್ಬರು ಮತ್ತೊಬ್ಬರಿಗೆ ಅರ್ಥವಾಗಲು ಸಾಧ್ಯ. ಅದಕ್ಕೆ ಎಕ್ಸ್‌ಪೈರೀ ಡೇಟುಗಳಿಲ್ಲ ಇಂಥದ್ದೇ ಎಂಬ ಅಂತಿಮ ದಿನಾಂಕಗಳಿಲ್ಲ. ಅದು ಯಾವಾಗ ಬೇಕಾದರೂ ಎಲ್ಲಿ ಬೇಕಾದರೂ, ಹೇಗೆ ಬೇಕಾದರೂ ಆಗಬಹುದು. ವಯಸ್ಸಿನ ರಥ ಚಕ್ರ ನಮ್ಮ ಜೀವದ ಮೇಲೆ ಉರುಳಿ ಹೋದ ಕಾಲ ಹೇಳಿದ ಮಾತೇನು ಗೊತ್ತಾ! ಮೊದಲಿಗೆ ನಿನಗೆ ನೀನು ಅರ್ಥವಾಗು ಅಂತ.

ಬುದ್ಧನ ಮಂದಸ್ಮಿತದ ನಗುವಿನ ಅರ್ಥವೇನು? ಜಗತ್ತಿನ ಪ್ರೀತಿಗೇ ಪಾತ್ರನಾದ ಸಿದ್ಧಾರ್ಥ ತನ್ನ ಹೆಂಡತಿ ಯಶೋಧರಾಳಿಗೆ ಅರ್ಥವಾದದ್ದೆಷ್ಟು? ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಗಂಡ ಹೆಂಡತಿಯರಾಗಿ ಜೊತೆಗಿದ್ದ ಮಾತ್ರಕ್ಕೆ, ಗೆಳೆಯ ಗೆಳೆತಿಯರಾಗಿ ಸದಾ ಕಾಲ ಒಟ್ಟಿಗೇ ಇದ್ದ ಕಾರಣಕ್ಕೆ ನಾವು ಪರಸ್ಪರ ಅರ್ಥವಾಗಿ ಹೋಗಿದ್ದೀವಿ ಅಂದುಕೊಳ್ಳೋದು ಎಷ್ಟು ಸರಿ. ಏಕೆಂದರೆ ನಮ್ಮ ವ್ಯಕ್ತಿತ್ವವೇ ಅಂಥಾದ್ದು. ಗುಟ್ಟು ಬಿಟ್ಟುಕೊಡದ ಏಕಮುಖ ಸಂಚಾರಿ. ಮನಸ್ಸೆಂಬ ಸರ್ಕಲ್ಲಿನಲ್ಲಿ ಸಿಕ್ಕಾಪಟ್ಟೆ ಟ್ರಾಫಿಕ್ ಜಾಮ್, ಒಳಗೆ ಒಬ್ಬೊಬ್ಬರೇ ಆ್ಯಕ್ಟ್ ಮಾಡ್ತೀವಿ, ಮೈಮ್ ಮಾಡ್ತೀವಿ. ನಟರೂ ನಾವೇ ಪ್ರೇಕ್ಷಕರೂ ನಾವೆ. ಮನಸ್ಸೆಂಬ ಕನ್ನಡಿಯಲ್ಲಿ ನಮಗೆ ನಾವು ಕಾಣಿಸಲಿಕ್ಕೆ ಅದೆಷ್ಟು ಬೋಧಿ ವೃಕ್ಷಗಳು ಬೇಕು? ಬುದ್ಧ ಅದೆಷ್ಟು ಬಾರಿ ನಗಬೇಕೊ ಗೊತ್ತಿಲ್ಲ! ನಮ್ಮವರನ್ನ ಅರ್ಥವಾಡಿಕೊಳ್ಳುವ ಈ ನಿರಂತರ ಪ್ರಯಾಣದ ಮೈಲಿಗಲ್ಲು ಕೆಲವರಿಗೆ ತಡವಾಗಿ ಹಲವರಿಗೆ ಬಲವಾಗಿ, ಎಲ್ಲೆಂದರೆ ಅಲ್ಲಿ ಸಿಕ್ಕಿಬಿಡಬಹುದು. ಅರ್ಥವಾದವರದು ಸುಖಾಂತ. ಅಪಾರ್ಥವಾದವರದು ದುಃಖಾಂತ, ಬುದ್ಧನ ಮಂದಸ್ಮಿತದ ನಗು ಅರ್ಥವಾದರೆ ಮಾತ್ರ ಬದುಕು ಪ್ರಶಾಂತ, ಏನಂತೀರಿ?



ನೇಪಾಳದಲ್ಲಿ ಮತ್ತೆ 5.6ರಷ್ಟು ತೀವ್ರತೆಯ ಪ್ರಬಲ ಭೂಕಂಪನ; ನಡುಗಿದ ಉತ್ತರ ಭಾರತ!



ನವದೆಹಲಿ: ಕಳೆದ ಮೂರು ದಿನಗಳಿಂದ ಭೂಕಂಪನದಿಂದ 150ಕ್ಕೂ ಹೆಚ್ಚು ಜನರನ್ನು ಕಳೆದುಕೊಂಡಿರುವ ನೇಪಾಳದಲ್ಲಿ ಸೋಮವಾರ ಮತ್ತೆ ಪ್ರಬಲ ಭೂಕಂಪನ ಸಂಭವಿಸಿದೆ. ಪಶ್ಚಿಮ ನೇಪಾಳದಲ್ಲಿ 5.6 ತೀವ್ರತೆಯ ಭೂಕಂಪನವಾಗಿದೆ. ಇದರಿಂದ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಭೂಮಿ ಕಂಪಿಸಿದೆ ಎಂದು ರಾಷ್ಟ್ರೀಯ ಭೂಕಂಪಶಾಸ್ತ್ರದ ಕೇಂದ್ರ ತಿಳಿಸಿದೆ.

ಉತ್ತರ ಪ್ರದೇಶದ ಅಯೋಧ್ಯೆಯ ಉತ್ತರಕ್ಕೆ 233 ಕಿಲೋ ಮೀಟರ್ ದೂರದಲ್ಲಿ ಭೂಕಂಪದ ಕೇಂದ್ರ ಬಿಂದುವಿದೆ ಎಂದು ಅದು ಹೇಳಿದೆ.ದೆಹಲಿ ಮತ್ತು ಎನ್‌ಸಿಆರ್‌ನ ಹಲವೆಡೆ ಪೀಠೋಪಕರಣಗಳು ಅಲುಗಾಡಿದ ಬಗ್ಗೆ ವರದಿಯಾಗಿದ್ದು, ಭೂಕಂಪನ ಸ್ಥಳೀಯ ಜನರಲ್ಲಿ ಭೀತಿಯನ್ನುಂಟು ಮಾಡಿದೆ. ಹಲವಾರು ಸಾಮಾಜಿಕ ಮಾಧ್ಯಮ ಬಳಕೆದಾರರು ಜನರು ವಸತಿ ಕಟ್ಟಡಗಳಿಂದ ಹೊರಬರುವ ದೃಶ್ಯಗಳನ್ನು ಹಂಚಿಕೊಂಡಿದ್ದಾರೆ.

2015 ರ ನಂತರದ ಅತ್ಯಂತ ಭೀಕರವಾದ 6.4 ತೀವ್ರತೆಯ ಭೂಕಂಪವು ಶುಕ್ರವಾರ ರಾತ್ರಿ ನೇಪಾಳವನ್ನು ಅಪ್ಪಳಿಸಿತ್ತು. ಹಿಮಾಲಯ ರಾಷ್ಟ್ರದ ದೂರದ ಪರ್ವತ ಪ್ರದೇಶದಲ್ಲಿ ನೂರಾರು ಮನೆಗಳನ್ನು ನಾಶಪಡಿಸಿದ್ದು, ಕನಿಷ್ಠ 157 ಜನರು ಸಾವನ್ನಪ್ಪಿದ್ದಾರೆ ಮತ್ತು 160ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ನೇಪಾಳವು ಪ್ರಪಂಚದ ಅತ್ಯಂತ ಸಕ್ರಿಯವಾದ ಟೆಕ್ಟೋನಿಕ್ ವಲಯಗಳಲ್ಲಿ ಒಂದಾಗಿದ್ದು, ದೇಶ ಭೂಕಂಪದಿಂದ ಅತ್ಯಂತ ಜರ್ಝರಿತವಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸುತ್ತೂರು ಶ್ರೀಗಳು ಅಂತಃಕರಣವುಳ್ಳ ಗುರುಗಳು

ಬಿಡಿಎ ಆಯುಕ್ತ ಎನ್.ಜಯರಾಂ ಅಭಿಮತ



ಮೈಸೂರು, ನ.6(ಜಿಎ)–ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ದೂರದೃಷ್ಟಿಯುಳ್ಳವರಾಗಿದ್ದರು. ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳೂ ತಮ್ಮ ಗುರುವಿನಂತೆ ಅಂತಃಕರಣವುಳ್ಳವರಾಗಿದ್ದಾರೆ. ಸುತ್ತೂರು ಪೀಠಕ್ಕೆ ಎಂತಹವರಿಗೂ ತಿಳಿ ಹೇಳುವ ಘನತೆಯಿದ್ದು, ಇಲ್ಲಿನ ಗುರು ಪರಂಪರೆಯೇ ಅದಕ್ಕೆ ಕಾರಣ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಆಯುಕ್ತ ಎನ್.ಜಯರಾಂ ತಿಳಿಸಿದರು.

ಮೈಸೂರಿನ ಶಿವರಾತ್ರಿ ರಾಜೇಂದ್ರ ವಿದ್ಯಾರ್ಥಿನಿಲಯದಲ್ಲಿ ಭಾನುವಾರ ನಡೆದ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯ 108ನೇ ಜಯಂತಿ ಮಹೋತ್ಸವದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಾನು ಆಶ್ರಯಕ್ಕಾಗಿ ಯಾವುದೇ ಹಣವಿಲ್ಲದೆ ಸ್ವಾಮೀಜಿ ಮುಂದೆ ನಿಂತಾಗ, ನನ್ನ ಹಾಸ್ಟೆಲ್ ಅರ್ಜಿಯಲ್ಲಿ 'ಎಫ್‌ಎಫ್' ಎಂದು ಬರೆದು ಕಳಿಸಿದ್ದರು. ಎಫ್‌ಎಫ್ ಎಂದರೆ 'ಫುಲ್ ಫ್ರೀ' ಯಾಗಿ ಹಾಸ್ಟೆಲ್ ಸೌಲಭ್ಯ ನೀಡಿ ಎಂದು. ಆ ಸಹಾಯ ನನ್ನ ಭವಿಷ್ಯ ರೂಪುಗೊಳ್ಳಲು ಸಹಕಾರಿಯಾಯಿತು ಎಂದು ಸ್ಮರಿಸಿದರು.

ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಮಾತನಾಡಿ, ಶಿಕ್ಷಣ ನೀಡಲು ಹಲವು ಸಂಸ್ಥೆಗಳಿವೆ. ಆದರೆ, ಮೌಲ್ಯಧಾರಿತ ಶಿಕ್ಷಣ ಕೆಲವೆಡೆ ಮಾತ್ರ ಸಿಗುತ್ತದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ನನ್ನ ಶೈಕ್ಷಣಿಕ ಜೀವನದ ಅಮೂಲ್ಯವಾದ 8 ವರ್ಷಗಳನ್ನು ಕಳೆದಿದ್ದೇನೆ. ಇಲ್ಲಿ ದೊರೆತ ಅನುಭವ ನನ್ನ ವ್ಯಕ್ತಿತ್ವದ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ಶಿವರಾತ್ರಿ ರಾಜೇಂದ್ರ ಶ್ರೀಗಳಿಂದ ಅಭಿವೃದ್ಧಿ ಹೊಂದಿದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಮೌಲ್ಯಯುತ ಶಿಕ್ಷಣ ನೀಡುವಲ್ಲಿ ಸಮರ್ಥವಾಗಿವೆ. ಒಂದು ಸರ್ಕಾರ ಮಾಡಬಲ್ಲ ಕೆಲಸಗಳನ್ನು ಸಂಸ್ಥೆ ಮಾಡುತ್ತಿದ್ದು, ಸಮಾಜವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತಿದೆ. ವಿದ್ಯಾರ್ಥಿಗಳು ಕೂಡ ಸ್ಪಷ್ಟ ಗುರಿಯೊಂದಿಗೆ ಉತ್ತಮ ಸ್ಥಾನ ತಲುಪಲು ಪ್ರಯತ್ನಿಸಿ, ಅಡ್ಡದಾರಿಯತ್ತ ಎಂದೂ ಸಾಗಬೇಡಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಎಲ್.ರೇವಣ್ಣ ಸಿದ್ದಯ್ಯ, ಜೆಎಸ್‌ಎಸ್ ಕಾಲೇಜು ಕನ್ನಡ ವಿಭಾಗ ಮುಖ್ಯಸ್ಥೆ ಮಹೇಶ್ವರಿ ಇದ್ದರು.

'ಭಾರತ್ ಅಟ್ಟಾ' ಪ್ರತಿ ಕೆಜಿಗೆ ರೂ. 27.50ರ ಸಬ್ಸಿಡಿ ದರದಲ್ಲಿ ಗೋಧಿ ಹಿಟ್ಟು ಮಾರಾಟಕ್ಕೆ ಚಾಲನೆ



ನವದೆಹಲಿ: ದೀಪಾವಳಿ ಹಬ್ಬಕ್ಕೂ ಮುನ್ನ, ಗ್ರಾಹಕರಿಗೆ ಕಡಿಮೆ ಬೆಲೆಗೆ ಗೋಧಿ ಹಿಟ್ಟು ಲಭ್ಯವಾಗುವಂತೆ ಮಾಡಲು ದೇಶಾದ್ಯಂತ 'ಭಾರತ್ ಅಟ್ಟಾ' ಬ್ರಾಂಡ್‌ನಲ್ಲಿ ಕೆಜಿಗೆ ರೂ 27.50ರ ಸಬ್ಸಿಡಿ ದರದಲ್ಲಿ ಗೋಧಿ ಹಿಟ್ಟಿನ ಮಾರಾಟವನ್ನು ಕೇಂದ್ರ ಸರ್ಕಾರ ಪ್ರಾರಂಭಿಸಿದೆ.

'ಭಾರತ್ ಅಟ್ಟಾ'ವನ್ನು ಸಹಕಾರಿ ಸಂಸ್ಥೆಗಳಾದ ಎನ್‌ಎಫ್‌ಇಡಿ, ಎನ್‌ಸಿಸಿಎಫ್ ಮತ್ತು ಕೇಂದ್ರೀಯ ಭಂಡಾರ ಮೂಲಕ 800 ಸಂಚಾರಿ ವಾಹನಗಳು ಮತ್ತು 2,000ಕ್ಕೂ ಹೆಚ್ಚು ಸರ್ಕಾರಿ ಮಳಿಗೆಗಳ ಮೂಲಕ ದೇಶಾದ್ಯಂತ ಮಾರಾಟ ಮಾಡಲಾಗುವುದು. ಸಬ್ಸಿಡಿ ದರವು ಗುಣಮಟ್ಟ ಮತ್ತು ಸ್ಥಳದ ಆಧಾರದ ಮೇಲೆ ಚಾಲ್ತಿಯಲ್ಲಿರುವ ಮಾರುಕಟ್ಟೆ ದರ 36–70 ರೂ. ಗಳಿಗಿಂತಲೂ ಕಡಿಮೆಯಾಗಿರುತ್ತದೆ. ಫೆಬ್ರವರಿಯಲ್ಲಿ ಬೆಲೆ ಸ್ಥಿರೀಕರಣ ನಿಧಿ ಯೋಜನೆಯ ಭಾಗವಾಗಿ ಕೆಲವು ಮಳಿಗೆಗಳಲ್ಲಿ ಈ ಸಹಕಾರಿ ಒಕ್ಕೂಟಗಳ ಮೂಲಕ ಪ್ರತಿ ಕೆಜಿಗೆ 29.50 ರೂ. ಗೆ 18,000 ಟನ್ 'ಭಾರತ್ ಅಟ್ಟಾ'ದ ಪ್ರಾಯೋಗಿಕ ಮಾರಾಟವನ್ನು ನಡೆಸಿತು.


ನವದೆಹಲಿಯ ಕರ್ತವ್ಯ ಪಥದಲ್ಲಿ 'ಭಾರತ್ ಅಟ್ಟಾ'ದ 100 ಸಂಚಾರಿ ವಾಹನಗಳಿಗೆ ಚಾಲನೆ ನೀಡಿದ ಕೇಂದ್ರ ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪಿಯೂಷ್ ಗೋಯಲ್, ಪ್ರಾಯೋಗಿಕ ಪರೀಕ್ಷೆ ನಡೆಸಿ ಯಶಸ್ವಿಯಾಗಿದ್ದೇವೆ, ನಾವು ದೇಶದೆಲ್ಲೆಡೆ ಕೆಜಿಗೆ 27.50 ರೂ. ದರದಲ್ಲಿ ಗೋಧಿ ಹಿಟ್ಟು ದೊರೆಯಲಿದೆ ಎಂದು ತಿಳಿಸಿದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ನ.6– ರಾಮಕೃಷ್ಣನಗರ ಉಪವಿಭಾಗದ ಕಾಮಗಾರಿ ನಿಮಿತ್ತ ನ.7ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ರವರೆಗೆ ಮದ್ದೂರು, ಮದ್ದೂರು ಹುಂಡಿ, ಎಸ್.ಕಲ್ಲಹಳ್ಳಿ, ಗುಮ್ಮಚನಹಳ್ಳಿ, ಸಿ.ಆರ್.ಹುಂಡಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ, ಸಾರ್ವಜನಿಕರು ಸಹಕರಿಸಬೇಕೆಂದು ಎಂದು ವಿ.ವಿ ಮೊಹಲ್ಲಾ ವಿಭಾಗದ, ಸೆಸ್ಕ್ ಪ್ರಕಟಣೆ ತಿಳಿಸಿದೆ.



ಎಂಎಂಸಿಆರ್‌ಐ ಆವರಣದಲ್ಲಿ ಇಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆ ಪ್ರತಿಷ್ಠಾಪನೆ



ಮೈಸೂರು, ನ. 6(ಆರ್‌ಕೆ)– ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (ಎಂಎಂಸಿ ಮತ್ತು ಆರ್‌ಐ) ಆವರಣದಲ್ಲಿ ನಾಳೆ (ನ. 7) ಬೆಳಗ್ಗೆ 10 ಗಂಟೆಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗುವುದು.

ಮೈಸೂರು ಮೆಡಿಕಲ್ ಕಾಲೇಜಿನ 1962ನೇ ತಂಡದ ವಿದ್ಯಾರ್ಥಿಗಳು, ಮಾ ಅಸೋಸಿಯೇಷನ್ ಸಹಯೋಗದಲ್ಲಿ ಸಂಸ್ಥೆಯ ಶತಮಾನೋತ್ಸವ ಆಚರಣೆ ಅಂಗವಾಗಿ ಸಂಸ್ಥಾಪಕರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಮೆಯನ್ನು ಸಿದ್ಧಪಡಿಸಿದ್ದಾರೆ. ವಾರದ ಬಳಿಕ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಪ್ರತಿಮೆಯನ್ನು ಅನಾವರಣಗೊಳಿಸುವರು. 15 ದಿನಗಳ ಹಿಂದಷ್ಟೇ ಪ್ರತಿಮೆ ಪ್ರತಿಷ್ಠಾಪಿಸಲು ಸ್ಥಳದಲ್ಲಿ ಅಡಿಪಾಯ ಮತ್ತು ವೇದಿಕೆ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ವರ್ಗಾವಣೆ ದಂಧೆ, ಆಪರೇಷನ್ ಹಸ್ತ, ಕಮಿಷನ್ ವಸೂಲಿ, ಡಿನ್ನರ್–ಬ್ರೇಕ್‌ಫಾಸ್ಟ್ ಸಭೆಗಳತ್ತ ಗಮನ!

● ಬರ ಪರಿಹಾರ ಕಾಮಗಾರಿ ಕೈಗೊಳ್ಳುವಲ್ಲಿ ಸಿದ್ದರಾಮಯ್ಯ ವಿಫಲ ● ಮಾಜಿ ಸಿಎಂ ಕುಮಾರಸ್ವಾಮಿ ಕಿಡಿನುಡಿ ● ಬರೀ ಕುತ್ತಿಗೆಗೆ ಗ್ಯಾರಂಟಿ ಕಾರ್ಡ್ ತಗಲಾಕಿಕೊಂಡು ಓಡಾಡಿದ್ದೇ ಆಯ್ತು! ● ನಮ್ಮ 'ರೈತ ಸಾಂತ್ವನ ಯಾತ್ರೆ' ಸ್ವಾಗತಿಸುವುದಕ್ಕೆ ಅಭಿನಂದನೆ

ಬೆಂಗಳೂರು, ನ.6(ಕೆಎಂಶಿ)– ವರ್ಗಾವಣೆ ದಂಧೆ, ಕಮಿಷನ್ ವಸೂಲಿ, ಆಪರೇಷನ್ ಹಸ್ತ, ಡಿನ್ನರ್–ಬ್ರೇಕ್‌ಫಾಸ್ಟ್ ಸಭೆಗಳನ್ನು ನಡೆಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಬರ ಪರಿಹಾರ ಕಾಮಗಾರಿ ಕೈಗೊಳ್ಳಲು ವಿಫಲರಾಗಿದ್ದಾರೆಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿ ಕಾರಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್ ಮಾಡಿರುವ ಅವರು, ನೀವು ರಾಜ್ಯದ ಮುಖ್ಯಮಂತ್ರಿ. ದೆಹಲಿಗೆ ತೆರಳಿ ಪ್ರಧಾನಿಗಳಿಗೆ ವಸ್ತುಸ್ಥಿತಿ ಮನವರಿಕೆ ಮಾಡಿಕೊಡಬೇಕಿತ್ತು. ಅದನ್ನು ಮಾಡಲಿಲ್ಲ. ಪ್ರತಿಷ್ಠೆ ನಿಮಗೆ. ಪ್ರಧಾನಿಗಳನ್ನು ಸದಾ ನಿಂದಿಸುತ್ತಾ ಕುಳಿತು ಇಲ್ಲಿ ದಂಧೆಯಲ್ಲೇ ತೊಡಗಿದರೆ ಏನು ಪ್ರಯೋಜನ ಎಂದು ಟೀಕಿಸಿದ್ದಾರೆ.

ಕೇವಲ ವಸೂಲಿಗಾಗಿ ನಿರಂತರ ಸಭೆಗಳನ್ನು ಮಾಡುವುದಲ್ಲದೆ, ಆಪರೇಷನ್ ಹಸ್ತ ಮಾಡಲು ಸಚಿವರಿಗೆ ಟಾರ್ಗೆಟ್ ನೀಡುತ್ತೀರಿ. ಅದರ ಬದಲು ಬರ ಪರಿಹಾರದ ಟಾರ್ಗೆಟ್ ನೀಡಬಾರದೇಕೆ ಎಂದು ಪ್ರಶ್ನಿಸಿದ್ದಾರೆ. ಕುತ್ತಿಗೆಗೆ ಗ್ಯಾರಂಟಿ ಬೋರ್ಡ್ ಹಾಕಿಕೊಂಡು, ಹಾದಿ–ಬೀದಿಯಲ್ಲಿ ಓಡಾಡುತ್ತೀರಿ. 5 ತಿಂಗಳಿಗೆ ಭದ್ರತೆಯ ಗ್ಯಾರಂಟಿ ಇಲ್ಲದೆ, ಬಾಲಗ್ರಹಪೀಡಿತ ನಿಮ್ಮ ಸರ್ಕಾರವು ಭಿನ್ನಮತ ಪೀಡಿತವಾಗಿದೆ. ಕುರ್ಚಿ ಉಳಿಸಿಕೊಳ್ಳಲು ನೀವು ಹೆಣಗಾಡುತ್ತಿದ್ದೀರಿ, ಹೌದಲ್ಲವೇ ಎಂದು ಕೆಣಕಿದ್ದಾರೆ.

ನಾವು ಹಮ್ಮಿಕೊಳ್ಳಲಿರುವ ರೈತ ಸಾಂತ್ವನ ಯಾತ್ರೆ ಬಗ್ಗೆ ಲಘುವಾಗಿ ಹೇಳಿಕೆ ಕೊಟ್ಟಿರುವ ಸಿದ್ದರಾಮಯ್ಯ ಅವರಿಗೆ ತೀವ್ರ ತಿರುಗೇಟು ಕೊಟ್ಟಿರುವ ಅವರು, ನಿಮಗೆ ರಾಜ್ಯದ ಬರ ಮತ್ತಿತರೆ ಸಂಕಷ್ಟಗಳಿಗಿಂತ ಜೆಡಿಎಸ್–ಬಿಜೆಪಿ ಮೈತ್ರಿಯೇ ಬಹುದೊಡ್ಡ ಸಂಕಷ್ಟವಾಗಿ ಪರಿಣಮಿಸಿದಂತೆ ತೋರುತ್ತಿದೆ. ಪ್ರತಿಪಕ್ಷಗಳ ಕೆಲಸ ಗುರುತಿಸುವ ನಿಮ್ಮ ಹೃದಯ ವೈಶಾಲ್ಯತೆಗೆ ನಾನು ಆಭಾರಿ. ರೈತ ಸಾಂತ್ವನ ಯಾತ್ರೆಯನ್ನು ಸ್ವಾಗತ ಮಾಡಿರುವ ನಿಮ್ಮ ದೊಡ್ಡ ಗುಣವನ್ನು ಮನಸಾರೆ ಕೊಂಡಾಡುತ್ತೇನೆ. ಜೆಡಿಎಸ್ ಸಲ್ಲಿಸಲಿರುವ ಬರ ಅಧ್ಯಯನ ವರದಿಯನ್ನು ಗಂಭೀರವಾಗಿ ಪರಿಗಣಿಸುವುದಾಗಿ ಹೇಳಿದ್ದೀರಿ, ಬಹಳ ಸಂತೋಷ ಎಂದು ಅವರು ಟಾಂಗ್ ನೀಡಿದ್ದಾರೆ.

> “ರಾಜ್ಯದ ನೆಲ–ಜಲ, ಇನ್ನಿತರೆ ಸಂಕಷ್ಟದ ವೇಳೆ ಈ ಇಳಿವಯಸ್ಸಿನಲ್ಲಿಯೂ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅವರು ನಡೆಸುತ್ತಿರುವ ಹೋರಾಟ ನಿಮಗೆ ಕಾಣಿಸುತ್ತಿಲ್ಲವೇ. ಕಾವೇರಿ ಬಗ್ಗೆ ಅವರು ಸಂಸತ್ತಿನಲ್ಲಿ ಸಿಡಿದೆದ್ದಾಗ ನಿಮ್ಮ ಪಕ್ಷದ ಸದಸ್ಯರೆಲ್ಲರೂ ಎಲ್ಲಿ ಅವಿತು ಕುಳಿತಿದ್ದರು. ಜೆಡಿಎಸ್, ಬಿಜೆಪಿ ಶಾಸಕರು ಹಾಗೂ ಸೋತ ಅಭ್ಯರ್ಥಿಗಳನ್ನು ಆಪರೇಷನ್ ಹಸ್ತ ಮಾಡಲು ಅವರ ಮನೆಗಳ ಮುಂದೆ ಕತ್ತಲಾದ ಮೇಲೆ ಹೊಂಚು ಹಾಕಿ ಕೂರುತ್ತಿದ್ದೀರಿ ಎಂದು ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.



'ರೈತ ಸಾಂತ್ವನ ಯಾತ್ರೆ'ಯ ಅನುಭವವನ್ನು ಕೇಂದ್ರದ ಜತೆಗೂ ಹಂಚಿಕೊಳ್ಳುತ್ತೇವೆ. ನಿಮಗೆ ಸಂಶಯ ಬೇಡ. ರಾಜ್ಯದ ಅಗತ್ಯಗಳಿಗೆ ಕೇಂದ್ರ ಸರಕಾರ ಹೇಗೆ ಸ್ಪಂದಿಸುತ್ತಿದೆ, ಅದಕ್ಕೆ ನಿಮ್ಮ ನೇತೃತ್ವದ ಸರಕಾರ ಎಷ್ಟು ಗಂಭೀರ ಪ್ರಯತ್ನ ಮಾಡಿದೆ, ಮಾಡುತ್ತಿದೆ ಎನ್ನುವುದು ನನಗೂ ತಿಳಿದಿದೆ. ಬರದ ಜತೆಗೆ, ವಿದ್ಯುತ್ ಬಿಕ್ಕಟ್ಟು, ಕಾವೇರಿ ಸಂಕಷ್ಟದ ವಿಷಯದಲ್ಲಿ ನಿಮ್ಮ ಸರಕಾರದ ಅಪರಿಮಿತ ಅಸಡ್ಡೆಯನ್ನು ಅರಿಯದಷ್ಟು ಮುಗ್ಧರು ನಾವಲ್ಲ ಎಂದು ಸಿಎಂಗೆ ಕುಮಾರಸ್ವಾಮಿ ಖಾರವಾಗಿ ಪ್ರಶ್ನಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಹೆಚ್.ಡಿ.ದೇವೇಗೌಡ ಹಾಗೂ ಅವರ ಕುಟುಂಬದೊಂದಿಗೆ ಆತ್ಮೀಯತೆ ಇದೆ ಎಂಬುದರಲ್ಲಿ ಎರಡು ಮಾತಿಲ್ಲ. ಬಿಜೆಪಿ–ಜೆಡಿಎಸ್ ನಡುವೆ ಮೈತ್ರಿ ಏರ್ಪಟ್ಟಿದೆ ಎನ್ನುವುದೂ ನಿಜ. ರಾಜ್ಯದ ಹಿತಕ್ಕಾಗಿ ನಾವು ಪ್ರಧಾನಿಯವರ ಮುಂದೆಯೂ ದನಿ ಎತ್ತುತ್ತೇವೆ. ಅದು ನಮ್ಮ ಬದ್ಧತೆ. ಆದರೆ, ನಿಮಗೆ ರಾಜ್ಯದ ಬರ ಮತ್ತಿತರೆ ಸಂಕಷ್ಟಗಳಿಗಿಂತ ಈ ಮೈತ್ರಿಯೇ ಬಹುದೊಡ್ಡ ಸಂಕಷ್ಟವಾಗಿ ಪರಿಣಮಿಸಿದಂತೆ ತೋರುತ್ತಿದೆ, ಅಲ್ಲವೇ ಎಂದು ಅವರು ಪ್ರಶ್ನಿಸಿದ್ದಾರೆ.

ಪ್ರತಿಪಕ್ಷಗಳಾಗಿ ನಮ್ಮ ಪ್ರಯತ್ನ ನಾವು ಮಾಡುತ್ತೇವೆ, ಸರಕಾರವಾಗಿ ನಿಮ್ಮ ಸಾಧನೆ ಏನು, ಎಷ್ಟು ರೈತರಿಗೆ ಬೆಳೆ ವಿಮೆ ಕೊಡಿಸಿದ್ದೀರಿ, ಸರಕಾರದ ವತಿಯಿಂದ ಎಷ್ಟು ಪರಿಹಾರ ನೀಡಿದ್ದೀರಿ, ಅದನ್ನು ಹೇಳಬೇಕೇ ಹೊರತು, ಮಿತ್ರರ ನಡುವೆ ಹುಳಿ ಹಿಂಡುವ ಕೆಲಸ ಮಾಡಬಾರದು ಎಂಬುದು ನನ್ನ ವಿನಮ್ರ ಪ್ರಶ್ನೆ ಎಂದಿದ್ದಾರೆ.

ರಾಜ್ಯದ 236 ತಾಲೂಕುಗಳ ಪೈಕಿ 216 ಬರಪೀಡಿತ ಎಂಬ ಲೆಕ್ಕ ಕೊಟ್ಟಿದ್ದೀರಿ. 33,710 ಕೋಟಿ ರೂ. ಮೌಲ್ಯದ ಬೆಳೆ ಹಾನಿ ಆಗಿದ್ದು, ಕೇಂದ್ರಕ್ಕೆ 17,901 ಕೋಟಿ ರೂ. ಪರಿಹಾರಕ್ಕೆ ಮನವಿ ಸಲ್ಲಿಸಲಾಗಿದೆ ಎಂದು ಹೇಳಿದ್ದೀರಿ. ಜೊತೆಗೆ, 43 ಕೋಟಿ ರೂ. ಬಿಡುಗಡೆ ಮಾಡಿದ್ದೇವೆ ಎಂದೂ ತಿಳಿಸಿದ್ದೀರಿ. ಅದನ್ನು ಯಾರಿಗೆ ಹಂಚಿದ್ದೀರಿ ಎಂದು ಪ್ರಶ್ನಿಸಿದ್ದಾರೆ. ರಾಜ್ಯದಲ್ಲಿ ಅತೀ ಹೆಚ್ಚು ಬಜೆಟ್ ಮಂಡಿಸಿ ವಿಶ್ವವಿಖ್ಯಾತ ವಿತ್ತ ತಜ್ಞರಂತೆ ಮೆರೆಯುತ್ತಿರುವವರು ನೀವು, ಅಧಿಕಾರಕ್ಕೆ ಬಂದೊಡನೆ ವಿಶೇಷವಾಗಿ ವಿತ್ತ ಖಾತೆಯನ್ನು ತಮ್ಮಲ್ಲಿಯೇ 'ಜೋಪಾನ' ಮಾಡಿಕೊಳ್ಳುವ ನಿಮಗೆ, ಕೇಂದ್ರ ಸರಕಾರವು ಬರಕ್ಕೆ, ಪ್ರವಾಹಕ್ಕೆ ಯಾವ ರೀತಿ ಪರಿಹಾರ ಕೊಡುತ್ತದೆ ಎನ್ನುವ ಸಾಮಾನ್ಯ ತಿಳಿವಳಿಕೆಯೂ ಇಲ್ಲವೇ ಎಂದು ಸಿದ್ದರಾಮಯ್ಯ ಅವರಿಗೆ ತಿರುಗೇಟು ನೀಡಿದ್ದಾರೆ.

ನೀವು ಈ ರಾಜ್ಯದ ಮುಖ್ಯಮಂತ್ರಿಯಾಗಿ ದೆಹಲಿಗೆ ಹೋಗಿ ಪ್ರಧಾನಿಗಳಿಗೆ ವಸ್ತುಸ್ಥಿತಿ ಮನವರಿಕೆ ಮಾಡಿಕೊಡಬೇಕಿತ್ತು. ಅದನ್ನೂ ಮಾಡಲಿಲ್ಲ. ನೀವು ಕರೆದೊಯ್ಯುವ ಸರ್ವಪಕ್ಷ ನಿಯೋಗದಲ್ಲಿ ಜೆಡಿಎಸ್ ಇರುತ್ತದೆ, ನಮ್ಮ ಮಿತ್ರಪಕ್ಷ ಬಿಜೆಪಿಯೂ ಇರುತ್ತದೆ. ಇನ್ನೊಬ್ಬರ ಧೈರ್ಯದ ಬಗ್ಗೆ ಮಾತನಾಡುವ ನೀವು, ನಿಮ್ಮ ಸ್ಥೈರ್ಯದ ಬಗ್ಗೆಯೂ ಕೊಂಚ ಹೇಳಬೇಕಲ್ಲವೇ, ಮುಖ್ಯಮಂತ್ರಿಯಾಗಿ ನೀವು ರಾಜ್ಯಕ್ಕೆ ಸಂಬಂಧಿಸಿ ಪ್ರಧಾನಿ ಹಾಗೂ ಯಾವ ಕೇಂದ್ರ ಸಚಿವರನ್ನು ಎಷ್ಟು ಸಲ ಭೇಟಿ ಆಗಿದ್ದೀರಿ, ಎಷ್ಟು ಅರ್ಜಿ ಕೊಟ್ಟಿದ್ದೀರಿ ಎಂಬ ವಿವರ ನೀಡಿ ಎಂದರು.

ಮುಖ್ಯಮಂತ್ರಿ ಅಭಿವೃದ್ಧಿಯತ್ತ ಗಮನ ನೀಡಬೇಕೇ ಹೊರತು ಬೆಳಗೆದ್ದು ಪ್ರಧಾನಿ ಅವರ ತೇಜೋವಧೆ ಮಾಡೋದಲ್ಲ

● ಸಿದ್ದರಾಮಯ್ಯರಿಗೆ ಕೇಂದ್ರ ಸಚಿವ ನಾರಾಯಣಸ್ವಾಮಿ ಕಿವಿಮಾತು
● ಉಚಿತ ರಿಯಾಯಿತಿಯಿಂದ ರಾಜ್ಯದ ಅಭಿವೃದ್ಧಿ ಕುಂಠಿತ

ಬೆಂಗಳೂರು,ನ.6(ಕೆಎಂಶಿ)– ಮುಖ್ಯಮಂತ್ರಿ ಆದವರು ಅಭಿವೃದ್ಧಿ ಕಡೆಗೆ ಆದ್ಯತೆ ನೀಡಬೇಕೇ ಹೊರತು ಪ್ರಧಾನಿ ಅವರ ಬಗ್ಗೆ ನಿತ್ಯ ಮಾತನಾಡುವುದು ಸರಿಯಲ್ಲ ಎಂದು ಕೇಂದ್ರ ಸಾಮಾಜಿಕ ನ್ಯಾಯ, ಸಬಲೀಕರಣ ಖಾತೆ ಸಚಿವ ಎ. ನಾರಾಯಣ ಸ್ವಾಮಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅನವಶ್ಯಕವಾಗಿ, ರಾಜಕಾರಣಕ್ಕಾಗಿ ನಾನು ಚರ್ಚೆ ಮಾಡುವುದಿಲ್ಲ. ಒಂದು ರಾಜ್ಯದ ಮುಖ್ಯಮಂತ್ರಿ ಆದ ನೀವು ಯಾವಾಗಲೂ ಅಭಿವೃದ್ಧಿ ವಿಚಾರಗಳ ಬಗ್ಗೆ ಗಮನ ಹರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರಿತು ಹೇಳಿದರು.

ರಾಜಕಾರಣ ನಿಂತ ನೀರಲ್ಲ, ಬದಲಾವಣೆ ಆಗುತ್ತಿರುತ್ತದೆ. ಮುಖ್ಯಮಂತ್ರಿಯಾಗಿ ಪ್ರಧಾನಿ ಅವರ ತೇಜೋವಧೆ ಮಾಡುವುದು ಸರಿಯಲ್ಲ ಎಂದ ಅವರು, ಕೇಂದ್ರದ ಯೋಜನೆಗಳಿಗೆ ನಾವು ಹಣವನ್ನು ನಿಲ್ಲಿಸಿಲ್ಲ, ಕೇಂದ್ರದ ಪಾಲಿನ ಹಣವನ್ನು ನೀಡಲಾಗುತ್ತಿದೆ. ಬಜೆಟ್ ಅನುದಾನಕ್ಕಿಂತ ಹೆಚ್ಚು ಉಚಿತ ರಿಯಾಯಿತಿ ನೀಡಿರುವ ರಾಜ್ಯಗಳಲ್ಲಿ ಅಭಿವೃದ್ಧಿ ಕುಂಠಿತವಾಗಿದೆ ಎಂದರು. ವಿದ್ಯಾರ್ಥಿವೇತನ ನೀಡಲು ಸಮಸ್ಯೆ ಇಲ್ಲ... ಆದರೆ, ಸಲ್ಲಿಕೆಯಾಗಿರುವ ಅರ್ಜಿಗಳ ಪರಿಶೀಲನೆ ವಿಳಂಬವಾಗುತ್ತಿದೆ. ವಿದ್ಯಾರ್ಥಿ ವೇತನಕ್ಕೆ 395 ಕೋಟಿ ರೂ. ಒದಗಿಸಲಾಗಿದೆ, ರಾಜ್ಯದ ಎಸ್‌ಇಪಿ, ಟಿಎಸ್‌ಪಿ ಯೋಜನೆಯ ಪ್ರತಿ ಪರಿಶೀಲನೆ ನಡೆಸಿದ್ದು, ಅದರಲ್ಲಿ ವಿದ್ಯಾರ್ಥಿ ವೇತನದ ಅರ್ಜಿ ವಿಲೇವಾರಿಗೆ ಸೂಚನೆ ನೀಡಲಾಗಿದೆ. ಈಕ್ವಿಟಿ ಷೇರ್‌ಗಳನ್ನು ಎಸ್‌ಸಿ – ಎಸ್‌ಟಿ ನಿಗಮಗಳಿಗೆ ನೀಡಲಾಗುತ್ತಿದ್ದರೂ ಕೆಲವು ರಾಜ್ಯಗಳು ಬಳಸಿಕೊಂಡಿಲ್ಲ.



ಎಸ್‌ಸಿ–ಎಸ್‌ಟಿ ಸಮುದಾಯದವರು ಉದ್ದಿಮೆ ಪ್ರಾರಂಭ ಮಾಡುವಾಗ ಅವರಿಗೆ ಸಿಬಿಎಸ್ ಸ್ಕೋರ್ ಪರಿಗಣಿಸದಂತೆ ಬ್ಯಾಂಕ್‌ಗಳಿಗೆ ಸೂಚಿಸಲಾಗಿದೆ, ಅಲ್ಲದೆ, ಯೋಜನೆಗಳ ಪ್ರದರ್ಶನ ಫಲಕಗಳನ್ನು ಹಾಕಲು ನಿರ್ದೇಶನ ನೀಡಲಾಗಿದೆ. ರಾಜ್ಯದಲ್ಲಿ ಎಸ್‌ಇಪಿ ಹಣವನ್ನು ಬೇರೆ–ಬೇರೆ ಯೋಜನೆಗಳಿಗೆ ಖರ್ಚು ಮಾಡಲಾಗುತ್ತಿದೆ, ಈ ಬಗ್ಗೆ ದೂರುಗಳಿದ್ದರೂ ಸೂಕ್ತ ಕ್ರಮ ಜರುಗಿಸುತ್ತಿಲ್ಲ ಎಂದು ನಾರಾಯಣ ಸ್ವಾಮಿ ಬೇಸರ ವ್ಯಕ್ತಪಡಿಸಿದರು.

ಬಗರ್‌ಹುಕುಂ ಸಾಗುವಳಿ ಸಕ್ರಮಕ್ಕೆ ಅರ್ಜಿ ಸಲ್ಲಿಸಿದವರು ಒಂದೇ ಸರ್ವೆ ನಂಬರ್‌ನಲ್ಲಿದ್ದರೂ ಮೇಲ್ವರ್ಗದವರಿಗೆ ಮಂಜೂರು ಮಾಡಿ ಎಸ್‌ಸಿ–ಎಸ್‌ಟಿ ಸಮುದಾಯದವರ ಅರ್ಜಿಗಳನ್ನು ನಿರ್ಲಕ್ಷಿಸಲಾಗಿದೆ, ಈ ಬಗ್ಗೆ ತನಿಖೆಗೆ ಸೂಚಿಸಲಾಗಿದೆ ಎಂದು ಹೇಳಿದರು.

ಇಂದು ಮನೆ ಮದ್ದು, ಉಚಿತ ಔಷಧಿ ಸಸ್ಯಗಳ ವಿತರಣೆ

ಮೈಸೂರು,ನ.6– ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ 8ನೇ ಆಯುರ್ವೇದ ದಿನಾಚರಣೆ ಅಂಗವಾಗಿ ನ.7ರಂದು ಬೆಳಗ್ಗೆ 9.30ಕ್ಕೆ ದ್ರವ್ಯಗುಣ ಮತ್ತು ರಸಶಾಸ್ತ ಮತ್ತು ಭೈಷಜ್ಯ ಕಲ್ಪನ ವಿಭಾಗದ ವತಿಯಿಂದ ಮನೆ ಮದ್ದು ಮತ್ತು ಉಚಿತ ಔಷಧಿ ಸಸ್ಯಗಳ ವಿತರಣಾ ಕಾರ್ಯಕ್ರಮವನ್ನು ಸರಸ್ವತಿಪುರಂ, ಚಂದ್ರವನ ಸಸ್ಯೋದ್ಯಾನದ ಈಜುಕೊಳದ ಹತ್ತಿರ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸುವರು. ಡಾ.ಕೆ.ಎಸ್. ರಾಧಾಕೃಷ್ಣ ರಾಮರಾವ್ ಅಧ್ಯಕ್ಷತೆ ವಹಿಸಲಿದ್ದು, ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆಯ ಸದಸ್ಯರಾದ ಸಿ.ವೇದಾವತಿ ಮುಖ್ಯಅತಿಥಿಗಳಾಗಿ ಭಾಗವಹಿಸುವರು. ಹೆಚ್ಚಿನ ಮಾಹಿತಿಗಾಗಿ ಡಾ. ಶಿವಲಿಂಗ ಬೆಂಡಿಕಾಯಿ ದೂ.ಸಂ– 9886613046, ಡಾ.ಸತೀಶ್ ಎಂ.ಎಸ್ ದೂ.ಸಂ– 8123860286 ಸಂಪರ್ಕಿಸಬಹುದು.

ಜನಸಾಮಾನ್ಯರಿಗೆ ಕಾನೂನಿನ ಅರಿವು ಮೂಡಿಸುವುದು ಅತ್ಯಗತ್ಯ

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ರವಿಶಂಕರ್ ಅಭಿಮತ



ಮೈಸೂರು, ನ. 6(ಆರ್‌ಕೆ)– ಜನಸಾಮಾನ್ಯರಿಗೆ ಈ ನೆಲದ ಕಾನೂನುಗಳ ಬಗ್ಗೆ ಸುಲಭವಾಗಿ ಅರ್ಥವಾಗುವಂತೆ ಕನ್ನಡ ಮಾತೃಭಾಷೆಯಲ್ಲಿ ಅರಿವು ಮೂಡಿಸುವ ಅಗತ್ಯವಿದೆ ಎಂದು ಕೆ.ಆರ್. ನಗರ ಶಾಸಕ ಡಿ. ರವಿಶಂಕರ್ ಅಭಿಪ್ರಾಯಪಟ್ಟಿದ್ದಾರೆ.

ಪುಷ್ಕರ್ ಪ್ರಕಾಶನದಿಂದ ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ 'ಲಾ ಫಾರ್ ಆಲ್' (ಪ್ರತಿಯೊಬ್ಬರಿಗೂ ಕಾನೂನು) ಕನ್ನಡ ಮಾಸ ಪತ್ರಿಕೆಯ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಅವರು, ಇತ್ತೀಚೆಗೆ ಅರಣ್ಯ ಮತ್ತು ವನ್ಯಜೀವಿ ಉತ್ಪನ್ನಗಳಾದ ಹುಲಿ ಉಗುರು, ಚರ್ಮಗಳನ್ನು ಬಳಸುವವರ ಹಾಗೂ ಮನೆಯಲ್ಲಿ ಸಂಗ್ರಹಿಸುವವರ ವಿರುದ್ಧ ಅರಣ್ಯ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸುತ್ತಿರುವುದನ್ನು ಉಲ್ಲೇಖಿಸಿದರು.

ಈ ಕಾಯ್ದೆ ಈಗ ಮಾಡಿದ್ದಲ್ಲ. ನೂರಾರು ವರ್ಷಗಳಿಂದ ಚಾಲ್ತಿಯಲ್ಲಿದ್ದರೂ, ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿರಲಿಲ್ಲವಲ್ಲದೆ, ಅದರ ಅಸ್ತಿತ್ವ ಮತ್ತು ಪರಿಣಾಮಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸಿ ಅರ್ಥ ಮಾಡಿಸದ ಕಾರಣ ಕೆಲವರು ಹುಲಿ ಉಗುರು ಮುಂತಾದ ಅರಣ್ಯ ಮತ್ತು ವನ್ಯಜೀವಿ ಉತ್ಪನ್ನಗಳ ಒಳಗೊಂಡ ಆಭರಣ ಮಾಡಿಸಿಕೊಳ್ಳುತ್ತಿದ್ದರು ಎಂದು ಅವರು ತಿಳಿಸಿದರು.

ಈ ರೀತಿಯ ಹಲವು ಕಾನೂನು–ಕಾಯ್ದೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಿ ಮನದಟ್ಟು ಮಾಡಲು ಮಾಧ್ಯಮಗಳು ಪ್ರಯತ್ನಿಸಬೇಕು. ಈ ನಿಟ್ಟಿನಲ್ಲಿ ಹಿರಿಯ ವಕೀಲ ಕೆ.ಬಿ.ಸುರೇಶ್ 'ಲಾ ಫಾರ್ ಆಲ್' ಪತ್ರಿಕೆ ಮೂಲಕ ಜನರಿಗೆ ಕಾನೂನುಗಳ ಬಗ್ಗೆ ಲೇಖನಗಳನ್ನು ಪ್ರಕಟಿಸಿ ಮಾಹಿತಿ ನೀಡುತ್ತಿರುವುದು ಶ್ಲಾಘನೀಯವಾದುದು. ಈ ಮಾಸ ಪತ್ರಿಕೆ ಪ್ರತಿಗಳನ್ನು ಗ್ರಾಮೀಣ ಪ್ರದೇಶದ ಶಾಲಾ ಕಾಲೇಜು, ಗ್ರಂಥಾಲಯ, ಸರ್ಕಾರಿ ಕಚೇರಿಗಳು, ಸಂಘ–ಸಂಸ್ಥೆಗಳಿಗೂ ತಲುಪಿಸುವಂತೆ ಮಾಡಿ ಸಾರ್ವಜನಿಕರಿಗೆ ಜಾಗೃತಿ ಮೂಡಿಸಬೇಕೆಂದೂ ಸಲಹೆ ನೀಡಿದರು.

ಶಾಸಕ ಕೆ.ಹರೀಶ್‌ಗೌಡರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ. ಮಹದೇವಸ್ವಾಮಿ, ಕಾರ್ಯದರ್ಶಿ ಎಸ್.ಉಮೇಶ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, 'ಲಾ ಫಾರ್ ಆಲ್' ಪತ್ರಿಕೆ ಪ್ರಧಾನ ಸಂಪಾದಕ ಕೆ.ಬಿ.ಸುರೇಶ್ ಉಪಸ್ಥಿತರಿದ್ದರು.

ಬೆಳೆ ನಷ್ಟ ಪರಿಹಾರ ಪಡೆಯಲು ರೈತರು FID ಮಾಹಿತಿ ನೀಡಿ

ರೈತರಿಗೆ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ಅಗತ್ಯ ಸೂಚನೆ

ಮೈಸೂರು, ನ.6(ಬಿಎಲ್‌ಯು)– ಬರ ಘೋಷಿತ ತಾಲೂಕುಗಳಲ್ಲಿ ಬೆಳೆ ನಷ್ಟವಾಗಿರುವ ರೈತರು ಪರಿಹಾರ ಧನ ಪಡೆಯಲು ಜಮೀನಿನ ಸಂಪೂರ್ಣ ವಿವರಗಳನ್ನೊಳಗೊಂಡ ತಮ್ಮ FID ನೀಡುವಂತೆ ಮೈಸೂರು ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕ ಚಂದ್ರಶೇಖರ್ ಸೂಚಿಸಿದ್ದಾರೆ.

ಮೈಸೂರು ಜಿಲ್ಲೆಯ 9 ತಾಲೂಕುಗಳನ್ನು ರಾಜ್ಯ ಸರ್ಕಾರ ಬರಪೀಡಿತ ತಾಲೂಕುಗಳೆಂದು ಘೋಷಣೆ ಮಾಡಿದೆ. ಬರ ಪ್ರದೇಶದಲ್ಲಿ ಬೆಳೆ ನಷ್ಟವಾಗಿರುವ ರೈತರು ಪರಿಹಾರದ ಧನ ಪಡೆಯಲು ಕಡ್ಡಾಯವಾಗಿ FRUIT-IDಗೆ ಮಾಹಿತಿ ನೀಡಬೇಕು ಎಂದು ತಿಳಿಸಿದ್ದಾರೆ.

ರೈತ ಸಂಪರ್ಕ ಕೇಂದ್ರಗಳಲ್ಲಿ FRUIT-IDಯಲ್ಲಿ ರೈತರ ಜಮೀನು, ಆಧಾರ್ ಕಾರ್ಡ್ ನಂಬರ್, ಬ್ಯಾಂಕ್ ಅಕೌಂಟ್ ಸೇರಿದಂತೆ ಎಲ್ಲಾ ವಿವರ ಇರುತ್ತದೆ. ಸರ್ಕಾರದಿಂದ ಬರ ಪರಿಹಾರದ ಹಣ ಬಂದರೆ DBT (Direct Benefit Transfer) ಮೂಲಕ ರೈತರ ಖಾತೆಗೆ ಹಣ ವರ್ಗಾವಣೆ ಮಾಡಲಾಗುವುದು ಎಂದು ತಿಳಿಸಿದ್ದಾರೆ.



ಜಿಲ್ಲೆಯಲ್ಲಿ ಶೇ.80ರಷ್ಟು ರೈತರು FRUIT-IDಯಲ್ಲಿ ಜಮೀನಿನ ಮಾಹಿತಿ ನೀಡಿದ್ದಾರೆ. ಉಳಿದ ಶೇಕಡ 20 ರೈತರು ಮಾಹಿತಿ ನೀಡಿಲ್ಲ. ಕೂಡಲೇ ಆ ರೈತರು FRUIT-ID ಮಾಹಿತಿ ನೀಡಬೇಕು ಎಂದು ಚಂದ್ರಶೇಖರ್ ಸಲಹೆ ನೀಡಿದ್ದಾರೆ.

ಜಿಲ್ಲೆಯ 9 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಣೆ ಮಾಡಲಾಗಿದೆ. ಇದರಲ್ಲಿ ಬರದಿಂದ 82 ಸಾವಿರ ಹೆಕ್ಟೇರ್‌ನಲ್ಲಿ ಬೆಳೆ ನಷ್ಟವಾಗಿದ್ದು, 70 ಕೋಟಿ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಹಣ ಬಂದ ಕೂಡಲೇ ಕಂದಾಯ ಇಲಾಖೆ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಲಿದೆ ಎಂದು ತಿಳಿಸಿದ್ದಾರೆ.

ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಪುಸ್ತಕದ ಪ್ರತಿ, ತಮ್ಮ ಹೆಸರಿನಲ್ಲಿರುವ ಜಮೀನುಗಳ ಪಹಣಿ, ತಮ್ಮ ಮೊಬೈಲ್ ಸಂಖ್ಯೆ ಹಾಗೂ ಜಾತಿ ಪ್ರಮಾಣ ಪತ್ರದ ಪ್ರತಿಯನ್ನು ರೈತರು ನೀಡುವಂತೆ ಹೇಳಿದ್ದಾರೆ. ಬರ ಪರಿಹಾರದ ಹಣ ಮಾತ್ರವಲ್ಲದೆ ಸರ್ಕಾರದ ಯಾವುದೇ ಯೋಜನೆಯ ಸವಲತ್ತು ಹಾಗೂ ಬ್ಯಾಂಕ್ ಸಾಲ ಪಡೆಯಲು FID ಕಡ್ಡಾಯವಾಗಿದ್ದು, ರೈತರು ದಾಖಲಾತಿಗಳೊಂದಿಗೆ FIDಗೆ ಮಾಹಿತಿ ನೀಡುವಂತೆ ಚಂದ್ರಶೇಖರ್ ತಿಳಿಸಿದ್ದಾರೆ.

ನಾಳೆ ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ

ಮೈಸೂರು,ನ.6–ಜಿಲ್ಲಾ ಪಂಚಾಯತ್, ಮೈಸೂರು ಮತ್ತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ದೈಹಿಕ ಶಿಕ್ಷಣ ವಿಭಾಗದ ವತಿಯಿಂದ ನ.8ರಂದು ಬೆಳಗ್ಗೆ 10 ಗಂಟೆಗೆ ಪ್ರೌಢಶಾಲಾ ವಿಭಾಗದ ಜಿಲ್ಲಾ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟವನ್ನು ನಜರ್‌ಬಾದ್‌ನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.


ಮುಖ್ಯಮಂತ್ರಿ ಸಿದ್ದರಾಮಯ್ಯ ಘನ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸುವರು. ರೇಷ್ಮೆ ಸಚಿವ ಕೆ.ವೆಂಕಟೇಶ್ ಗೌರವ ಉಪಸ್ಥಿತರಿರುತ್ತಾರೆ. ಶಾಸಕ ತನ್ವೀರ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಹಾಗೂ ಅತಿಥಿಗಳಾಗಿ ವಿಧಾನಸಭಾ ಶಾಸಕರಾದ ಕೆ.ಹರೀಶ್‌ಗೌಡ, ಜಿ.ಟಿ.ದೇವೇಗೌಡ, ಅನಿಲ್‌ಕುಮಾರ್, ರವಿಶಂಕರ್, ಜಿ.ಡಿ ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಶಾಸಕರಾದ ಮರಿತಿಬ್ಬೇಗೌಡ, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಮಧು ಜಿ.ಮಾದೇಗೌಡ ಮತ್ತು ಉಪ ಮೇಯರ್ ಡಾ.ಜಿ. ರೂಪ ಮತ್ತು ನಗರಪಾಲಿಕೆ ಸದಸ್ಯ ಜಿ.ಎಸ್.ಸತ್ಯರಾಜು ಭಾಗವಹಿಸುವರು.

ನಾಳೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ನ.6–ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ವತಿಯಿಂದ 8ನೇ ಆಯುರ್ವೇದ ದಿನಾಚರಣೆ ಅಂಗವಾಗಿ ನ.8ರಂದು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಹೊರರೋಗಿ ಶಲ್ಯತಂತ್ರ ವಿಭಾಗದಲ್ಲಿ ಮಂಡಿನೋವು, ಬೆನ್ನುನೋವು, ಹಿಮ್ಮಡಿ ನೋವು ಎಲ್ಲಾ ತೊಂದರೆಗಳಿಗೆ ಉಚಿತ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಲಾಗಿದೆ. ಮಾಹಿತಿಗಾಗಿ ಶಲ್ಯತಂತ್ರ ವಿಭಾಗದ ಮುಖ್ಯಸ್ಥರು ಮತ್ತು ಪ್ರಾಧ್ಯಾಪಕಿ ಡಾ.ನಳಿನಿ ಮೊ.ಸಂ: 7975491224 ಅನ್ನು ಸಂಪರ್ಕಿಸಬಹುದು.

ಗ್ರಂಥಾಲಯ ಮಾನವನಿಗೆ ಅರಿವು ಮೂಡಿಸುವ ಕೇಂದ್ರಗಳು

ಜಿಪಂ ಸಿಇಓ ಕೆ.ಎಂ. ಗಾಯತ್ರಿ ಅಭಿಮತ



ಮೈಸೂರು,ನ.6– ಗ್ರಂಥಾಲಯಗಳು ಮಾನವನ ಜೀವನದಲ್ಲಿ ಅರಿವು ಮೂಡಿಸುವ ಕೇಂದ್ರಗಳೆಂದು ಕರೆಯಲಾಗುತ್ತದೆ, ಅರಿವು ಕೇಂದ್ರಗಳನ್ನು ಡಿಜಿಟಲೀಕರಣ ಮತ್ತು ಉನ್ನತ ಮಟ್ಟದಲ್ಲಿ ಸೌಲಭ್ಯ ಒದಗಿಸುವ ಕೆಲಸವಾಗುತ್ತಿದೆ. ವಿವಿಧ ಎನ್‌ಜಿಓಗಳ ಸಹಕಾರದೊಂದಿಗೆ ಗ್ರಂಥಾಲಯಗಳ ಅಭಿವೃದ್ಧಿ ಹಾಗೂ ಮೂಲ ಸೌಕರ್ಯಗಳನ್ನು ಕಲ್ಪಿಸುವ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಕೆ.ಎಂ.ಗಾಯತ್ರಿ ತಿಳಿಸಿದರು.

ಜಿಲ್ಲಾ ಪಂಚಾಯತ್‌ನ ದೇವರಾಜ್ ಅರಸ್ ಸಭಾಂಗಣದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ನಡೆದ ಗ್ರಾಮೀಣ ಡಿಜಿ ವಿಕಸನ ಕಾರ್ಯಕ್ರಮದಡಿ ಡಿಜಿಟಲ್ ಸಲಕರಣೆಗಳ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯ 64 ಗ್ರಾಪಂ ಗ್ರಂಥಾಲಯಗಳಿಗೆ ಈಗಾಗಲೇ ಮೂರು ಹಂತಗಳಲ್ಲಿ ಡಿಜಿಟಲ್ ಸಲಕರಣೆಗಳ ವಿತರಿಸಲಾಗಿದೆ. ಅದರಂತೆ 4ನೇ ಹಂತದಲ್ಲಿ ನಂಜನಗೂಡು–5 ಗ್ರಂಥಾಲಯ, ಟಿ.ನರಸೀಪುರ–6 ಗ್ರಂಥಾಲಯ, ಮೈಸೂರು –5, ಪಿರಿಯಾಪಟ್ಟಣ–3, ಸರಗೂರು–3 ಒಟ್ಟು 22 ಗ್ರಾಪಂಗಳಿಗೆ ವಿತರಿಸಲಾಗುತ್ತಿದೆ ಎಂದರು.

ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಇರುವ ಗ್ರಂಥಾಲಯಗಳಿಗೆ ಅಗತ್ಯವಿರುವ ಬೇಡಿಕೆಯನು ಸಾರ ಪುಸ್ತಕಗಳನ್ನು ಹಾಗೂ ಸ್ಪರ್ಧಾತ್ಮಕ ಪುಸ್ತಕ, ನಿಯತಕಾಲಿಕೆಗಳನ್ನು ಒದಗಿಸಿದರೆ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ಈ ನಿಟ್ಟಿನಲ್ಲಿ ಗ್ರಂಥಪಾಲಕರು ಗ್ರಾಪಂ ಪಿಡಿಓ ಅವರೊಂದಿಗೆ ಚರ್ಚಿಸಿ ಪುಸ್ತಕಗಳನ್ನು ಖರೀದಿ ಮಾಡಿಕೊಳ್ಳಬೇಕು ಎಂದು ಜಿಪಂ ಸಿಇಓ ಗಾಯತ್ರಿ ಸೂಚಿಸಿದರು.

ಸಲಕರಣೆಗಳನ್ನು ಬಳಸುವ ಪರಿ ಹೇಗೆ ಎಂಬುದರ ಬಗ್ಗೆ ಒಂದು ದಿನದ ತರಬೇತಿ ನಡೆಯುತ್ತಿದ್ದು, ಅದರಂತೆ ಗ್ರಂಥಾಲಯಕ್ಕೆ ಒದಗಿಸುತ್ತಿರುವ ಉಪಕರಣಗಳನ್ನು ಸದ್ಬಳಕೆ ಮಾಡಿಕೊಂಡು ಗ್ರಂಥಾಲಯಗಳನ್ನು ಡಿಜಿಟಲೀಕರಣಗೊಳಿಸುವ ನಿಟ್ಟಿನಲ್ಲಿ ಎಲ್ಲರು ಕಾರ್ಯಪ್ರವೃತ್ತರಾಗಿ ಎಂದು ಹೇಳಿದರು.

ಶಿಕ್ಷಣ ಸಂಸ್ಥೆ ಜಿಲ್ಲಾ ವ್ಯವಸ್ಥಾಪಕ ಪ್ರಸನ್ನಕುಮಾರ್ ಮಾತನಾಡಿ, ಆರ್‌ಡಿಪಿಆರ್ ಮತ್ತು ಶಿಕ್ಷಣ ಸಂಸ್ಥೆ ಸಹಯೋಗದಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ಅಣ್ಣೂರು ಗ್ರಾಪಂ ಅನ್ನು ಸಂಪೂರ್ಣ ಡಿಜಿಟಲ್ ಸಾಕ್ಷರತೆ ಮಾಡಲು ಮುಂದಾಗಿದ್ದು, ಅದರಂತೆ ಪ್ರತಿಯೊಂದು ಮನೆ ಮನೆ ಸರ್ವೆ ಮಾಡಿ ಡಿಜಿಟಲ್ ಸಾಕ್ಷರತೆ ಪ್ರಮಾಣ ಕ್ರೋಢಿಕರಿಸಲಾಗುತ್ತಿದೆ. ಅದರಂತೆ ಸಾಕ್ಷರತೆ ಪ್ರಮಾಣ ಕಡಿಮೆ ಇರುವ ಮನೆಗಳಿಗೆ ಭೇಟಿ ನೀಡಿ ತರಬೇತಿ ನೀಡಲಾಗುವುದು. ಈ ಕಾರ್ಯಕ್ರಮ ಯಶಸ್ವಿಯಾದರೆ 236 ಗ್ರಾಪಂಗಳಿಗೂ ಕಾರ್ಯಕ್ರಮ ವಿಸ್ತರಿಸಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಜಿಪಂ ಸಿಇಓ ಕೆ.ಎಂ. ಗಾಯತ್ರಿ ಅವರು ಡಿಜಿಟಲ್ ಸಲಕರಣೆಗಳನ್ನು ಗ್ರಾಪಂನ ಪಿಡಿಓ ಮತ್ತು ಗ್ರಂಥಪಾಲಕರಿಗೆ ವಿತರಿಸಿದರು. ಕಾರ್ಯಕ್ರಮದಲ್ಲಿ ಜಿಪಂನ ಸಹಾಯಕ ಕಾರ್ಯದರ್ಶಿ ವಿ.ಪಿ.ಕುಲದೀಪ್, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಗ್ರಂಥಪಾಲಕರು ಮತ್ತು ಶಿಕ್ಷಣ ಸಂಸ್ಥೆಯ ತಾಲೂಕು ಸಂಯೋಜಕರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನದಿ ನೀರಿನ ವಿವಾದಕ್ಕೆ ಶಾಶ್ವತ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ



ಮಂಡ್ಯ, ನ.6– ಕರ್ನಾಟಕದ ಜೀವ ನದಿಗಳಾದ ಕಾವೇರಿ, ಮಹಾದಾಯಿ ಕೃಷ್ಣ ನದಿ ನೀರಿನ ವಿವಾದದ ಶಾಶ್ವತ ಪರಿಹಾರಕ್ಕಾಗಿ ರಾಷ್ಟ್ರೀಯ ಜಲನೀತಿ ರೂಪಿಸಬೇಕು ಹಾಗೂ ಕಾವೇರಿ ನದಿ ನೀರು ಹಂಚಿಕೆಗೆ ಸಂಕಷ್ಟ ಸೂತ್ರಕ್ಕೆ ಒತ್ತಾಯಿಸಿ ಕಾವೇರಿ ಹಿತರಕ್ಷಣಾ ಸಮನ್ವಯ ಸಮಿತಿ ಮಂಡ್ಯದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ರೈತ ಮುಖಂಡ ಕೆ.ಎಸ್.ನಂಜುಂಡೇಗೌಡ ಹೋರಾಟಕ್ಕೆ ಚಾಲನೆ ನೀಡಿದರು. ಸಮಿತಿಯ ಆಶ್ರಯದಲ್ಲಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಮೆರವಣಿಗೆ ಹೊರಟು ಮಹಾವೀರ ವೃತ್ತದಲ್ಲಿ ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿದರು.

ಮೆರವಣಿಗೆಯಲ್ಲಿ ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಪ್ರತಿಭಟನಾಕಾರರು ಮುಖ್ಯಮಂತ್ರಿ ಮತ್ತು ಪ್ರಧಾನ ಮಂತ್ರಿಗೆ ಮನವಿ ಸಲ್ಲಿಸಿದರು.

ಕಾವೇರಿ ನ್ಯಾಯಾಧೀಕರಣ, ಸುಪ್ರೀಂ ಕೋರ್ಟ್, ಕಾವೇರಿ ನದಿ ನೀರು ನಿಯಂತ್ರಣ ಸಮಿತಿ ಹಾಗೂ ಪ್ರಾಧಿಕಾರ ನೀಡಿರುವ ಆದೇಶಗಳು ರೈತರ ಪಾಲಿಗೆ ಮರಣ ಶಾಸನವಾಗಿವೆ. ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ನ್ಯಾಯ ದೊರಕಿಸಿಕೊಡಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸದೆ ಕನ್ನಡ ನಾಡಿನ ವಿರೋಧಿ ನಡೆ ಅನುಸರಿಸಿದೆ ಎಂದು ಕಿಡಿಕಾರಿದರು.

ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸಂಕಷ್ಟ ಎದುರಾಗಿರುವುದರಿಂದ ಪ್ರಧಾನಿ ಮೋದಿ ಮಧ್ಯ ಪ್ರವೇಶಿಸಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳ ಸಭೆ ಕರೆದು ಮಾತುಕತೆ ನಡೆಸಬೇಕು. ಕಾವೇರಿ ಜಲಾನಯನ ಪ್ರದೇಶದ ಜಲಾಶಯದ ನೀರಿನ ಲಭ್ಯತೆ ಪರಿಶೀಲಿಸಲು ಕೇಂದ್ರ ಸರ್ಕಾರದ ಸುಪರ್ಧಿಯಲ್ಲಿ ನೀರಾವರಿ ತಜ್ಞರನ್ನು ಎರಡು ರಾಜ್ಯಗಳಿಗೆ ಕಳುಹಿಸಿ ವಾಸ್ತವಿಕ ವರದಿ ಆಧರಿಸಿ ನ್ಯಾಯ ಸಮ್ಮತವಾಗಿ ಕಾವೇರಿ ಸಂಕಷ್ಟ ಇತ್ಯರ್ಥಕ್ಕೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಜಲವಿವಾದಗಳ ಶಾಶ್ವತ ಪರಿಹಾರಕ್ಕೆ ವೈಜ್ಞಾನಿಕ ಆಧಾರಿತ ರಾಷ್ಟ್ರೀಯ ಜಲನೀತಿ ರೂಪಿಸಬೇಕು. ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಸಂಕಷ್ಟ ಕಾಲಕ್ಕೆ ಅನುಕೂಲವಾಗುವ ಸೂತ್ರ ರೂಪಿಸಬೇಕು. ಬ್ರಿಟಿಷರ ಆಳ್ವಿಕೆಯಲ್ಲಿ ಕಾವೇರಿ ನದಿ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಮತ್ತು ತಮಿಳುನಾಡು ನಡುವೆ ಆಗಿರುವ ಒಪ್ಪಂದ ರದ್ದುಪಡಿಸಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಅಂದಾನಿ, ಭಾರತೀಯ ಕಿಸಾನ್ ಸಂಘದ ನಾರಾಯಣಸ್ವಾಮಿ, ರಮೇಶ್ ರಾಜು ಹಾಡ್ಯ, ಕದಂಬ ಸೈನ್ಯದ ಬೇಕ್ರಿ ರಮೇಶ್, ಕರ್ನಾಟಕ ಕಾವಲು ಪಡೆಯ ಮೋಹನ್ ಕುಮಾರ್‌ಗೌಡ, ಕಾವೇರಿ ಕ್ರಿಯಾ ಸಮಿತಿಯ ಜಯಪ್ರಕಾಶ್, ಕನ್ನಡ ಮಹಿಳಾ ಒಕ್ಕೂಟದ ಭಾಗ್ಯಮ್ಮ, ನಾನು ಕನ್ನಡಿಗ ಒಕ್ಕೂಟದ ಹರಿಪ್ರಸಾದ್, ರವಿಶಂಕರ್, ಗೌರಮ್ಮ, ಉಮ್ಮಡಹಳ್ಳಿ ಉಮೇಶ್, ಎಂ.ಶಿವಕುಮಾರ್ ಭಾಗವಹಿಸಿದ್ದರು.

ವಿವಿಧ ಸಂಘಟನೆಗಳ ಬೆಂಬಲ: ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಿರಂತರ ಧರಣಿಯನ್ನು ನಾಗಮಂಗಲ ತಾಲೂಕಿನ ರೈತ ಸಂಘ, ಕರ್ನಾಟಕ ಕಾವಲು ಪಡೆ, ನಿವೃತ್ತ ಇಂಜಿನಿಯರ್ ಸಂಘ ಹಾಗೂ ದೊಡ್ಡರಸಿನಕೆರೆ, ಚಿಕ್ಕರಸಿನಕೆರೆ ಗ್ರಾಪಂ ವ್ಯಾಪ್ತಿಯ ಗ್ರಾಮದ ಮುಖಂಡರು ಬೆಂಬಲಿಸಿದರು.

ಚಿನಕುರಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ಅಧ್ಯಕ್ಷರಾಗಿ ಸಿ.ಎಸ್.ಮಂಜುನಾಥ್ ಅವಿರೋಧ ಆಯ್ಕೆ



ಚಿನಕುರಳಿ, ನ.6– ಚಿನಕುರಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಿ.ಎಸ್. ಮಂಜುನಾಥ್ ಸೋಮವಾರ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಅಧ್ಯಕ್ಷ ಮೊಗ್ಗಣ್ಣೇಗೌಡ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಸ್ಥಾನಕ್ಕೆ ಸಿ.ಎಸ್.ಮಂಜುನಾಥ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಸಿ.ಎಸ್.ಮಂಜುನಾಥ್ ಅವರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ನಿರ್ಮಲ ಘೋಷಿಸಿದರು. ನೂತನ ಅಧ್ಯಕ್ಷರನ್ನು ಸಂಘದ ಎಲ್ಲಾ ನಿರ್ದೇಶಕರು, ಮುಖಂಡರು ಅಭಿನಂದಿಸಿದರು.

ನೂತನ ಅಧ್ಯಕ್ಷ ಸಿ.ಎಸ್.ಮಂಜುನಾಥ್ ಮಾತನಾಡಿ, ನಮ್ಮ ನಾಯಕರಾದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ಆಶೀರ್ವಾದ ಹಾಗೂ ಸಂಘದ ಎಲ್ಲಾ ನಿರ್ದೇಶಕರ ಸಹಕಾರದಿಂದ ನೂತನ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಎಲ್ಲಾ ನಿರ್ದೇಶಕರ ಸಹಕಾರ ಪಡೆದು ನಮ್ಮ ನಾಯಕರಾದ ಸಿ.ಎಸ್.ಪುಟ್ಟರಾಜು ಅವರ ಮಾರ್ಗದರ್ಶನದಲ್ಲಿ ಸರ್ಕಾರದಿಂದ ರೈತರಿಗೆ ಸಿಗಬಹುದಾದ ಎಲ್ಲಾ ಸವಲತ್ತುಗಳನ್ನು ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ತಾಪಂ ಮಾಜಿ ಸದಸ್ಯರಾದ ಸಿ.ಎಸ್.ಗೋಪಾಲಗೌಡ, ಗಂಗಾಧರ್, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಶಿಂಡಭೋಗನಹಳ್ಳಿ ನಾಗಣ್ಣ, ಅಂಕೇಗೌಡನಕೊಪ್ಪಲು ರಮೇಶ್, ಗ್ರಾಪಂ ಅಧ್ಯಕ್ಷೆ ಗಾಯಿತ್ರಿ, ಮಾಜಿ ಅಧ್ಯಕ್ಷ ಪಾಪಣ್ಣ, ಡೇರಿ ಅಧ್ಯಕ್ಷ ರಮೇಶ್, ಗ್ರಾಪಂ ಉಪಾಧ್ಯಕ್ಷ ಶ್ರೀನಿವಾಸ್, ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಸಿ.ಬಿ.ವಾಸುದೇವಯ್ಯ, ಮೊಗಣ್ಣೇಗೌಡ, ಉಪಾಧ್ಯಕ್ಷೆ ಪಾರ್ವತಮ್ಮ, ನಿರ್ದೇಶಕರಾದ ಮಹದೇವಪ್ಪ, ರಾಮೇಗೌಡ, ಬಿ.ಶಿವಣ್ಣ, ಎ.ಕುಮಾರ್, ಚಂದ್ರ, ಭವ್ಯಶ್ರೀ, ಎಚ್.ಎಸ್.ಗಿರೀಶ್, ಸಿಬ್ಬಂದಿಗಳಾದ ಸಿ.ಎಂ.ಕಾಂತರಾಜು, ಸಿ.ಕೆ.ಕುಮಾರ್, ಗ್ರಾಪಂ ಸದಸ್ಯರಾದ ಸಿ.ಎ.ಲೋಕೇಶ್, ಪರಮೇಶ್, ಕೃಷ್ಣೇಗೌಡ, ನಾಗೇಗೌಡ, ಮಾಜಿ ಸದಸ್ಯ ಸಿ.ಡಿ.ಮಹದೇವು, ಟೆಂಪೋ ರಮೇಶ್, ಆರ್.ಪಿ.ಲೋಕೇಶ್, ಸೇರಿದಂತೆ ಎಲ್ಲಾ ಗ್ರಾಪಂನ ಹಾಲಿ ಹಾಗೂ ಮಾಜಿ ಸದಸ್ಯ, ಗ್ರಾಮಸ್ಥರು ಹಾಜರಿದ್ದರು.

ಸರ್ಕಾರದ ವಿರುದ್ಧ ಕರ್ನಾಟಕ ಸಂಘ ಅಸಮಾಧಾನ

ಮಂಡ್ಯ, ನ.6– ರಾಜ್ಯದಲ್ಲೇ ಅತ್ಯುತ್ತಮ ಸಾಂಸ್ಕೃತಿಕ ಸಂಘಟನೆ ಎಂದು ಹೆಸರು ಮಾಡಿರುವ ಕರ್ನಾಟಕ ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ ನೀಡದೇ ಎರಡನೇ ಬಾರಿಗೆ ಶಿವಮೊಗ್ಗ ಕರ್ನಾಟಕ ಸಂಘಕ್ಕೆ ಪ್ರಶಸ್ತಿ ನೀಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಮಂಡ್ಯ ಕರ್ನಾಟಕ ಸಂಘ ಖಂಡಿಸಿದೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಸಂಘದ ಕಾರ್ಯದರ್ಶಿ ಲೋಕೇಶ್ ಚಂದಗಾಲು, ಜಿಲ್ಲೆಯ ಕರ್ನಾಟಕ ಸಂಘಕ್ಕೆ 75 ವರ್ಷಗಳ ಇತಿಹಾಸವಿದ್ದು, ಬಿಎಂಶ್ರೀ, ಎಚ್.ಎಲ್. ನಾಗೇಗೌಡ, ಕೆ.ವಿ.ಶಂಕರಗೌಡ, ಪ್ರೊ.ಜಿ.ವೆಂಕಟಸುಬ್ಬಯ್ಯ, ಜಿ.ಮಾದೇಗೌಡ, ಪ್ರೊ.ಜಯಪ್ರಕಾಶ್ ಗೌಡರಂತಹ ದಿಗ್ಗಜರು ಸಂಘಟನೆ ಕಟ್ಟಿದ್ದು, ಅನೇಕ ಕಲಾವಿದರು, ಸಾಹಿತಿಗಳನ್ನು ಪ್ರೋತ್ಸಾಹಿಸಿ ನೂರಾರು ಮಂದಿ ಹೆಸರಲ್ಲಿ ದತ್ತಿ ಪ್ರಶಸ್ತಿಗಳನ್ನು ನೀಡುತ್ತಾ, ಕನ್ನಡದ ಸಂಸ್ಕೃತಿ ಗಟ್ಟಿಗೊಳಿಸುತ್ತಾ ಬಂದಿರುವ ಮಂಡ್ಯ ಜಿಲ್ಲೆಯ ಕರ್ನಾಟಕ ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ ಸಿಗದಿರುವುದು ನಿಜಕ್ಕೂ ದುರಂತ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜೊತೆಗೆ 2007ರಲ್ಲಿ ಶಿವಮೊಗ್ಗ ಕರ್ನಾಟಕ ಸಂಘಕ್ಕೆ ರಾಜ್ಯೋತ್ಸವ ಪ್ರಶಸ್ತಿ ಸಿಕ್ಕಿತ್ತು. ಆದರೆ ಈ ಬಾರಿಯೂ ಪ್ರಶಸ್ತಿ ಪಡೆದವರಿಗೆಯೇ ಮತ್ತೆ ಪ್ರಶಸ್ತಿ ನೀಡಿರುವುದು ನಿಜಕ್ಕೂ ದುರಂತ ಎಂದು ಖಂಡಿಸಿರುವ ಅವರು, ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಮಂಡ್ಯ ಜಿಲ್ಲೆಯ ಪ್ರತಿನಿಧಿಗಳು ಇಲ್ಲದಿರುವುದೇ ಇದಕ್ಕೆ ಕಾರಣ ಎಂದು ಬೇಸರ ಹೊರಹಾಕಿದ್ದಾರೆ.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ನ.6– ವಿ.ಸಿ.ಫಾರಂ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯ ಹಮ್ಮಿಕೊಂಡಿರುವುದರಿಂದ ನ.8 ರಂದು ಬೆಳಗ್ಗೆ 9 ರಿಂದ ಸಂಜೆ 5ರವರೆಗೆ ವಿ.ಸಿ.ಫಾರಂ, ಶಿವಳ್ಳಿ, ದುದ್ದ, ಬಿ.ಹಟ್ನ, ಬೇವಕಲ್ಲು, ಹುಲಿಕೆರೆ, ಚಂದಗಾಲು, ಹುಲ್ಲೇನಹಳ್ಳಿ, ಹೊಳಲು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಾಡಹಗಲೇ 4.5 ಲಕ್ಷ ರೂ. ಕಳ್ಳತನ

ಮಂಡ್ಯ, ನ.6– ಹಾಡಹಗಲೇ ದುಷ್ಕರ್ಮಿಗಳು ಕಾರಿನಲ್ಲಿದ್ದ 4.5 ಲಕ್ಷ ರೂ. ದೋಚಿರುವ ಘಟನೆ ಇಲ್ಲಿನ ನಗರಸಭೆ ಆವರಣದಲ್ಲಿ ಸೋಮವಾರ ನಡೆದಿದೆ.

ಪಾಂಡವಪುರ ತಾಲೂಕಿನ ಚಿನಕುರಳಿ ಗ್ರಾಮದ ಪರಮೇಶ್ ಹಣ ಕಳೆದುಕೊಂಡವರು. ಚಿನಕುರಳಿ ಗ್ರಾಮದಿಂದ ಬ್ರೀಜಾ ಕಾರಿನಲ್ಲಿ ಬಂದಿದ್ದ ಪರಮೇಶ್, ಮಂಡ್ಯದ ರಿಜಿಸ್ಟರ್ ಕಚೇರಿಯಿಂದ ನಗರಸಭೆ ಬಳಿಗೆ ಬಂದಿದ್ದಾರೆ. ಅವರು ಕಾರಿನಲ್ಲಿ ಹಣ ಇಟ್ಟಿರುವುದನ್ನು ಭಾಗಶಃ ರಿಜಿಸ್ಟಾರ್ ಆಫೀಸ್ ಬಳಿಯೇ ಗಮನಿಸಿದ್ದ ಖದೀಮರು ಪರಮೇಶ್ ಅವರನ್ನು ಹಿಂಬಾಲಿಸಿದ್ದಾರೆ. ಅವರು ನಗರಸಭೆ ಆವರಣದಲ್ಲಿ ಕಾರು ನಿಲ್ಲಿಸಿ ಪಕ್ಕದ ವಿ.ವಿ. ರಸ್ತೆಯಲ್ಲಿರುವ ಎಸ್‌ಬಿಐ ಬ್ಯಾಂಕ್‌ಗೆ ಕೆಲಸದ ನಿಮಿತ್ತ ಹೋದ ವೇಳೆ ಕಾರಿನ ಕಿಟಕಿ ಗಾಜು ಹೊಡೆದು ಹಣ ದೋಚಿ ಪರಾರಿಯಾಗಿದ್ದಾರೆ. ಬ್ಯಾಂಕ್‌ನಿಂದ ಪರಮೇಶ್ ವಾಪಸ್ ಬಂದಾಗ ಕೃತ್ಯ ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಪಶ್ಚಿಮ ಠಾಣೆ ಪೊಲೀಸರು ಪರಿಶೀಲನೆ ನಡೆಸಿದ್ದು, ಕಳ್ಳರ ಕೃತ್ಯ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಸಂಬಂಧ ಪಶ್ಚಿಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ.

ಕಾವೇರಿ ಹೋರಾಟಕ್ಕೆ ಮಾಜಿ ಸಚಿವರಾದ ಪುಟ್ಟರಾಜು, ತಮ್ಮಣ್ಣ ಬೆಂಬಲ

ಧರಣಿ ಸ್ಥಳಕ್ಕೆ ಸಿಎಂ ಭೇಟಿ ಕೊಟ್ಟರೂ ಭರವಸೆ ಈಡೇರಿಸಿಲ್ಲ: ಪುಟ್ಟರಾಜು ಕಿಡಿ



ಮಂಡ್ಯ, ನ.6– ಕಾವೇರಿ ಕೊಳ್ಳದ ಜಲಾಶಯಗಳಿಂದ ತಮಿಳುನಾಡಿಗೆ ನೀರು ಹರಿಸುವಂತೆ ಆದೇಶಿಸಿರುವ ಕಾವೇರಿ ನದಿ ನೀರು ನಿಯಂತ್ರಣ ಸಮಿತಿ, ಪ್ರಾಧಿಕಾರ ಹಾಗೂ ಕರ್ನಾಟಕದ ಹಿತ ಕಾಯಲು ವಿಫಲವಾಗಿರುವ ಕೇಂದ್ರ, ರಾಜ್ಯ ಸರ್ಕಾರದ ವಿರುದ್ಧ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ನಗರದ ಸರ್‌ಎಂವಿ ಪ್ರತಿಮೆ ಎದುರು ನಡೆಸುತ್ತಿರುವ ನಿರಂತರ ಧರಣಿಗೆ ಜಿಲ್ಲಾ ಜೆಡಿಎಸ್ ಮುಖಂಡರು ಸೋಮವಾರ ಬೆಂಬಲ ಸೂಚಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಕಾವೇರಿ ನದಿ ನೀರಿನ ವಿಚಾರವಾಗಿ ಹಲವು ದಿನಗಳಿಂದ ಹೋರಾಟ ನಡೆಯುತ್ತಿದ್ದು, ಧರಣಿ ಸ್ಥಳಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ಕೊಟ್ಟರೂ ಸಮಸ್ಯೆ ಬಗೆಹರಿಸುವ ಸ್ಪಷ್ಟ ಭರವಸೆ ನೀಡಿಲ್ಲ. ಇದರಿಂದ ರೈತರು ನ್ಯಾಯ ಸಿಗುವವರೆಗೂ ಹೋರಾಟ ಮಾಡುವುದಾಗಿ ತಿಳಿಸಿದ್ದು, ಇವರ ಹೋರಾಟಕ್ಕೆ ನಮ್ಮ ಪಕ್ಷದ ಸಂಪೂರ್ಣ ಬೆಂಬಲ ಇದೆ ಎಂದರು.

ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ವಿರುದ್ಧ ಪಕ್ಷದಿಂದ ದೊಡ್ಡ ಮಟ್ಟದ ಹೋರಾಟ ಮಾಡಲು ಮುಂದಾಗಿದ್ದು, ರೈತರ ಜೊತೆಗೂಡಿ ಸರ್ಕಾರದ ಕಣ್ಣು ತೆರೆಸಲು ಪ್ರತಿಭಟಿಸಲಾಗುವುದು ಎಂದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ ಮಾತನಾಡಿ, ಮುಖ್ಯಮಂತ್ರಿ ರೈತ ಸಮೂಹಕ್ಕೆ ನ್ಯಾಯ ದೊರಕಿಸಿಕೊಡುವ ಭರವಸೆ ನೀಡಿಲ್ಲ. ಕಾಂಗ್ರೆಸ್ ಸರ್ಕಾರದ ಸಚಿವರು, ಶಾಸಕರು ಕಾವೇರಿ ವಿಚಾರದಲ್ಲಿ ದನಿ ಎತ್ತುತ್ತಿಲ್ಲ. ಹಾಗಾಗಿ ಹೋರಾಟಗಾರರು ಅಧಿವೇಶನದಲ್ಲಿ ಚರ್ಚೆ ಆದರೂ ಆಗಲಿ ಎಂದು ಚಳವಳಿ ನಡೆಸುತ್ತಿದ್ದಾರೆ. ಈ ಬಗ್ಗೆ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ ಎಂದು ಆರೋಪಿಸಿದರು.


ಮಳೆ ಕೊರತೆಯಿಂದ ಬರ ಪರಿಸ್ಥಿತಿ ಎದುರಾಗಿದ್ದು, ಜಮೀನಿನಲ್ಲಿ ಬೆಳೆದು ನಿಂತಿರುವ ಬೆಳೆಗೆ ರೈತರು ಟ್ಯಾಂಕರ್‌ನಿಂದ ನೀರು ಪೂರೈಸುತ್ತಿದ್ದಾರೆ. ಆದರೆ ಇದರಿಂದ ಏನು ಪ್ರಯೋಜನ ಇಲ್ಲ. ಭೂಮಿಗೆ ಸಮರ್ಪಕವಾಗಿ ನೀರು ದೊರಕುವುದಿಲ್ಲ. ಬೆಳೆಯ ಮೇಲ್ಮೈನಲ್ಲಿ ಹಸಿರು ಕಾಣಲಿದೆ ಹೊರತು ಫಸಲು ಸಿಗುವುದಿಲ್ಲ. ಬರ ಪರಿಸ್ಥಿತಿ ಕುರಿತು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಜೆಡಿಎಸ್ ಪ್ರವಾಸ ನಡೆಸುತ್ತಿದೆ. ಜಿಲ್ಲೆಯಲ್ಲಿ ಬರ ಅಧ್ಯಯನ ನಡೆಸಲು ಮುಂದಾಗಿದ್ದು, ಪೂರ್ವ ಸಿದ್ಧತೆಗಾಗಿ ಸಭೆ ಮಾಡುತ್ತಿದ್ದೇವೆ. ರೈತರ ಸಂಕಷ್ಟವನ್ನು ಖುದ್ದು ಅರಿತು ಸರ್ಕಾರಕ್ಕೆ ವರದಿ ಸಲ್ಲಿಸಲಾಗುವುದೆಂದು ಹೇಳಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಯುವ ಘಟಕದ ಜಿಲ್ಲಾಧ್ಯಕ್ಷ ಕಂಸಾಗರ ರವಿ ಸೇರಿದಂತೆ ನೂರಾರು ಮಂದಿ ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

ನ್ಯಾಯಬೆಲೆ ಅಂಗಡಿಗಳಲ್ಲಿ ಕಳಪೆ ಗುಣಮಟ್ಟದ ಅಕ್ಕಿ ನೀಡಿದರೆ ಕಠಿಣ ಕ್ರಮ

ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಮುನಿಯಪ್ಪ ಎಚ್ಚರಿಕೆ

ಒಂದನೇ ಪುಟದಿಂದ



ಪ್ರಶ್ನೆಗೆ ಉತ್ತರಿಸಿದ ಮುನಿಯಪ್ಪ, ಅಂತಹ ಯಾವುದೇ ಪ್ರಕರಣಗಳ ಬಗ್ಗೆ ದೂರು ನೀಡಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈ ಮೂಲಕ ಲೋಪ ದೋಷ ಸರಿಪಡಿಸಲಾಗುವುದು ಎಂದು ಆಶ್ವಾಸನೆ ನೀಡಿದರು.

ಅನ್ನ ಭಾಗ್ಯ ಯೋಜನೆಯಲ್ಲಿ 10 ಕೆ.ಜಿ. ಅಕ್ಕಿ ಕೊಡಲು ಈಗಲೂ ಸರ್ಕಾರ ಬದ್ಧವಾಗಿದೆ. ಆದರೆ ಹೊರ ರಾಜ್ಯದಿಂದ ಅಕ್ಕಿ ಖರೀದಿಸುವ ತನಕ 5 ಕೆ.ಜಿ.ಅಕ್ಕಿಯ ಹಣವನ್ನು ಫಲಾನುಭವಿಗಳ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತಿದೆ. ಜಾರ್ಖಂಡ್, ಛತ್ತೀಸ್ ಘಡ್, ತೆಲಂಗಾಣ ಹಾಗೂ ಆಂಧ್ರಪ್ರದೇಶದಲ್ಲಿ ಹೆಚ್ಚು ಭತ್ತ ಬೆಳೆಯುತ್ತಾರೆ. ಈ ಹಿನ್ನೆಲೆ ಅಲ್ಲಿಂದ ಭತ್ತ ಖರೀದಿಸಿ ಅಕ್ಕಿ ನೀಡಲಾಗುವುದು. ಈ ಸಂಬಂಧ ಬೆಲೆ ನಿಗಧಿಯ ಮಾತುಕತೆ ನಡೆಯುತ್ತಿದೆ. ಆದರೆ ಯಾವ ತಿಂಗಳಿಂದ ಪೂರ್ಣ ಪ್ರಮಾಣದಲ್ಲಿ 10 ಕೆ.ಜಿ.ಅಕ್ಕಿ ನೀಡಲಾಗುತ್ತದೆ ಎಂದು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಅಕ್ಕಿ ವಿತರಣೆ ಮಾಡುವ ತನಕ ಹಣ ನೀಡುವುದಂತೂ ಸತ್ಯ ಎಂದು ಹೇಳುವ ಮೂಲಕ ಹೆಚ್ಚುವರಿ 5 ಕೆ.ಜಿ.ವಿತರಣೆ ಮತ್ತಷ್ಟು ವಿಳಂಬವಾಗುತ್ತದೆ ಎಂದು ಪರೋಕ್ಷವಾಗಿ ತಿಳಿಸಿದರು.

ಪ್ರಸ್ತುತ 4 ಕೋಟಿ ಜನರಿಗೆ ಪಡಿತರ ಆಹಾರ ಪದಾರ್ಥ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದಿಂದ ಇವರಿಗೆ 5 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ. ಆದರೆ ಹೆಚ್ಚುವರಿಯಾಗಿರುವ 40 ಲಕ್ಷ ಜನರಿಗೆ ಕೇಂದ್ರ ಸರ್ಕಾರ ಈ ತನಕ ಅಕ್ಕಿ ನೀಡುತ್ತಿಲ್ಲ. ಇದರಿಂದ ಕರ್ನಾಟಕ ಸರ್ಕಾರ ಹೆಚ್ಚುವರಿಯಾಗಿ 20 ಸಾವಿರ ಮೆಟ್ರಿಕ್ ಟನ್ ಅಕ್ಕಿ ಖರೀದಿಸಿ ಈ 40 ಲಕ್ಷ ಜನರಿಗೆ ನೀಡುತ್ತಿದೆ. ಇದರ ಹೊರೆ ರಾಜ್ಯ ಸರ್ಕಾರದ ಮೇಲೆ ಬೀಳುತ್ತಿದೆ. ಈ ಹಿನ್ನೆಲೆ ಶೀಘ್ರವೇ ಉಳಿದ 40 ಲಕ್ಷ ಜನರಿಗೆ ಹೆಚ್ಚುವರಿ ಅಕ್ಕಿ ನೀಡುವಂತೆ ಮುನಿಯಪ್ಪ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಕರ್ನಾಟಕದಲ್ಲಿ 20 ಸಾವಿರ ನ್ಯಾಯಬೆಲೆ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿ ಮಾಲೀಕರ ಕೆಲವು ಬೇಡಿಕೆ ಈಡೇರಿಸುವ ಸಂಬಂಧ ಶೀಘ್ರವೇ ಸಭೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಸಂಸದ ಪ್ರತಾಪ್ ಸಿಂಹ, ಹೊಸ ಸಹಸ್ರಮಾನದಲ್ಲಿ ಹೊಸ ಸವಾಲು ಎಂದು ವಿಶ್ವ ಸಂಸ್ಥೆಯು 2000 ಇಸವಿಯಲ್ಲಿ 18 ಯೋಜನೆ ರೂಪಿಸಿತು. ಇದರಲ್ಲಿ ಆಹಾರ ಭದ್ರತೆ ಕಾಯ್ದೆ ಕೂಡ ಒಂದು. ಅಂದಿನ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಆಹಾರ ಭದ್ರತಾ ಯೋಜನೆ ರೂಪುರೇಷೆ ಸಿದ್ಧಪಡಿಸಿದ್ದರು. ಯುಪಿಎ ಸರ್ಕಾರ ಇದನ್ನು ಕಾನೂನಾಗಿ ರೂಪಿಸಿತು. ತರುವಾಯ 2019 ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು 'ಒಂದು ರಾಷ್ಟ್ರ, ಒಂದು ಪಡಿತರ ಚೀಟಿ ಯೋಜನೆ' ಜಾರಿಗೊಳಿಸಿದರು. ಇದರಿಂದ ದೇಶದ ಯಾವುದೇ ರಾಜ್ಯದವರು ಎಲ್ಲೇ ವಾಸ ಮಾಡುತ್ತಿದ್ದರೂ ಪಡಿತರ ಆಹಾರ ಪಡೆಯಬಹುದು ಎಂದು ತಿಳಿಸಿದರು. ಪ್ರಸ್ತುತ ಬಿಪಿಎಲ್ ಕಾರ್ಡ್ ದಾರರಿಗೆ 3 ಕೆ.ಜಿ. ಅಕ್ಕಿ ಹಾಗೂ 2 ಕೆ.ಜಿ. ರಾಗಿ ವಿತರಣೆ ಮಾಡಲಾಗುತ್ತಿದೆ. ಜನರ ಬೇಡಿಕೆಯಂತೆ ಈಗ ರಾಗಿ ಬದಲು ಪೂರ್ಣ ಪ್ರಮಾಣದಲ್ಲಿ 5 ಕೆ.ಜಿ. ಅಕ್ಕಿ ನೀಡುವಂತೆ ವೇದಿಕೆಯಲ್ಲಿದ್ದ ಸಚಿವ ಮುನಿಯಪ್ಪಗೆ ಮನವಿ ಮಾಡಿದರು.

ನ್ಯಾಯಬೆಲೆ ಅಂಗಡಿ ಮಾಲೀಕರು ಸೇರಿದಂತೆ ಸಾವಿರಾರು ಪಡಿತರ ಚೀಟಿ ಫಲಾನುಭವಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಗ್ರಾಮೀಣ ಪ್ರದೇಶದಿಂದ ಬಂದವರಿಗೆ ಈ ವೇಳೆ ಉಚಿತವಾಗಿ ಒಂದು ಕೆ.ಜಿ.ಅಕ್ಕಿ ವಿತರಣೆ ಮಾಡಲಾಯಿತು.

ಕೇಂದ್ರದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಹಿರಿಯ ಆರ್ಥಿಕ ಸಲಹೆಗಾರರಾದ ನಂದಿತ ಮಿಶ್ರ, ಆಯುಕ್ತೆ ಕನಕವಲ್ಲಿ, ಹೆಚ್ಚುವರಿ ಆಯುಕ್ತ ಜ್ಞಾನೇಂದ್ರ ಕುಮಾರ್, ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ಇಲಾಖೆಯ ಮೈಸೂರು ಜಂಟಿ ಆಯುಕ್ತರಾದ ಕುಮುದಾ ಶರತ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಾಜ್ಯದಲ್ಲಿ 1 ಕೋಟಿ ವಲಸೆ ಕಾರ್ಮಿಕರಿದ್ದಾರೆ: 'ಒಂದು ದೇಶ ಒಂದು ಪಡಿತರ ಚೀಟಿ' ಇವರಿಗೆ ಪ್ರಯೋಜನ

ಮೈಸೂರು, ನ.6(ಬಿಎಲ್‌ಯು)– ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಸೇರಿದಂತೆ ವಿವಿಧ ರಾಜ್ಯಗಳಿಂದ ಉದ್ಯೋಗ ಅರಸಿ ಬಂದಿರುವ 85 ಲಕ್ಷದಿಂದ 1 ಕೋಟಿ ವಲಸೆ ಕಾರ್ಮಿಕರು ಕರ್ನಾಟಕದಲ್ಲಿ ವಾಸ ಮಾಡುತ್ತಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಂಕಿ ಅಂಶಗಳ ವಿವರ ನೀಡಿದ್ದಾರೆ. ಕಟ್ಟಡ ನಿರ್ಮಾಣ ಸೇರಿದಂತೆ ಹಲವು ಕೆಲಸಗಳಿಗಾಗಿ ಉದ್ಯೋಗ ಅರಸಿ ಉತ್ತರ ಪ್ರದೇಶ, ಬಿಹಾರ, ಜಾರ್ಖಂಡ್ ಸೇರಿದಂತೆ ಹಲವು ರಾಜ್ಯಗಳ ಜನರು ಕರ್ನಾಟಕದಲ್ಲಿ ವಾಸ ಮಾಡುತ್ತಿದ್ದಾರೆ. ಸುಮಾರು 85 ಲಕ್ಷದಿಂದ 1 ಕೋಟಿ ತನಕ ಹೊರ ರಾಜ್ಯದವರು ಇಲ್ಲಿದ್ದಾರೆ ಎಂದು ಅಂದಾಜಿಸಲಾಗಿದೆ ಎಂದರು. 'ಒಂದು ರಾಷ್ಟ್ರ ಒಂದು ಪಡಿತರ ಚೀಟಿ' ಯೋಜನೆಯಿಂದ ವಲಸೆ ಕಾರ್ಮಿಕರಿಗೆ ಬಹಳ ಅನುಕೂಲವಾಗುತ್ತದೆ. ತಮ್ಮ ಊರಿನ ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡ್ ತೋರಿಸಿದೆ. ಇಲ್ಲಿ ಅವರು ಪಡಿತರ ಆಹಾರ ಪಡೆಯಬಹುದು ಎಂದು ಹೇಳಿದರು. ನಮ್ಮ ಕರ್ನಾಟಕದ ಜನರು ಕೂಡ ಹೊರ ರಾಜ್ಯದಲ್ಲಿ ಕೆಲಸ ಮಾಡುತ್ತಿದ್ದು, ಅವರಿಗೂ ಇದರಿಂದ ಪ್ರಯೋಜನವಾಗಲಿದೆ ಎಂದು ಡಾ.ಮಹದೇವಪ್ಪ ಅಭಿಪ್ರಾಯಪಟ್ಟರು. ಭಾರತದ ಯಾವ ವ್ಯಕ್ತಿಯೂ ಹಸಿವಿನಿಂದ ನರಳಬಾರದು ಎಂದು ಯುಪಿಎ ಸರ್ಕಾರ ಆಹಾರ ಭದ್ರತಾ ಕಾಯ್ದೆಯನ್ನು ರೂಪಿಸಿ ಜಾರಿಗೊಳಿಸಿದೆ. ಇನ್ನು 12ನೇ ಶತಮಾನದ ದಾಸೋಹ ಪರಿಕಲ್ಪನೆಯಲ್ಲಿ ಸಿದ್ದರಾಮಯ್ಯ ಅವರು ಅನ್ನಭಾಗ್ಯ ಯೋಜನೆ ರೂಪಿಸಿದ್ದಾರೆ. ಈ ಮೂಲಕ ಸಂವಿಧಾನದಲ್ಲಿ ಜನರಿಗೆ ದೊರೆತಿರುವ ಹಕ್ಕು ಜಾರಿಯಾಗಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಸ್ಥಾನದಲ್ಲಿ ಸಿದ್ದರಾಮಯ್ಯ ಬಂದೋಬಸ್ತ್ ಆಗಿದ್ದಾರೆ

ಸಚಿವ ಮುನಿಯಪ್ಪ ಜಬರ್ದಸ್ತ್ ಹೇಳಿಕೆ!

ಮೈಸೂರು, ನ.6(ಬಿಎಲ್‌ಯು)–ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನದಲ್ಲಿ ಬಂದೋಬಸ್ತ್ ಆಗಿದ್ದಾರೆ ಎಂದು ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಕೆ.ಹೆಚ್. ಮುನಿಯಪ್ಪ ಜಬರ್ದಸ್ತ್ ಆಗಿ ಹೇಳಿದರು.

ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 224 ಶಾಸಕರಿಗೂ ಮುಖ್ಯಮಂತ್ರಿ ಆಗಬೇಕೆಂಬ ಆಸೆ ಇರುತ್ತದೆ. ಇದು ಸಹಜ ಎಂದರು.

ಕಾಂಗ್ರೆಸ್ ಸರ್ಕಾರಕ್ಕೆ 136 ಸ್ಥಾನದ ಬೆಂಬಲ ಇರುವ ಕಾರಣ ಅಭದ್ರತೆ ಎಂಬ ಪ್ರಶ್ನೆಯೇ ಅಸಂಬದ್ಧವಾದುದು. ಸರ್ಕಾರ ಸುಭದ್ರವಾಗಿದೆ, ಹಾಗೆಯೇ ಸಿದ್ದರಾಮಯ್ಯ ಕೂಡ ಮುಖ್ಯಮಂತ್ರಿ ಸ್ಥಾನದಲ್ಲಿ ಬಂದೋಬಸ್ತ್ ಆಗಿದ್ದಾರೆ ಎಂದು ಮುನಿಯಪ್ಪ ಹೇಳಿದರು. ಸಿದ್ದರಾಮಯ್ಯ ಅವರು ತಮ್ಮದೇ ಆದ ಚಾಕಚಕ್ಯತೆಯಿಂದ ಆಡಳಿತ ನಡೆಸುತ್ತಿದ್ದಾರೆ. 14 ಬಜೆಟ್ ಮಂಡಿಸಿ ಒಳ್ಳೆಯ ಸರ್ಕಾರ ಕೂಡ ನಡೆಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದರು. ಬಡವರಿಗೆ ಅಕ್ಕಿ ನೀಡುವ ಜವಾಬ್ದಾರಿಯನ್ನು ನನಗೆ ನೀಡಿದ್ದಾರೆ. ಈ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದೇನೆ. ಬೇರೆ ರೀತಿಯ ರಾಜಕೀಯ ಪ್ರಶ್ನೆಗಳಿಗೆ ನಾನು ಉತ್ತರ ಕೊಡುವುದಿಲ್ಲ. ನನಗೆ ಅಂತಹ ಯಾವುದೇ ಪ್ರಶ್ನೆಗಳನ್ನು ಕೇಳಬೇಡಿ ಎಂದು ಮುನಿಯಪ್ಪ ಮನವಿ ಮಾಡಿದರು.

ಒಂದನೇ ಪುಟದಿಂದ

ಡಿಪಿಆರ್ ತಯಾರಿಗೆ ಟೆಂಡರ್

ಕೋಟಿ ರೂ., ರಸ್ತೆ ನಿರ್ಮಾಣಕ್ಕೆ 2,100 ಕೋಟಿ ರೂ. ಹಣದ ಅಗತ್ಯವಿರುವುದರಿಂದ ಕೇಂದ್ರ, ರಾಜ್ಯ ಸರ್ಕಾರ ಹಾಗೂ ಮುಡಾ ಅನುದಾನ ಬಳಸಿ ಯೋಜನೆ ಅನುಷ್ಠಾನ ಮಾಡಲಾಗುವುದು ಎಂದು ಭೈರತಿ ಸುರೇಶ್ ತಿಳಿಸಿದ್ದಾರೆ.

ಪ್ರಸ್ತಾಪಿತ ಪೆರಿಫೆರಲ್ ರಿಂಗ್ ರಸ್ತೆಗೆ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲು ಸೂಕ್ತ ಕಂಪನಿಗಳಿಂದ ಟೆಂಡರ್ ಕರೆದಿದ್ದಾರೆ. ಈಗಾಗಲೇ 6 ಏಜೆನ್ಸಿಗಳಿಂದ ಪ್ರಸ್ತಾಪ ಬಂದಿದ್ದು, ಪರಿಶೀಲಿಸಿ ಅತೀ ಶೀಘ್ರ ಅರ್ಹ ಏಜೆನ್ಸಿಗೆ ಈ ಜವಾಬ್ದಾರಿ ಒಪ್ಪಿಸಲಾಗುವುದು ಎಂದು ಸಚಿವರು ನುಡಿದರು.

ಹಣಕಾಸಿನ ಲಭ್ಯತೆ ಅವಲೋಕಿಸಿ ನಿಯಮಾನುಸಾರ ಇ ಪ್ರೊಕ್ಯೂರ್‌ಮೆಂಟ್ ಮೂಲಕ ಗ್ಲೋಬಲ್ ಟೆಂಡರ್ ಪ್ರಕ್ರಿಯೆ ನಡೆಸಿ ಪೆರಿಫೆರಲ್ ರಿಂಗ್ ರಸ್ತೆ ಕಾಮಗಾರಿಯನ್ನು ಅರ್ಹ ನಿರ್ಮಾಣ ಸಂಸ್ಥೆಗೆ ಒಪ್ಪಿಸುತ್ತೇವೆ ಎಂದ ಅವರು, 20 ರಿಂದ 30 ಮೀಟರ್ ಮೀಡಿಯನ್ ಹಾಗೂ ಭವಿಷ್ಯದಲ್ಲಿ ಅಗಲೀಕರಣಕ್ಕೆ ಬೇಕಾದ ಭೂಮಿಯನ್ನು ಉಳಿಸಿಕೊಂಡು ಸಾರಿಗೆ ನಿಯಮಗಳಿಗನುಸಾರ ಪಾರ್ಕ್, ಇಂಧನ, ಎಲೆಕ್ಟ್ರಿಕ್ ಚಾರ್ಜಿಂಗ್ ಕೇಂದ್ರ, ಫುಡ್ ಕೋರ್ಟ್, ಆಟೋ ವರ್ಕ್‌ಶಾಪ್, ವೇರ್‌ಹೌಸ್, ಮೆಡಿಕಲ್ ಕ್ಲಿನಿಕ್, ಇತರ ಮೂಲ ಸೌಲಭ್ಯಗಳಿಗೆ ಅನುವು ಮಾಡಿಕೊಟ್ಟು ಮೈಸೂರಿನ ಪೆರಿಫೆರಲ್ ರಿಂಗ್ ರಸ್ತೆ ಯೋಜನೆ ಜಾರಿಗೊಳಿಸಲು ಸರ್ವ ರೀತಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಭೈರತಿ ಸುರೇಶ್ ತಿಳಿಸಿದರು. ಪೆರಿಫೆರಲ್ ರಿಂಗ್ ರಸ್ತೆಗೆ ಭೂಮಿ ನೀಡಿದವರಿಗೆ ಪರಿಹಾರದ ಹಣ ಇಲ್ಲವೇ ಬೇರೆ ಕಡೆ ಭೂಮಿ ನೀಡುತ್ತೇವೆ. ರೈತರಿಗೂ ಅನ್ಯಾಯವಾಗದಂತೆ ಭೂ ಸ್ವಾಧೀನಪಡಿಸಿಕೊಂಡು ಕಾಮಗಾರಿ ಆರಂಭಿಸುತ್ತೇವೆ ಎಂದು ಅವರು ಇದೇ ಸಂದರ್ಭ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕ ಕೆ. ಹರೀಶ್‌ಗೌಡ, ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿ ಡಾ. ಎಂ.ಎನ್. ಅಜಯ್ ನಾಗಭೂಷಣ್, ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ, ಮುಡಾ ಕಮೀಷನರ್ ಜಿ.ಟಿ. ದಿನೇಶ್‌ಕುಮಾರ್, ನಗರ ಪೊಲೀಸ್ ಕಮೀಷನರ್ ಬಿ. ರಮೇಶ್, ಡಿಸಿಪಿ ಎಸ್. ಜಾಹ್ನವಿ, ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್, ಮುಡಾ, ಪಾಲಿಕೆ, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಶೀಘ್ರ ಫ್ಲೈಓವರ್ ನಿರ್ಮಾಣ

ರಿಂಗ್ ರಸ್ತೆ ಕೂಡುವುದರಿಂದ ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದೆ ಎಂದರು. ಈಗಾಗಲೇ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ನಿರ್ಮಿಸಿರುವ ಹೆದ್ದಾರಿಗಳ ಪ್ರಾಧಿಕಾರದಿಂದ ಫ್ಲೈಓವರ್ ನಿರ್ಮಾಣ ಯೋಜನೆಗೂ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರ ಅನುಮೋದನೆ ನೀಡಿರುವುದರಿಂದ ಅತೀ ಶೀಘ್ರ ಕಾಮಗಾರಿ ಆರಂಭವಾಗಲಿದೆ ಎಂದ ಅವರು, ವೈಜ್ಞಾನಿಕವಾಗಿ ಫ್ಲೈಓವರ್ ನಿರ್ಮಾಣವಾದರೆ, ರಿಂಗ್ ರಸ್ತೆ ಮತ್ತು ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಬರುವ ವಾಹನಗಳ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿಲ್ಲದೇ ಸರಾಗವಾಗಿ ಮುಂದೆ ಸಾಗಲು ಅನುಕೂಲವಾಗುತ್ತದೆ ಎಂದು ಸಚಿವರು ಇದೇ ಸಂದರ್ಭ ನುಡಿದರು. ಈ ವೇಳೆ ಪ್ರತಿಕ್ರಿಯಿಸಿದ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮೈಸೂರು ನಗರ ಮತ್ತು ಜಿಲ್ಲೆಯು ಅತೀ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವುದರಿಂದ ಪ್ರವಾಸಿಗರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಅದನ್ನು ಗಮನದಲ್ಲಿರಿಸಿಕೊಂಡು ಮುಂದಿನ 20 ವರ್ಷಗಳ ವಾಹನ ಸಂಚಾರ ದಟ್ಟಣೆಗನುಸಾರ ರಸ್ತೆಗಳು, ಫ್ಲೈಓವರ್‌ಗಳನ್ನು ನಿರ್ಮಿಸಬೇಕಾಗುತ್ತದೆ ಎಂದರು. ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಮುಖ್ಯಮಂತ್ರಿಗಳು ಆಸಕ್ತಿ ತೋರಿದ್ದು, ಆ ನಿಟ್ಟಿನಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿರುವುದಾಗಿಯೂ ಡಾ. ಮಹದೇವಪ್ಪ ತಿಳಿಸಿದರು.

ಮೈಸೂರಲ್ಲಿ ಮಹಾಮಳೆ ಆರ್ಭಟ

ಹೊರತೆಗೆದರು. ಕುವೆಂಪು ನಗರದ ಆರ್‌ಎಂಪಿ. ಕ್ವಾರ್ಟರ್ಸ್ ಹಿಂಭಾಗದ ಐಶ್ವರ್ಯ ಬಡಾವಣೆಯಲ್ಲಿ ಕೆರೆಯಂತಾಗಿತ್ತಲ್ಲದೆ ಹಲವು ಮನೆಗಳಿಗೆ ನೀರು ನುಗ್ಗಿದ್ದರಿಂದ ನಿವಾಸಿಗಳಿಗೆ ತೊಂದರೆಯಾಯಿತು. ಮಳೆ ನೀರು ಹರಿವಿಗೆ ಸೂಕ್ತ ವ್ಯವಸ್ಥೆ ಇಲ್ಲದ ಕಾರಣ ಬಡಾವಣೆಯ ಭಾಗಾರ್ಧ ಮಳೆ ಬಂದಾಗಲೆಲ್ಲಾ ಜಲಾವೃತವಾಗುತ್ತದೆ ಎಂದು ನಿವಾಸಿಗಳು ಅಳಲು ತೋಡಿಕೊಂಡರು.

ಬನ್ನಿಮಂಟಪ ಕಾವೇರಿನಗರದಲ್ಲಿ ವಿದ್ಯುತ್ ಕಂಬವೊಂದು ವಾಲಿ ಮನೆಯೊಂದಕ್ಕೆ ಒರಗಿ ನಿಂತಿದ್ದು, ಅದೃಷ್ಟವಶಾತ್ ಯಾವುದೇ ಅನಾಹುತ ಸಂಭವಿಸಿಲ್ಲ. ಈ ಬಗ್ಗೆ ಸೆಸ್ಕ್ ಅಧಿಕಾರಿಗಳಿಗೆ ಮಾಹಿತಿ ನೀಡಿದರೂ ಯಾರೊಬ್ಬರೂ ಸ್ಥಳಕ್ಕೆ ಭೇಟಿ ನೀಡದೆ ನಿರ್ಲಕ್ಷ ತೋರಿದ್ದಾಗಿ ಇಲ್ಲಿನ ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದಾರೆ. ವಿದ್ಯುತ್ ಕಂಬ ಅಪಾಯ ಸ್ಥಿತಿಯಲ್ಲಿರುವ ಬಗ್ಗೆ ಹಿಂದೆಯೇ ತಿಳಿಸಿದ್ದರೂ ಯಾರೂ ಕ್ರಮ ಕೈಗೊಳ್ಳದಿರುವ ಕಾರಣ ಇಂದು ಗಾಳಿ ಸಹಿತ ಮಳೆಯಿಂದ ಮನೆಮೇಲೆ ಬಾಗಿದೆ ಎಂದು ಆರೋಪಿಸಿದರು. ಬೃಂದಾವನ ಬಡಾವಣೆ, ಮುನೇಶ್ವರನಗರ ಸೇರಿದಂತೆ ಹಲವೆಡೆ ತಗ್ಗು ಪ್ರದೇಶದ ಮನೆಗಳಿಗೆ ನೀರು ನುಗ್ಗಿದೆ. ರಸ್ತೆಗಳಲ್ಲಿ ರಭಸವಾಗಿ ನೀರು ಹರಿದು ತಗ್ಗು ಪ್ರದೇಶದಲ್ಲಿ ಕೆರೆಯಂತಾಗಿತ್ತು. ಕೆಲವೆಡೆ ಮ್ಯಾನ್‌ಹೋಲ್‌ಗಳು ಉಕ್ಕಿ ಹರಿದವು. ಮಳೆ ನೀರು ಚರಂಡಿಗಳಲ್ಲಿ ಧಾರಾಕಾರವಾಗಿ ನೀರು ಹರಿಯುತ್ತಿತ್ತು. ಸಂಜೆಯೇ ಮಳೆ ಆರಂಭವಾದ್ದರಿಂದ ವಾಹನ ಸವಾರರು ಪರದಾಡುವಂತಾಗಿತ್ತು.

ಪಾಲಿಕೆ ನಿಷ್ಕ್ರಿಯ: ಧಾರಾಕಾರ ಮಳೆಯಿಂದ ತೊಂದರೆ ಅನುಭವಿಸಿದ ಸಾರ್ವಜನಿಕರು ನಗರ ಪಾಲಿಕೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ಮನೆಗೆ ನೀರು ತುಂಬಿರುವ ಬಗ್ಗೆ ತಿಳಿಸಲೆಂದು ಪಾಲಿಕೆ ಕಂಟ್ರೋಲ್ ರೂಂಗೆ ಕರೆ ಮಾಡಿದರೆ ಸಂಪರ್ಕ ಸಾಧ್ಯವಾಗುತ್ತಿಲ್ಲ. ಅಭಯ ತಂಡದವರೂ ಸಂಪರ್ಕಕ್ಕೆ ಸಿಗುತ್ತಿಲ್ಲ. ನಗರ ಪಾಲಿಕೆ ಸಂಪೂರ್ಣ ನಿಷ್ಕ್ರಿಯವಾಗಿದೆ ಎಂದು ಆರೋಪಿಸಿದ್ದಾರೆ.

ಮೈಸೂರಲ್ಲೇ ಭಾರೀ ಮಳೆ: ಹಳೇ ಮೈಸೂರು ಭಾಗದಲ್ಲಿ ಮೈಸೂರು ನಗರದಲ್ಲಿ ಭಾರೀ ಮಳೆಯಾಗಿದೆ. ಮಂಡ್ಯ, ಚಾ.ನಗರದಲ್ಲಿ ಉತ್ತಮ ಮಳೆಯಾದರೆ, ಕೊಡಗಿನಲ್ಲಿ ಸಾಧಾರಣ ಹಾಗೂ ಹಾಸನದಲ್ಲಿ ಮಳೆ ಬಿದ್ದಿಲ್ಲ.

ಮನೆ ಬಾಗಿಲಿಗೆ ಪಡಿತರ ಪದಾರ್ಥ

ಅರ್ಹತೆ ಇದ್ದವರಿಗೆ ಬಿಪಿಎಲ್ ಕಾರ್ಡ್ ದೊರೆಯುತ್ತದೆ. ಆದರೆ ಎಪಿಎಲ್ ಕಾರ್ಡ್ ನೀಡಲು ಯಾವುದೇ ಪ್ರತ್ಯೇಕ ನಿಯಮ ಇಲ್ಲ. ಸೂಕ್ತ ದಾಖಲಾತಿಗಳನ್ನು ನೀಡಿದರೆ ಎಪಿಎಲ್ ಕಾರ್ಡ್ ಪಡೆಯಬಹುದು ಎಂದು ಸ್ಪಷ್ಟಪಡಿಸಿದರು.

ಕರ್ನಾಟಕದಲ್ಲಿ 1.28 ಕೋಟಿ ಬಿಪಿಎಲ್ ಕಾರ್ಡ್ ದಾರರಿದ್ದಾರೆ. ಇವರಲ್ಲಿ 1.10 ಕೋಟಿ ಜನರು ಆಹಾರ ಪದಾರ್ಥ ಪಡೆಯುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ಸದ್ಯಕ್ಕೆ 5 ಕೆ.ಜಿ. ಅಕ್ಕಿ ಬದಲು ಹಣ ನೀಡಲಾಗುತ್ತಿದ್ದು, ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾವಣೆ ಮಾಡಲಾಗುತ್ತಿದೆ. ಆದರೆ ಹಣದ ಪ್ರಮಾಣ ತಿಂಗಳಿನಿಂದ ತಿಂಗಳಿಗೆ ಹೆಚ್ಚಾಗುತ್ತಿದೆ. ಜುಲೈ ತಿಂಗಳಲ್ಲಿ 566 ಕೋಟಿ ರೂಪಾಯಿ ಆಗಿತ್ತು, ಆಗಸ್ಟ್‌ನಲ್ಲಿ 605 ಕೋಟಿಯಾಯಿತು, ಸೆಪ್ಟೆಂಬರ್‌ನಲ್ಲಿ 627 ಕೋಟಿಗೇರಿತು, ಈಗ ಅಕ್ಟೋಬರ್ ತಿಂಗಳಲ್ಲಿ 644 ಕೋಟಿ ರೂಪಾಯಿ ಆಗಿದ್ದು, ಅಷ್ಟು ಹಣವನ್ನು ನೀಡಲಾಗಿದೆ. ಆಧಾರ್ ಕಾರ್ಡ್, ಪಾಸ್ ಬುಕ್ ಸೇರಿದಂತೆ ಇತರೆ ದಾಖಲಾತಿ ನೀಡುವವರ ಸಂಖ್ಯೆ ಹೆಚ್ಚಾಗುತ್ತಿರುವ ಕಾರಣ ಫಲಾನುಭವಿಗಳ ಸಂಖ್ಯೆ ಏರಿಕೆಯಾಗುತ್ತಿದೆ ಎಂದು ಮುನಿಯಪ್ಪ ಅಂಕಿ ಅಂಶಗಳ ವಿವರ ನೀಡಿದರು. ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗೆ 50 ಸಾವಿರ ಕೋಟಿ ರೂಪಾಯಿ ಮೀಸಲಿಡಲಾಗಿದೆ. ಇದರಿಂದ ರಾಜ್ಯದ ಅಭಿವೃದ್ಧಿ ಶೂನ್ಯ ಎಂಬ ವಿಪಕ್ಷಗಳ ಆರೋಪ ಶುದ್ಧ ಸುಳ್ಳು. ಅಂಬಾನಿ, ಅದಾನಿಯ ಲಕ್ಷಾಂತರ ಕೋಟಿ ರೂಪಾಯಿ ಸಾಲದ ಹಣ ಮನ್ನಾ ಮಾಡಲಾಗುತ್ತಿದೆ. ಅದರಲ್ಲಿ ಶೇಕಡ 10 ರಲ್ಲಿ 1 ಭಾಗವನ್ನು ಮಾತ್ರ ಜನರಿಗೆ ನೀಡಲಾಗುತ್ತಿದೆ. ಸಾಮಾನ್ಯ ಜನರಿಗೆ ನೀಡಿದರೆ ತಪ್ಪೇನು ಎಂದು ಪ್ರಶ್ನಿಸಿದರು.



ಮೈಸೂರಿನ ಹೋಟೆಲ್ ಉದ್ಯಮಿಯೂ ಆದ ಚಿತ್ರ ನಿರ್ಮಾಪಕ ಸಂದೇಶ್ ಎನ್. ಅವರಿಗೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜ್, ಮಾಜಿ ಮೇಯರ್‌ಗಳಾದ ಅಯೂಬ್ ಖಾನ್, ಆರೀಫ್ ಹುಸೇನ್, ಮಾಜಿ ಉಪ ಮೇಯರ್ ಮಹದೇವಪ್ಪ, ಪ್ರಭು ಇನ್ನಿತರರು ಉಪಸ್ಥಿತರಿದ್ದರು.



ಮೈಸೂರಿನ ಹೋಟೆಲ್ ಉದ್ಯಮಿಯೂ ಆದ ಚಿತ್ರ ನಿರ್ಮಾಪಕ ಸಂದೇಶ್ ಎನ್. ಅವರಿಗೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಸುರೇಶ್, ರವಿ, ಕ್ಯಾಂಟೀನ್ ರವಿ, ರಮೇಶ್, ಪರ್ವೀಜ್ ಇನ್ನಿತರರು ಹುಟ್ಟುಹಬ್ಬದ ಶುಭಾಶಯ ಕೋರಿದರು.

ರಂಗ ತರಬೇತಿ ಕಾರ್ಯಾಗಾರ

ಮೈಸೂರು, ನ. 6– ಮೈಸೂರಿನ ಆನ್ ಸ್ಟೇಜ್ ಯೂತ್ ಥಿಯೇಟರ್ ವತಿಯಿಂದ ನ. 10 ರಿಂದ ಡಿ. 24ರ ವರೆಗೆ ರಂಗ ತರಬೇತಿ ಕಾರ್ಯಾಗಾರವನ್ನು ಬಸವನಗುಡಿ ವೃತ್ತದಲ್ಲಿರುವ ಅಣ್ಣಯ್ಯಪ್ಪ ಭೈರವೇಶ್ವರ ವಿದ್ಯಾ ಸಂಸ್ಥೆಯಲ್ಲಿ ಆಯೋಜಿಸಲಾಗಿದೆ. ಕಾರ್ಯಾಗಾರವು 45 ದಿನಗಳ ಕಾಲ ಪ್ರತಿದಿನ ಸಂಜೆ 6.30 ರಿಂದ 9 ರವರೆಗೆ ನಡೆಯಲಿದೆ.

18 ವರ್ಷ ಮೇಲ್ಪಟ್ಟ ಮಹಿಳೆ ಯರು ಮತ್ತು ಪುರುಷರು ಈ ಕಾರ್ಯಾಗಾರದಲ್ಲಿ ಭಾಗವಹಿಸಬಹುದು. ಆಸಕ್ತರು ನ. 8 ರೊಳಗೆ ತಮ್ಮ ಹೆಸರು ನೋಂದಾಯಿಸಿಕೊಳ್ಳ ಬಹುದು. ಹೆಚ್ಚಿನ ಮಾಹಿತಿಗೆ ಮೊ. 88923 14554 ಸಂಪರ್ಕಿಸಬಹುದು.

ಹೊಸ ರಸ್ತೆ ಕಾಮಗಾರಿಗೆ 4000 ಕೋಟಿವರೆಗೂ ಪ್ರಸ್ತಾವನೆ



- ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆ
- ಸದ್ಯಕ್ಕೆ ಸಿಎಂ ಸ್ಥಾನ ಖಾಲಿ ಇಲ್ಲ; 2028ಕ್ಕೆ ಕೇಳುತ್ತೇವೆ

ಬೆಂಗಳೂರು, ನ.6(ಕೆಎಂಶಿ)– ಹೊಸ ರಸ್ತೆ ಕಾಮಗಾರಿ ಕೈಗೊಳ್ಳಲು 4,000 ಕೋಟಿ ರೂ.ವರೆಗೂ ಪ್ರಸ್ತಾವನೆ ಕಳಿಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಪ್ರಸ್ತಾವಕ್ಕೆ ಅನುಮೋದನೆ ಸಿಕ್ಕಿದರೆ ಹೊಸದಾಗಿ ರಸ್ತೆ ಕಾಮಗಾರಿ ಕೈಗೊಳ್ಳಲಾಗುವುದು, ನಮ್ಮ ಅವಧಿಯಲ್ಲಿ ಯಾವುದೇ ಕಾಮಗಾರಿ ಬಿಲ್ ಬಾಕಿ ಇಲ್ಲ, ಇರುವುದೆಲ್ಲವೂ ಹಿಂದಿನ ಬಿಜೆಪಿ ಸರ್ಕಾರದ ಅವಧಿಗೆ ಸೇರಿದ್ದು ಎಂದರು.

ನಾಲ್ಕು ಸಾವಿರ ಕೋಟಿ ರೂ.ನಷ್ಟು ಹೆಚ್ಚುವರಿ ಬಾಕಿ ಸೇರಿದಂತೆ ಒಟ್ಟು 6,000 ಕೋಟಿ ರೂ.ನಷ್ಟು ಬಿಲ್ ಬಾಕಿ ಇದೆ ಎಂದರು. ವಾಲ್ಮೀಕಿ ಪೀಠದ ಶ್ರೀಪ್ರಸನ್ನಾನಂದಪುರಿ ಸ್ವಾಮೀಜಿ ಅವರು, ಸತೀಶ್ ಜಾರಕಿಹೊಳಿ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ಸಮುದಾಯದ ಪರವಾಗಿ ಹೇಳಿಕೆ ನೀಡಿದ್ದಾರೆ, ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿ ಇಲ್ಲ. 2028ಕ್ಕೆ ಮುಖ್ಯಮಂತ್ರಿ ಸ್ಥಾನ ಕೊಡಿ ಎಂದು ಕೋರಲಾಗುವುದು. ಇದೇ ರೀತಿ ಬೇರೆಯವರು ಕೇಳುವುದು, ಬಿಡುವುದು ಅವರವರ ಇಷ್ಟ ಎಂದರು.

ಸಿದ್ದರಾಮಯ್ಯ ಅವರೇ ಐದು ವರ್ಷ ಮುಖ್ಯಮಂತ್ರಿ ಎಂದು ಹೇಳಿರುವಾಗ ಬೇರೆಯವರು ಹೇಳುವ ಅಗತ್ಯ ಇಲ್ಲ. ಈ ವಿಚಾರದಲ್ಲಿ ಪಕ್ಷದ ತೀರ್ಮಾನವೇ ನನ್ನ ತೀರ್ಮಾನವಾಗಿದ್ದು, ಇಂತಹ ಸಂದರ್ಭದಲ್ಲಿ ಅಭಿಪ್ರಾಯ ಹೇಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದರು.

ಪ್ರಧಾನಿ ಮೋದಿ ಅವರು ರಾಜಕೀಯ ಭಾಷಣ ಮಾಡುತ್ತಾರೆ, ನಮ್ಮಲ್ಲಿ ವಾಕ್ ಸ್ವಾತಂತ್ರ್ಯವಿದೆ, ಆದರೆ ಆ ಪಕ್ಷದಲ್ಲಿ ಸ್ವಾತಂತ್ರ್ಯವಿಲ್ಲ ಎಂದು ಹೇಳಿದರು.

ಮೈ ಬಿಲ್ಡ್ ಕಟ್ಟಡ ಸಾಮಗ್ರಿಗಳ ಆಕರ್ಷಕ ವಸ್ತು ಪ್ರದರ್ಶನ

ಮೈಸೂರು, ನ. 6–ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಮೈಸೂರು ಘಟಕದ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯು 23ನೇ ಆವೃತ್ತಿಯ ಮೈ ಬಿಲ್ಡ್ ಕಟ್ಟಡ ಸಾಮಗ್ರಿಗಳ ಆಕರ್ಷಕ ವಸ್ತು ಪ್ರದರ್ಶನವನ್ನು ಮಹಾರಾಜ ಕಾಲೇಜು ಮೈದಾನದಲ್ಲಿ ಡಿಸೆಂಬರ್ 7ರಿಂದ 11ನೇ ತಾರೀಖಿನವರೆಗೆ 5 ದಿನ ಆಯೋಜಿಸಲಾಗಿದೆ. 175 ಉತ್ಕೃಷ್ಟವಾದ ಮಳಿಗೆಗಳು ಮಾತ್ರ ಲಭ್ಯವಿರುವುದರಿಂದ ಮೊದಲು ಬಂದವರಿಗೆ ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗುತ್ತದೆ. ಆಸಕ್ತರು ತಮ್ಮ ಆಯ್ಕೆಯ ಮಳಿಗೆಗಳನ್ನು ಕಾಯ್ದಿರಿಸಲು ಕೆಳಗಿನ ದೂರವಾಣಿ ಸಂಖ್ಯೆಗಳನ್ನು ಸಂಪರ್ಕಿಸುವುದು. ಎಂ.ಡಿ.ಚಂದ್ರಶೇಖರ್ 9448049242, ರಮೇಶ್ ರಾವ್.ಆರ್ 9448048124



ಮೈಸೂರಿನ ಹೋಟೆಲ್ ಉದ್ಯಮಿಯೂ ಆದ ಚಿತ್ರ ನಿರ್ಮಾಪಕ ಸಂದೇಶ್ ಎನ್. ಅವರಿಗೆ ವರನಟ ಡಾ.ರಾಜ್‌ಕುಮಾರ್ ಪುತ್ರಿ ಪೂರ್ಣಿಮಾ ರಾಜ್‌ಕುಮಾರ್ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ವೇಳೆ ಪೂರ್ಣಿಮಾ ಪುತ್ರಿ, ಚಿತ್ರನಟಿ ಧನ್ಯಾ ರಾಮ್‌ಕುಮಾರ್, ಶಿವಪ್ರಕಾಶ್ ಉಪಸ್ಥಿತರಿದ್ದರು.



ಮೈಸೂರಿನ ಕಾಂಗ್ರೆಸ್ ಕಚೇರಿಗೆ ಸೋಮವಾರ ಆಗಮಿಸಿದ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರನ್ನು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಗುಣಶೇಖರ್, ವಿಶ್ವನಾಥ್ (ವಿಶ್ವ),ಜಿ. ವಿನಯ್ ಕುಮಾರ್, ಮಧು ಮಳಲವಾಡಿ, ಕುರುಬಾರಹಳ್ಳಿ ಪ್ರಕಾಶ್ ಇನ್ನಿತರರಿದ್ದರು.

ಸತತ 36 ಗಂಟೆ ಕಾಲ ಕೈಮಗ್ಗ ನೇಕಾರಿಕೆ ಕಾಯಕ



36 ಗಂಟೆ ಸತತ ನೇಯ್ಗೆ ಮಾಡಿದ ಸೀರೆಯೊಂದಿಗೆ ಎ.ಪಿ.ನಾಗರಾಜ್.

ಕೈಮಗ್ಗದಲ್ಲಿ ಕೌಶಲ್ಯ ಮೆರೆದ ಎ.ಪಿ.ನಾಗರಾಜ್

ಸಾಮಾನ್ಯವಾಗಿ ಇಷ್ಟು ಸುದೀರ್ಘ ಕಾಲ ಕೈಮಗ್ಗದಲ್ಲಿ ನೇಯ್ಗೆ ಮಾಡಿದವರು ಬೇರ್‍ಯಾರೂ ಇರಲಿಕ್ಕಿಲ್ಲ. ದಸರಾ ಉತ್ಸವದ ವಿಶೇಷತೆಗಾಗಿ ಎ.ಪಿ.ನಾಗರಾಜ್ ಈ ರೀತಿಯ ವಿಶಿಷ್ಟ ಸಾಧನೆ ಮಾಡಿದ್ದಾರೆ. ಇದಕ್ಕೆ ಇಲಾಖೆಯಿಂದ ಎಲ್ಲಾ ಅಗತ್ಯ ಸಹಕಾರ ನೀಡಲಾಯಿತು. –ಜನಾರ್ಧನ್, ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ.





■ ಎಂ.ಬಿ.ಪವನ್‌ಮೂರ್ತಿ

ಮೈಸೂರು,ನ.6– ಅತ್ಯಾಧುನಿಕ ಯಾಂತ್ರೀಕರಣದ ಭರಾಟೆಯಲ್ಲಿ ಈ ನೆಲದ ಅದೆಷ್ಟೊ ಕುಲಕಸುಬು ಅವನತಿಯತ್ತ ಸಾಗಿದ್ದು, ಪರಿಣಾಮ ದುಡಿಯುವ ಕೈಗಳಿಗೆ ಕೆಲಸವಿಲ್ಲದಂತಹ ಸನ್ನಿವೇಶ ಸೃಷ್ಟಿಯಾಗುತ್ತಿದೆ. ಈ ಸಾಲಿಗೆ ಕೈಮಗ್ಗ ನೇಕಾರಿಕೆಯೂ ಸೇರುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಈ ನಡುವೆ ಕೈಮಗ್ಗ ನೇಕಾರಿಕೆ ಕುಲಕಸುಬು ಉಳಿಸಿ–ಬೆಳೆಸಲು ವ್ಯವಸ್ಥೆಯ ಗಮನ ಸೆಳೆಯುವ ಹಂಬಲ ಹೊಂದಿರುವ ಕೈಮಗ್ಗ ನೇಕಾರಿಕೆಯ ಕುಶಲಕರ್ಮಿ ಎ.ಪಿ.ನಾಗರಾಜ್, ಸತತ 36 ಗಂಟೆಗಳ ಕಾಲ ಕೈಮಗ್ಗದಲ್ಲಿ ನೇಯ್ಗೆ ಮಾಡುವ ಮೂಲಕ ತಮ್ಮ ವಿಶಿಷ್ಟ ಕೌಶಲ್ಯ ಮೆರೆದಿದ್ದಾರೆ. ಇಂತಹ ಇವರ ಸಾಧನೆಗೆ ಮೈಸೂರಿನ ದಸರಾ ವಸ್ತು ಪ್ರದರ್ಶನ ಆವರಣದ ಕೈಮಗ್ಗ ಮತ್ತು ಜವಳಿ ಇಲಾಖೆಯ ಮಳಿಗೆಯ ಅಂಗಳ ಸಾಕ್ಷಿಯಾಗಿದೆ.

ಇದೇ ಅ.23ರ ಆಯುಧಪೂಜೆ ಹಬ್ಬದಂದು ಬೆಳಗ್ಗೆ 6 ಗಂಟೆಯಿಂದ 24ರ ಸಂಜೆ 6 ಗಂಟೆಯವರೆಗೆ ನಿರಂತರ ಸೀರೆ ನೇಯ್ಗೆ ಮಾಡಿ, ಕಠಿಣ ಪರಿಶ್ರಮ ಅಪೇಕ್ಷಿಸುವ ಕಾಯಕವನ್ನು ಪರಿಪೂರ್ಣಗೊಳಿಸಿ, ಸಾಧಿಸಿ ತೋರಿಸಿದ್ದಾರೆ. ಮೈಸೂರು ಮಹಾರಾಜರ ರಾಜಲಾಂಛನವಾದ ಗಂಡಭೇರುಂಡ ಚಿತ್ರಗಳ ವಿನ್ಯಾಸ ಒಳಗೊಂಡಂತೆ 36 ಗಂಟೆಗಳಲ್ಲಿ ಮೂರೂವರೆ ಮೀಟರ್ ಸೀರೆಯನ್ನು ಕಾಟನ್ (ಹತ್ತಿ) ನೂಲಿನಿಂದ ನೇಯ್ಗೆ ಮಾಡಿದ್ದಾರೆ.

ಕಡುನೀಲಿ (ನೇರಳೆ) ಬಣ್ಣದ ಈ ಸೀರೆಯ ಬಾರ್ಡರ್‌ನಲ್ಲಿ ತಿಳಿಗುಲಾಬಿ ಮತ್ತು ತಿಳಿಕಂದು ಬಣ್ಣಗಳ ಪಟ್ಟಿ ಇದ್ದು, ಒಂದು ಬದಿಯಲ್ಲಿ 11 ಗಂಡಭೇರುಂಡಗಳ ಚಿತ್ರ ವಿನ್ಯಾಸವು ತಿಳಿನೀಲಿ ಹಾಗೂ ತಿಳಿಕಂದು ಬಣ್ಣಗಳಲ್ಲಿ ಮೂಡಿ ಬಂದಿವೆ. ಬೇಲೂರಿನ ಸರ್ಕಾರಿ ಪಾಲಿಟೆಕ್ನಿಕ್ ಉಪನ್ಯಾಸಕ ಡಾ.ಹೆಚ್.ಟಿ.ಪಾಂಡುರಂಗ ಸಿದ್ಧಪಡಿಸಿರುವ ಎಲೆಕ್ಟ್ರಾನಿಕ್ ಜಕಾರ್ಡ್ ತಂತ್ರಜ್ಞಾನವನ್ನು ಇವರು ತಮ್ಮ ಕೈಮಗ್ಗಕ್ಕೆ ಅಳವಡಿಸಿಕೊಂಡು ಗಂಡಭೇರುಂಡ ಚಿತ್ರಗಳನ್ನು ಮೂಡಿಸಿದ್ದಾರೆ. ಉಡುಪು ತಯಾರಿಕೆಯಲಿ



ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದ ಕೈಮಗ್ಗ ಮತ್ತು ಜವಳಿ ಇಲಾಖೆ ಮಳಿಗೆಯಲ್ಲಿ ಸತತ 36 ಗಂಟೆಯಲ್ಲಿ ನೇಯ್ಗೆ ಮಾಡಿದ ಸೀರೆಯನ್ನು ಸಾರ್ವಜನಿಕರು ವೀಕ್ಷಿಸುತ್ತಿರುವುದು.

ಆಸಕ್ತ ಯುವ ಜನರಿಗೆ ಕೈಮಗ್ಗ ನೇಕಾರಿಕೆ ತರಬೇತಿ ನೀಡುವ ನಾಗರಾಜ್

'ಕೈಮಗ್ಗದ ನಾಗರಾಜ್' ಎಂದೇ ಖ್ಯಾತನಾಮಗೊಂಡು ಬೆಂಗಳೂರಿನ ಬನಶಂಕರಿಯಲ್ಲಿ ವಾಸವಾಗಿರುವ ಎ.ಪಿ.ನಾಗರಾಜ್, ಕೈಮಗ್ಗ ನೇಕಾರಿಕೆ ಉಳಿಸಲು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಆಸಕ್ತ ಯುವ ಜನರು, ಮಹಿಳೆಯರಿಗೆ ಕೈಮಗ್ಗ ನೇಕಾರಿಕೆಯ ತರಬೇತಿ ನೀಡುವ ಕಾಯಕದಲ್ಲೂ ನಿರತರಾಗಿದ್ದಾರೆ.

ಬಡ ನೇಕಾರ ಕುಟುಂಬದಲ್ಲಿ 1970ರ ಜು.15ರಂದು ಜನಿಸಿದ ಇವರು, ತಮ್ಮ 9ನೇ ವಯಸ್ಸಿನಿಂದಲೇ ವಿದ್ಯಾಭ್ಯಾಸದ ಜೊತೆಗೆ ಕೈಮಗ್ಗ ನೇಕಾರಿಕೆಯ ಕೌಶಲ್ಯವನ್ನೂ ಮೈಗೂಡಿಸಿಕೊಂಡರು. ಪಳನಿಸ್ವಾಮಿ ಮತ್ತು ಸರಸ್ವತಮ್ಮ ದಂಪತಿ ಪುತ್ರರಾದ ಇವರು, 1988ರಲ್ಲಿ ಗೀತಾ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ದುರದೃಷ್ಟವಶಾತ್ ಮದುವೆಯಾದ 18ನೇ ವರ್ಷಕ್ಕೆ ಪತ್ನಿ ಕಳೆದುಕೊಂಡರು. ಇದೀಗ ಪುತ್ರ, ಪುತ್ರಿಯ ಜೊತೆಗೆ ಬದುಕು ಸಾಗಿಸುತ್ತಿದ್ದಾರೆ. ತಮ್ಮ ಕಾಯಕ ಮತ್ತು ಅದಕ್ಕೆ ಅಗತ್ಯವಿರುವ ತಾಂತ್ರಿಕ ಕೌಶಲ್ಯ ಎರಡರಲ್ಲೂ ಪರಿಣತಿ ಹೊಂದಿರುವುದು ಇವರ ವಿಶೇಷ. ಅರಳೆ, ರೇಷ್ಮೆ, ರೆಯಾನ್ ನೂಲಿನಲ್ಲಿ ಬಟ್ಟೆ ದುಪ್ಪಟ್ಟಿ, ಪಂಚೆ ಮತ್ತು ಸೀರೆಯನ್ನು ಕೈಮಗ್ಗದಲ್ಲಿ ನೇಯ್ಗೆ ಮಾಡುವಲ್ಲಿ ನಾಗರಾಜ್ ವಿಶಿಷ್ಟ ಕೌಶಲ್ಯ ಹೊಂದಿದ್ದಾರೆ.

ಈ ನೆಲದ ಸಂಸ್ಕೃತಿಯ ಪ್ರತೀಕವಾದ 'ಕೈಮಗ್ಗ ನೇಕಾರಿಕೆಯ ಅಸ್ತಿತ್ವ ಉಳಿಸುವ ನಿಟ್ಟಿನಲ್ಲಿ ವ್ಯವಸ್ಥೆಯ ಗಮನ ಸೆಳೆಯಲು ನಾಗರಾಜ್ ಕೈಗೊಂಡ ಸುದೀರ್ಘ ಸಮಯದ ಕೈಮಗ್ಗ ನೇಕಾರಿಕೆಯನ್ನು ಹತ್ತಿರದಿಂದ ಕಂಡವರು ತುಂಬು ಹೃದಯದಿಂದ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ಸರ್ಕಾರದ ಕೈಮಗ್ಗ ಮತ್ತು ಜವಳಿ ಇಲಾಖೆ, ಬೆಂಗಳೂರಿನ ಕಾವೇರಿ ಹ್ಯಾಂಡ್ ಲೂಮ್ಸ್ ವತಿಯಿಂದ ಇಂತಹ ವಿಶಿಷ್ಟ ಕಾಯಕಕ್ಕೆ ವೇದಿಕೆ ಕಲ್ಪಿಸಿ, ನಾಗರಾಜ್ ಸಾಧನೆಯನ್ನು ಸಾಕ್ಷೀಕರಿಸಲಾಗಿದೆ.

ಹಲವು ದಿನಗಳ ಕನಸು: ಸಾಮಾನ್ಯವಾಗಿ ಒಂದು ಸೀರೆಯು ಆರು ಕಾಲು ಮೀಟರ್ ಬರುತ್ತದೆ. ನಾನು 36 ಗಂಟೆಗಳಲ್ಲಿ ಮೂರುವರೆ ಮೀಟರ್ ಸೀರೆ ನೇಯ್ಗೆ ಮಾಡಿದ್ದೇನೆ. ಈ ನಿರಂತರ ಕಾಯಕದಲ್ಲಿ ಮೂರು ಗಂಟೆಗೊಮ್ಮೆ 15 ನಿಮಿಷ ಕಾಲ ವಿರಾಮ ತೆಗೆದುಕೊಂಡೆ. ನನಗೆ ತಿಳಿದ ಮಟ್ಟಿಗೆ ಇಷ್ಟು ದೀರ್ಘ ಸಮಯ ಕೈಮಗ್ಗದಲ್ಲಿ ನೇಯ್ಗೆ ಮಾಡಿದವರು ರಾಜ್ಯದಲ್ಲಿ ಬೇರ್‍ಯಾರೂ ಇಲ್ಲ. ಮೈಸೂರು ದಸರಾ ಸಂದರ್ಭದಲ್ಲಿ ಇಂತಹ ಒಂದು ವಿಶಿಷ್ಟ ದಾಖಲೆ ಮಾಡಬೇಕೆಂಬುದು ನನ್ನ ಹಲವು ದಿನಗಳ ಕನಸಾಗಿತ್ತು ಎನ್ನುತ್ತಾರೆ ಎ.ಪಿ.ನಾಗರಾಜ್.

ಕೈಮಗ್ಗ ನೇಕಾರಿಕೆ ಕಾಯಕದಲ್ಲಿ ಈಗ ಕೇವಲ 60 ವರ್ಷ ಮೇಲ್ಪಟ್ಟವರು ಇದ್ದಾರೆ. ಹೊಸ ಪೀಳಿಗೆಯವರು ಬರುತ್ತಿಲ್ಲ. ಬದಲಿಗೆ ಇವರು ಪವರ್‌ಲೂಮ್‌ನತ್ತ ಮುಖ ಮಾಡಿದ್ದಾರೆ. ಕೈಮಗ್ಗ ನೇಕಾರಿಕೆ ಹೆಚ್ಚು ಪರಿಶ್ರಮ ಅಪೇಕ್ಷಿಸುತ್ತದೆ. ಒಂದು ಸೀರೆ ಸಿದ್ಧಗೊಳ್ಳಲು 252 ಇಂಚು ನೇಯ್ಗೆ ಮಾಡಬೇಕು. ಇದಕ್ಕಾಗಿ 25 ಸಾವಿರ ಬಾರಿ ಕೈ–ಕಾಲು ಆಡಿಸಬೇಕಾಗುತ್ತದೆ. 36 ಗಂಟೆಗಳ ಕಾಲದ ನೇಕಾರಿಕೆಯಲ್ಲಿ ಸಿದ್ಧಪಡಿಸಿರುವ ಸೀರೆಗೆ ಉತ್ತಮ ಗುಣಮಟ್ಟದ ಹತ್ತಿ ನೂಲು ಬಳಸಲಾಗಿದೆ.

ಹಲವರು ಈ ವಿಶಿಷ್ಟ ದಾಖಲೆಗೆ ಸಾಕ್ಷಿಯಾಗಿದ್ದೇವೆ....



ಕೈಮಗ್ಗದಲ್ಲಿ ಸತತ 36 ಗಂಟೆ ಕಾಲ ನೇಯ್ಗೆ ಮಾಡಿದುವರು ರಾಜ್ಯದಲ್ಲಿ ಬೇರೆ ಯಾರೂ ಇರುವುದು ನಮ್ಮ ಗಮನಕ್ಕೆ ಬಂದಿಲ್ಲ. ಇವರು ಕೈಮಗ್ಗ ನೇಕಾರಿಕೆ ಉಳಿಸಬೇಕೆಂಬ ನಿಟ್ಟಿನಲ್ಲಿ ದಸರಾ ವಸ್ತು ಪ್ರದರ್ಶನ ವೇದಿಕೆಯಲ್ಲಿ ಕಲ್ಪಿಸಿದ ಅವಕಾಶ ಬಳಸಿಕೊಂಡು ಇಂತಹ ಒಂದು ದಾಖಲೆ ಮಾಡಿದ್ದಾರೆ. ಕೈಮಗ್ಗ ನೇಯ್ಗೆ ಎಂಬುದು ಸೂಕ್ಷ್ಮ ಮತ್ತು ಹೆಚ್ಚು ಪರಿಶ್ರಮ ಅಪೇಕ್ಷಿಸುವ ಕೆಲಸ. ಏಕಾಗ್ರತೆಯಿಂದ ಕೆಲಸ ಮಾಡಬೇಕು. ಮುತುವರ್ಜಿ ವಹಿಸಿ ಈ ಕ್ಲಿಷ್ಟಕರ ಕೆಲಸವನ್ನು ಯಶಸ್ವಿಯಾಗಿ ನಡೆಸಿದ್ದಾರೆ. ಇವರ ಈ ಸುದೀರ್ಘ ಕಾಯಕದ ಸಂದರ್ಭದಲ್ಲಿ ನಾನು ಸೇರಿದಂತೆ ಹಲವರು ಅವರ ಜೊತೆಯಲ್ಲೇ ಇದ್ದು, ಅವರ ಈ ದಾಖಲೆಗೆ ಸಾಕ್ಷಿಯಾಗಿದ್ದೇವೆ. ನೇಕಾರ ಮನಸ್ಸು ಮಾಡಿದರೆ ಕೈಮಗ್ಗ ನೇಕಾರಿಕೆ ಉಳಿಸಿ ಬೆಳೆಸಬಹುದು ಎಂಬುದನ್ನು ಇವರು ತೋರಿಸಿಕೊಟ್ಟಿದ್ದಾರೆ.

–ಶಿವಲಿಂಗ ಜಿ.ಟಿರಕಿ, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘ

ದೇಶದ ಕೈಮಗ್ಗ ನೇಕಾರಿಕೆಯಲ್ಲಿ ಇಳಿಮುಖ

1998ರಲ್ಲಿ ದೇಶದಲ್ಲಿ 67 ಲಕ್ಷ ಕೈಮಗ್ಗ ಇದ್ದವು. ಅವೆಲ್ಲಾ ಕಡಿಮೆಯಾಗಿ ಇಂದಿನ ಸರ್ವೇ ಪ್ರಕಾರ ಕೇವಲ 33 ಲಕ್ಷಕ್ಕೆ ಇಳಿಕೆಯಾಗಿವೆ. ಮನೆಯಲ್ಲಿ ಒಂದು ಕೈಮಗ್ಗ ಇದ್ದರೆ ಮನೆಯ ಇಡೀ ಕುಟುಂಬ ಅದರಲ್ಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿರುತ್ತದೆ ಎನ್ನುತ್ತಾರೆ ಕರ್ನಾಟಕ ರಾಜ್ಯ ನೇಕಾರ ಸೇವಾ ಸಂಘ ರಾಜ್ಯಾಧ್ಯಕ್ಷ ಶಿವಲಿಂಗ ಜಿ.ಟಿರಕಿ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಮಗ್ಗ ನೇಕಾರಿಕೆಗೆ ಉತ್ತೇಜನ ನೀಡಬೇಕು. ವಾರ್ಷಿಕ ಪ್ರೋತ್ಸಾಹಧನ ನೀಡಬೇಕು. ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ವಾರ್ಷಿಕ 24 ಸಾವಿರ ಪ್ರೋತ್ಸಾಹಧನ ನೀಡಲಾಗುತ್ತಿದೆ. ಕರ್ನಾಟಕದಲ್ಲೂ ಅದೇ ರೀತಿಯ ಉತ್ತೇಜನ ನೀಡಬೇಕು. ವಿದ್ಯುತ್ ಲೂಮ್ ಪ್ರಸ್ತುತ ಹೆಚ್ಚು ಚಾಲ್ತಿಗೆ ಬಂದಿದೆ. ಇದೀಗ ಮತ್ತಷ್ಟು ಮುಂದುವರೆದ ಲೂಮ್ ವ್ಯವಸ್ಥೆ ಮುನ್ನೆಲೆಗೆ ಬರುತ್ತಿದೆ. ಇದರಲ್ಲಿ ಒಂದು ಗಂಟೆಗೆ ಮೂರು ಸೀರೆ ನೇಯ್ಗೆಯಾಗುತ್ತದೆ. ಇಂತಹ ಯಾಂತ್ರೀಕರಣದಿಂದ ಕೈಮಗ್ಗ ನೇಕಾರರಿಗೆ ಉದ್ಯೋಗ ಇಲ್ಲದಂತೆ ಆಗುತ್ತಿದೆ. ದೇಶದ ಜಿಡಿಪಿ ಹೆಚ್ಚಾಗಲು ಕೈಮಗ್ಗ ನೇಕಾರಿಕೆ ಸೇರಿದಂತೆ ಗುಡಿ ಕೈಗಾರಿಕೆಗೆ ಉತ್ತೇಜನ ನೀಡುವುದು ಅಗತ್ಯ ಎನ್ನುತ್ತಾರೆ.

ಇದೇ ಮಾದರಿಯಲ್ಲಿ ಸಾದಾ ಸೀರೆ ನೇಯ್ದುಕೊಡಲು ಹಲವರು ಆರ್ಡರ್ ಕೂಡ ನೀಡಿದ್ದಾರೆ. ಈ ಸೀರೆಯನ್ನು ಪ್ರದರ್ಶನಕ್ಕಿಡುವುದಕ್ಕಾಗಿ ರಾಜವಂಶಸ್ಥರಿಗೆ ಕೊಡುಗೆಯಾಗಿ ನೀಡಲು ಉದ್ದೇಶಿಸಲಾಗಿದೆ. ಒಟ್ಟು 11 ಗಂಡಭೇರುಂಡ ಚಿತ್ರಗಳು ಈ ಸೀರೆಯಲ್ಲಿವೆ ಎಂದು ನಾಗರಾಜ್ ವಿವರಿಸುತ್ತಾರೆ.

ಪ್ರಯೋಗಶೀಲ ಮನೋಭಾವ: ಕೈಮಗ್ಗ ನೇಕಾರಿಕೆಯಲ್ಲಿ ಪ್ರಯೋಗಶೀಲ ಮನೋಭಾವ ಹೊಂದಿರುವ ನಾಗರಾಜ್, ಹತ್ತು ಹಲವು ವಿಭಿನ್ನ ನೇಕಾರಿಕೆ ಕೂಡ ಮಾಡಿದ್ದಾರೆ. ಕಾಪರ್ (ತಾಮ್ರ) ತಂತಿಯಲ್ಲಿ ಫ್ಯಾಷನ್ ಶೋಗಾಗಿ ಉಡುಪು ನೇಯ್ಗೆ ಮಾಡಿಕೊಟ್ಟಿದ್ದಾರೆ. ಅಲ್ಲದೆ, ಪ್ರಧಾನಿ ನರೇಂದ್ರ ಮೋದಿಯವರು ನಿಂತ ಭಂಗಿಯಲ್ಲಿರುವ ಚಿತ್ರದೊಂದಿಗೆ ವಸ್ತ್ರವೊಂದನ್ನು ವಿಶಿಷ್ಟ ರೀತಿಯಲ್ಲಿ ನೇಯ್ಗೆ ಮಾಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಭಾವಚಿತ್ರ ಒಳಗೊಂಡ ವಸ್ತ್ರ ನೇಯ್ಗೆ ಕೈಗೆತ್ತಿಕೊಳ್ಳಲು ಇದೀಗ ಸಿದ್ಧತೆ ನಡೆಸಿದ್ದಾರೆ.

ಪ್ರತಿ ತಿಂಗಳ 20ರೊಳಗೆ ಅನ್ನಭಾಗ್ಯ, ಗೃಹಲಕ್ಷ್ಮಿ ಹಣ ಜಮೆ

ಬೆಂಗಳೂರು: ಅನ್ನಭಾಗ್ಯ ಹಾಗೂ ಗೃಹಲಕ್ಷ್ಮಿ ಯೋಜನೆ ಹಣ ಫಲಾನುಭವಿಗಳಿಗೆ ತಲುಪುವಲ್ಲಿ ವಿಳಂಬವಾಗುತ್ತಿರುವುದನ್ನು ಮನಗಂಡ ರಾಜ್ಯ ಸರ್ಕಾರ ಸಕಾಲದಲ್ಲಿ ಹಣ ಜಮೆ ಮಾಡಲು ಮುಂದಾಗಿದೆ. ಈ ನಿಟ್ಟಿನಲ್ಲಿ ಆರ್ಥಿಕ ಇಲಾಖೆ ಸುತ್ತೋಲೆ ಹೊರಡಿಸಿದ್ದು, ಗೃಹಲಕ್ಷ್ಮಿ, ಅನ್ನಭಾಗ್ಯ ಹಾಗೂ ವಿವಿಧ ಭದ್ರತಾ ಪಿಂಚಣಿ ಯೋಜನೆಗಳ ಹಣದ ಬಟವಾಡೆ, ಬಿಲ್ಲು ಸಲ್ಲಿಕೆಗೆ ವೇಳಾ ಪಟ್ಟಿಯನ್ನು ನಿಗದಿ ಮಾಡಿದೆ. ಅನ್ನ ಭಾಗ್ಯ ಹಾಗೂ ಗೃಹಲಕ್ಷ್ಮಿ ಯೋಜನೆಯ ಹಣ ಪ್ರತಿ ತಿಂಗಳ 20ರೊಳಗೆ ಖಾತೆಗೆ ಜಮೆ ಆಗುವಂತೆ ದಿನಾಂಕ ನಿಗದಿ ಮಾಡಲಾಗಿದೆ. ಅದರಂತೆ ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯದ ದುಡ್ಡನ್ನು ಪ್ರತಿ ತಿಂಗಳ 20 ರೊಳಗೆ ಪಾವತಿಸಲು ವೇಳಾಪಟ್ಟಿಯನ್ನು ನಿಗದಿ ಮಾಡಿದೆ. ಎರಡೂ ಯೋಜನೆಗಳ ಫಲಾನುಭವಿಗಳಿಗೆ ಹಣ ಪಾವತಿಗೆ ಅನುವಾಗುವಂತೆ ಅದೇ ತಿಂಗಳ ದಿನಾಂಕ 10 ಹಾಗೂ 15ರೊಳಗೆ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ಸೂಚಿಸಲಾಗಿದೆ. ಇನ್ನು ಸಾಮಾಜಿಕ ಭದ್ರತಾ ಪಿಂಚಣಿಯನ್ನು ಪ್ರತಿ ತಿಂಗಳು 5ರಂದು ಪಾವತಿಸಲು ಅನುವಾಗುವಂತೆ ಪ್ರತಿ ತಿಂಗಳ ದಿನಾಂಕ 1–5ರೊಳಗೆ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಅನ್ನ ಭಾಗ್ಯ ಹಾಗೂ ಗೃಹಲಕ್ಷ್ಮಿ ಯೋಜನೆಯ ಹಣ ಪಾವತಿಯಲ್ಲಿ ವಿಳಂಬವಾಗುತ್ತಿದೆ. ತಾಂತ್ರಿಕ ಕಾರಣದಿಂದ ಹಣ ಪಾವತಿ ವ್ಯತ್ಯಯವಾಗುತ್ತಿದೆ. ಗೃಹ ಲಕ್ಷ್ಮಿ ಯೋಜನೆಯಡಿ ಈವರೆಗೆ ಸುಮಾರು 1.2 ಕೋಟಿ ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಆಗಸ್ಟ್‌ನಿಂದ ಅಕ್ಟೋಬರ್ 31ರವರೆಗೆ ಸುಮಾರು 10 ಲಕ್ಷ ಫಲಾನುಭವಿಗಳು ಹಾಗೂ ಸೆಪ್ಟೆಂಬರ್‌ನಿಂದ ಸುಮಾರು 36 ಲಕ್ಷ ಫಲಾನುಭವಿಗಳು ಮಾಸಿಕ 2,000 ರೂ. ಹಣ ಪಡೆದಿಲ್ಲ.

ಖಜಾನೆ ಆಯುಕ್ತರ ಪ್ರಸ್ತಾವನೆಯಲ್ಲಿ ಸರ್ಕಾರದ ಎಲ್ಲಾ ಇಲಾಖೆಗಳ ಫಲಾನುಭವಿ ಆಧಾರಿತ ಕಲ್ಯಾಣ ಹಾಗೂ ಸಬ್ಸಿಡಿ ಯೋಜನೆಗಳ ಪಾವತಿಗಳನ್ನು ನೇರ ವರ್ಗಾವಣೆ ಮಾಡುವ ವ್ಯವಸ್ಥೆ ಮುಖಾಂತರ ಫಲಾನುಭವಿಗಳ ಆಧಾರ್ ಸೀಡೆಡ್ ಬ್ಯಾಂಕ್ ಖಾತೆಗಳಿಗೆ ಡಿ.ಬಿ.ಟಿ ಮತ್ತು ಖಜಾನೆ–2ರ ಮೂಲಕ ಹಣವನ್ನು ಯಾವುದೇ ಅಡೆ ತಡೆಗಳಿಲ್ಲದೇ ಪಾವತಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ವೇತನ ಪಾವತಿಸುವ ಸಮಯದಲ್ಲಿ ಸರ್ಕಾರದ ವಿವಿಧ ಫಲಾನುಭವಿ ಆಧಾರಿತ ಯೋಜನೆಗಳ ಬಿಲ್ಲುಗಳ ಸಂಖ್ಯೆ ಹೆಚ್ಚಾದಲ್ಲಿ ವೇತನ ಪಾವತಿ ಮತ್ತು ಡಿ.ಬಿ.ಟಿ ಪಾವತಿಯಲ್ಲಿಯೂ ವಿಳಂಬವಾಗುವ ಸಂಭವವಿರುತ್ತದೆ. ಅಲ್ಲದೇ ಪ್ರತಿ ಕಡತದ ಪರಿಶೀಲನೆಗೆ ಸಮಯ ಬೇಕಾಗಿರುವುದರಿಂದ ಮಂಜೂರಾತಿ ಪಟ್ಟಿ ಸೃಜನೆಯಲ್ಲಿಯೂ ತಡವಾಗುವುದರಿಂದ ಪಾವತಿಯಲ್ಲಿ ತೊಂದರೆಯಾಗುವ ಸಂಭವವಿರುವುದಾಗಿ ತಿಳಿಸಿರುತ್ತಾರೆ.

ಹೀಗಾಗಿ ಫಲಾನುಭವಿಗಳಿಗೆ ತ್ವರಿತಗತಿಯಲ್ಲಿ ಪಾವತಿ ಮಾಡಲು ಮತ್ತು ಡಿ.ಡಿ.ಓ, ಡಿ.ಬಿ.ಟಿ ಸೆಲ್ ಮತ್ತು ಖಜಾನೆಗಳಿಗೆ ಯಾವುದಾದರೂ ತಾಂತ್ರಿಕ ಆಡಳಿತಾತ್ಮಕ ಸಮಸ್ಯೆ ಬಗೆಹರಿಸಲು ಮತ್ತು ಪ್ರತಿ ಹಂತದಲ್ಲೂ ಸಮನ್ವಯೀಕರಣ ಸುಲಭಗೊಳಿಸಲು ಫಲಾನುಭವಿಗಳ ಸಂಖ್ಯೆ ಹೆಚ್ಚಾಗಿರುವ, ಮಾಸಿಕವಾಗಿ ಪಾವತಿಸುವ ಗೃಹಲಕ್ಷ್ಮಿ, ಅನ್ನಭಾಗ್ಯ ಮತ್ತು ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಿಗೆ ಹಂತ ಹಂತವಾಗಿ ಪಾವತಿ ಮಾಡಲು ವೇಳಾಪಟ್ಟಿಯೊಂದಿಗೆ ನಿರ್ದಿಷ್ಟ ವೇಳೆಯೊಳಗೆ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ಸಂಬಂಧಿತ ಇಲಾಖಾ ಡಿಡಿಓಗಳಿಗೆ ಸೂಚಿಸಲು ಕೋರಿದ್ದರು.

ಆದ್ದರಿಂದ, ಸರ್ಕಾರದ ಫಲಾನುಭವಿ ಆಧಾರಿತ ಯೋಜನೆಗಳನ್ನು ತ್ವರಿತಗತಿಯಲ್ಲಿ ಫಲಾನುಭವಿಗಳಿಗೆ ತಲುಪಿಸಲು, ಪ್ರತಿ ಮಾಸಿಕದ ಕೊನೆಯಲ್ಲಿ ಖಜಾನೆಗಳಲ್ಲಿ ಕೆಲಸದ ಒತ್ತಡಗಳನ್ನು ಕಡಿಮೆಗೊಳಿಸಲು, ಖಜಾನೆಗಳಲ್ಲಿ ಬಿಲ್ಲುಗಳನ್ನು ಪರಿಶೋಧನೆ ಮಾಡಲು ಅನುಕೂಲವಾಗುವ ದೃಷ್ಟಿಯಿಂದ ಯೋಜನೆಗಳಿಗೆ ಸಂಬಂಧಪಟ್ಟ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಗಳು ವೇಳಾಪಟ್ಟಿಯನ್ವಯ ನಿಗಧಿತ ಅವಧಿಯೊಳಗೆ ಪ್ರಕ್ರಿಯೆ ಪೂರ್ಣಗೊಳಿಸಿ ಖಜಾನೆಗಳಿಗೆ ಬಿಲ್ಲು ಸಲ್ಲಿಸಿ ಪಾವತಿ ಪ್ರಕ್ರಿಯೆ ಪೂರ್ಣಗೊಳಿಸಲು ಸೂಚಿಸಲಾಗಿದೆ.



ಮೈಸೂರಿನ ಎಸ್.ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗದ ವತಿಯಿಂದ ಹಣ್ಣು–ಹಂಪಲು ವಿತರಣಾ ಕಾರ್ಯಕ್ರಮ ವಿದ್ಯಾರಣ್ಯಪುರಂನಲ್ಲಿರುವ ಸಾರ್ವಜನಿಕ ಹಾಸ್ಟೆಲ್‌ನಲ್ಲಿ ನಡೆಯಿತು. ಈ ವೇಳೆ ನಗರಪಾಲಿಕೆ ಸದಸ್ಯರಾದ ಎಸ್.ಬಿ.ಎಂ. ಮಂಜು, ಎಸ್ ಪ್ರಕಾಶ್ ಪ್ರಿಯಾದರ್ಶನ್, ಮಂಜು ಸ್ನೇಹ ಬಳಗದ ಅಧ್ಯಕ್ಷ ಮಹದೇವ್, ಪುರುಷೋತ್ತಮ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ಮಹೇಶ್, ಎಸ್.ಪಿ.ಅಕ್ಷಯ್ ಪ್ರಿಯಾದರ್ಶನ್, ಹರ್ಷಿತ್ ಇನ್ನಿತರರು ಪಾಲ್ಗೊಂಡಿದ್ದರು.

ಮಡಿಕೇರಿ ದಸರಾ ಪ್ರಾಧಿಕಾರ ರಚನೆಗೆ ಒತ್ತಾಯ



ಮಡಿಕೇರಿ, ನ.6– ವಿಶ್ವ ವಿಖ್ಯಾತ ಮಡಿಕೇರಿ ದಸರಾ ಮಹೋತ್ಸವವನ್ನು ಮತ್ತಷ್ಟು ಅರ್ಥಪೂರ್ಣ ಮತ್ತು ವಿಜೃಂಭಣೆಯಿಂದ ನಡೆಸಲು ಬಜೆಟ್‌ನಲ್ಲಿ ಸರಕಾರ ಅನುದಾನ ಮೀಸಲಿಡಬೇಕು. ಇದಕ್ಕಾಗಿ ದಸರಾ ಪ್ರಾಧಿಕಾರ ರಚಿಸಬೇಕು ಎಂದು ಮಡಿಕೇರಿ ದಸರಾ ಸಮಿತಿಯ ಕಾರ್ಯಾಧ್ಯಕ್ಷ ಕೆ.ಎಂ. ಗಣೇಶ್ ಒತ್ತಾಯಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ದಸರಾ ಮಹೋತ್ಸವ ಜಿಲ್ಲೆಯ ಶಾಸಕದ್ವಯರ ಸಂಪೂರ್ಣ ಸಹಕಾರದಿಂದ ಅದ್ದೂರಿಯಾಗಿ ನಡೆದು ಜನ ಮೆಚ್ಚುಗೆಗೆ ಪಾತ್ರವಾಗಿದೆ. ಮುಂದಿನ ವರ್ಷಗಳಲ್ಲಿ ದಸರಾ ಆಚರಣೆಗೆ ಬಜೆಟ್‌ನಲ್ಲೇ ಹಣವನ್ನು ಮೀಸಲಿಟ್ಟರೆ ದಸರಾ ಸಮಿತಿಗಳ ಕಾರ್ಯ ಸುಗಮವಾಗಲಿದೆ ಎಂದು ಅಭಿಪ್ರಾಯಪಟ್ಟರು.


ವರ್ಷದಿಂದ ವರ್ಷಕ್ಕೆ ದಸರಾ ಆಚರಣೆಯ ಖರ್ಚು ಹೆಚ್ಚಾಗುತ್ತಿದೆ, ಜನರಿಂದ ವಂತಿಗೆ ಸಂಗ್ರಹಿಸಲು ಸಾಧ್ಯವಾಗುತ್ತಿಲ್ಲ. ಪ್ರತಿವರ್ಷ ಅನುದಾನಕ್ಕಾಗಿ ಸರಕಾರಕ್ಕೆ ಮನವಿ ಸಲ್ಲಿಸಬೇಕಾಗಿದೆ. ಬಿಡುಗಡೆಯಾಗುತ್ತಿರುವ ಅನುದಾನ ದಸರಾ ಸಮಿತಿ, ದಶಮಂಟಪ ಸಮಿತಿಗಳು ಹಾಗೂ ಕರಗೋತ್ಸವಗಳಿಗೆ ಸಾಕಾಗುತ್ತಿಲ್ಲ. ಲಕ್ಷಾಂತರ ಹಣ ಖರ್ಚು ಮಾಡಿ 10 ದಿನಗಳ ಕಾಲ ಹಬ್ಬವನ್ನು ಆಚರಿಸಲಾಗುತ್ತಿದ್ದು, ರಾಜ್ಯ ಮಾತ್ರವಲ್ಲದೆ ಹೊರ ರಾಜ್ಯದಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಜಿಲ್ಲೆಗೆ ಬರುತ್ತಿದ್ದಾರೆ. ಮೈಸೂರು ದಸರಾ ಹಗಲಿನಲ್ಲಿ ನಡೆದು ವಿಶ್ವ ವಿಖ್ಯಾತವಾಗಿದೆ, ಮಡಿಕೇರಿ ದಸರಾ ದಶಮಂಟಪಗಳ ರಾತ್ರಿಯ ಶೋಭಾಯಾತ್ರೆಯಿಂದ ಪ್ರಸಿದ್ಧಿಯನ್ನು ಪಡೆದಿದೆ.

ಮಡಿಕೇರಿ ದಸರಾದಂತೆ ಗೋಣಿಕೊಪ್ಪ ದಸರಾ ಕೂಡ ವಿಜೃಂಭಣೆಯಿಂದ ನಡೆಯುತ್ತಿದೆ. ಆದ್ದರಿಂದ ಈ ಎರಡೂ ದಸರಾ ಮಹೋತ್ಸವಗಳಿಗೆ ಬಜೆಟ್‌ನಲ್ಲಿ ಹಣ ಮೀಸಲಿಡುವ ಅಗತ್ಯವಿದ್ದು, ಪ್ರಾಧಿಕಾರ ರಚನೆ ಅನಿವಾರ್ಯವಾಗುತ್ತದೆ. ಈ ಪ್ರಕ್ರಿಯೆಗೆ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳು ಚಾಲನೆ ನೀಡಬೇಕು. ಜಿಲ್ಲೆಯ ಇಬ್ಬರು ಶಾಸಕರು ಪ್ರಾಧಿಕಾರ ರಚನೆಯ ಕುರಿತು ಸರಕಾರದೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಸಂಪ್ರದಾಯ ಮುರಿಯಬಾರದು: ಮಡಿಕೇರಿ ದಸರಾಕ್ಕೆ ತನ್ನದೇ ಆದ ಆಚಾರ, ವಿಚಾರ, ಸಂಪ್ರದಾಯವಿದೆ. ವರ್ಷ ಕಳೆದಂತೆ ಇದರ ಆಚರಣೆ ಮತ್ತಷ್ಟು ಅರ್ಥಗರ್ಭಿತವಾಗಬೇಕೆ ಹೊರತು ಸಂಪ್ರದಾಯವನ್ನು ಮುರಿಯಬಾರದು. ದಶಮಂಟಪಗಳು ನಗರದ ಪ್ರಮುಖ ರಸ್ತೆಗಳಲ್ಲಿ ಶೋಭಾಯಾತ್ರೆ ನಡೆಸುವುದು ಕಡ್ಡಾಯವಾಗಿತ್ತು. ಸೂರ್ಯೋದಯಕ್ಕೂ ಮೊದಲು ಮಹದೇವಪೇಟೆ ರಸ್ತೆ ಮೂಲಕ ಸಾಗಿ ಬನ್ನಿ ಮಂಟಪದಲ್ಲಿ ಬನ್ನಿ ಕಡಿದು ಗಣಪತಿ ಬೀದಿಯಲ್ಲಿ ಮರಳುತ್ತಿದ್ದವು. ಮಂಟಪದಲ್ಲಿರುವ ಕಳಶಕ್ಕೆ ನಗರದ ಜನ ಪೂಜೆ ಸಲ್ಲಿಸುತ್ತಿದ್ದರು. ಆದರೆ ಇತ್ತೀಚಿನ ವರ್ಷಗಳಲ್ಲಿ ಮಂಟಪಗಳು ಶೋಭಾಯಾತ್ರೆ ನಡೆಸದೆ ನಿಂತಲ್ಲೇ ನಿಂತಿರುತ್ತವೆ. ದಸರಾ ವೈಭವವನ್ನು ಕಣ್ತುಂಬಿಕೊಳ್ಳಲು ಎಲ್ಲಾ ಜನರಿಗೆ ಸಾಧ್ಯವಾಗುತ್ತಿಲ್ಲ ಎಂದು ಗಣೇಶ್ ಬೇಸರ ವ್ಯಕ್ತಪಡಿಸಿದರು.

ಮತ್ತೊಬ್ಬ ಮಾಜಿ ಕಾರ್ಯಾಧ್ಯಕ್ಷ ಎಂ.ಪಿ. ಕೃಷ್ಣರಾಜು ಮಾತನಾಡಿ, ಮಡಿಕೇರಿ ದಸರಾದ ಗತವೈಭವದ ಉಳಿವಿಗೆ ಸರಕಾರದ ಸಹಕಾರ ಅಗತ್ಯ ಎಂದರು. ಮಡಿಕೇರಿ ದಸರಾ ಸಾಗಿ ಬಂದ ಹಾದಿಯನ್ನು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ದಸರಾ ಸಮಿತಿಗಳಲ್ಲಿ ಸಕ್ರಿಯರಾಗಿರುವ ಡಿ.ಕೆ.ಮೋಹನ್, ಆರ್.ಎಸ್.ಬಾಬು ನಾಯ್ಡು, ಬೈಶ್ರೀ ಪ್ರಕಾಶ್ ಹಾಗೂ ಎನ್.ಸಿ.ಸುನೀಲ್ ಉಪಸ್ಥಿತರಿದ್ದರು.

ತಲಕಾವೇರಿ ಸುತ್ತಮುತ್ತ ಕಾಡಾನೆ ಹಾವಳಿ



ಮಡಿಕೇರಿ, ನ.6– ಜೀವನದಿ ಕಾವೇರಿಯ ಉಗಮ ಸ್ಥಾನ ತಲಕಾವೇರಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಹಾಡಹಗಲೇ ಕಾಡಾನೆ ಸಂಚರಿಸುವ ಮೂಲಕ ಆತಂಕ ಸೃಷ್ಟಿಸಿದೆ. ಸೋಮವಾರ ಬೆಳಗ್ಗೆ ಸುಮಾರು 6 ಗಂಟೆ ಸಮಯದಲ್ಲಿ ಕೈಲಾಶ ಆಶ್ರಮ ಬಳಿಯ ತಲಕಾವೇರಿ ಪ್ರವೇಶ ದ್ವಾರದ ಭಾಗದಲ್ಲಿ ಕಾಡಾನೆ ತಿರುಗಾಡಿದೆ. ದ್ವಾರದ ಗೇಟ್ ಬಂದ್ ಮಾಡಿದ್ದರಿಂದ ಆನೆಗೆ ತಲಕಾವೇರಿ ಒಳಗೆ ಪ್ರವೇಶಿಸಲು ಸಾಧ್ಯವಾಗಿಲ್ಲ.

ಇದು ತುಲಾಮಾಸ ಕಾವೇರಿ ಜಾತ್ರೆಯ ಅವಧಿಯಾಗಿದ್ದು, ದಿನಂಪ್ರತಿ ಸಾವಿರಾರು ಭಕ್ತರು ತಲಕಾವೇರಿ ಕ್ಷೇತ್ರಕ್ಕೆ ಆಗಮಿಸುತ್ತಿದ್ದಾರೆ. ಸುತ್ತಲೂ ಬೆಟ್ಟ, ಕಾಡುಗಳಿಂದ ಆವೃತ್ತವಾಗಿರುವ ಈ ಪ್ರದೇಶದಲ್ಲಿ ಏಕಾಏಕಿ ಕಾಡಾನೆಗಳು ನುಗ್ಗಿ ಬಂದರೆ ಅಪಾಯ ತಪ್ಪಿದ್ದಲ್ಲ ಎನ್ನುತ್ತಾರೆ ಸ್ಥಳೀಯರು. ಈ ವ್ಯಾಪ್ತಿಯಲ್ಲಿ ಕೃಷಿ ಜಮೀನು ಕೂಡ ಇದ್ದು, ಕಾಡಾನೆಗಳು ಏಲಕ್ಕಿ, ಬಾಳೆ ಫಸಲನ್ನು ತುಳಿದು ನಾಶಪಡಿಸಿದ ಬಗ್ಗೆಯೂ ವರದಿಯಾಗಿದೆ. ಅರಣ್ಯ ಇಲಾಖೆ ಸಿಬ್ಬಂದಿ ಕೂಡಲೇ ದೂರದ ಕಾಡಿಗೆ ಈ ಆನೆಗಳನ್ನು ಓಡಿಸುವಂತೆ ಈ ಭಾಗದ ನಿವಾಸಿಗಳು ಒತ್ತಾಯಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿದ ಅರಣ್ಯ ಇಲಾಖೆ ಸಿಬ್ಬಂದಿಗಳು ಕಾಡಾನೆ ಪಕ್ಕದ ಕಾಡಿನಲ್ಲಿ ಇರುವುದನ್ನು ಪತ್ತೆ ಹಚ್ಚಿದರು. ಬಳಿಕ ಸ್ಥಳೀಯರ ಸಹಕಾರದಿಂದ ಕಾಡಾನೆಯನ್ನು ಮರಳಿ ಕಾಡಿಗೆ ಅಟ್ಟುವಲ್ಲಿ ಸಫಲರಾದರು.

ವಕೀಲರ ಸಂಘದಿಂದ ಶಾಸಕ ಎ.ಎಸ್. ಪೊನ್ನಣ್ಣಗೆ ಸನ್ಮಾನ



ವಿರಾಜಪೇಟೆ, ನ.6– ಸಮಾಜದಲ್ಲಿ ವಕೀಲರುಗಳಿಗೆ ಹೆಚ್ಚು ಜವಾಬ್ದಾರಿ ಇರುವುದರಿಂದ ಕರ್ತವ್ಯದ ಸಂದರ್ಭ ಹೊಂದಾಣಿಕೆ, ವಿಶ್ವಾಸದಿಂದ ಕೆಲಸ ಮಾಡಬೇಕಾಗಿದೆ ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ವಿರಾಜಪೇಟೆ ನ್ಯಾಯಾಲಯದ ಸಭಾಂಗಣದಲ್ಲಿ ವಕೀಲರ ಸಂಘದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ವಿರಾಜಪೇಟೆಗೆ ಎಲ್ಲಾ ಸೌಲಭ್ಯ ಉಳ್ಳ ಉತ್ತಮ ಸುಸಜ್ಜಿತವಾದ ನ್ಯಾಯಾಲಯದ ಕಟ್ಟಡ ನಿರ್ಮಾಣಕ್ಕೆ 2 ಎಕರೆ ಜಾಗ ಅವಶ್ಯವಿದ್ದು, ಇದು ನಗರ ವ್ಯಾಪ್ತಿಯಲ್ಲಿದೆ. ಹಿರಿಯ, ಕಿರಿಯ ವಕೀಲರು, ಕಕ್ಷಿದಾರರು, ಸಾರ್ವಜನಿಕರು ನಡೆದು ಹೋಗುವಷ್ಟು ಹತ್ತಿರ ಇದ್ದರೆ ಉತ್ತಮ. ಈಗಾಗಲೇ ವಿರಾಜಪೇಟೆ ಕಾವೇರಿ ಕಾಲೇಜು ಬಳಿ ಜಾಗ ನೋಡಿ ಅದಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ಆದರೆ ಬೇರೆ ಜಾಗ ನೋಡುವಿರಾ ಅಥವಾ ಅದೇ ಜಾಗದಲ್ಲಿ ಕಟ್ಟಡ ನಿರ್ಮಾಣಕ್ಕೆ ವಕೀಲರ ಒಮ್ಮತದಿಂದ ಒಪ್ಪಿಗೆ ನೀಡಿದರೆ ನಾನು ಸರಕಾರದ ಗಮನ ಸೆಳೆಯುವ ಮೂಲಕ ಎಲ್ಲಾ ಸೌಲಭ್ಯವುಳ್ಳ ನ್ಯಾಯಾಲಯ ಸಂಕೀರ್ಣದ ನೂತನ ಕಟ್ಟಡ ನಿರ್ಮಾಣಕ್ಕೆ ಮುಂದಾಗುವುದಾಗಿ ಹೇಳಿದರು.

ವಕೀಲರ ಸಂಘದ ಅಧ್ಯಕ್ಷ ಕೊಕ್ಕಂಡ ಅಪ್ಪಣ್ಣ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ವಿರಾಜಪೇಟೆಗೆ ನೂತನ ನ್ಯಾಯಾಲಯದ ಅವಶ್ಯವಿದ್ದು, ಕಟ್ಟಡ ನಿರ್ಮಾಣಕ್ಕೆ ಅನುದಾನ ಬಂದಿರುವುದಾಗಿ ತಿಳಿಸಿದ ಅವರು, ಶೀಘ್ರಗತಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಯವನ್ನು ಮಾಡಿಕೊಡುವಂತೆ ಶಾಸಕ ಪೊನ್ನಣ್ಣ ಅವರಿಗೆ ಮನವಿ ಮಾಡಿದರು. ವೇದಿಕೆಯಲ್ಲಿ ವಕೀಲರ ಸಂಘದ ಉಪಾಧ್ಯಕ್ಷ ಪ್ರೀತಮ್ ಕರುಂಬಯ್ಯ, ಕಾರ್ಯದರ್ಶಿ ವಿ.ಜಿ. ರಾಕೇಶ್, ಜಂಟಿ ಕಾರ್ಯದರ್ಶಿ ಎ.ತಾರ ಉಪಸ್ಥಿತರಿದ್ದರು. ಹಿರಿಯ ವಕೀಲರುಗಳಾದ ಎಂ.ಕೆ. ಪೂವಯ್ಯ, ಎಸ್.ಆರ್. ಜಗದೀಶ್, ಎನ್.ಜಿ. ಕಾಮತ್ ಅವರುಗಳು 50 ವರ್ಷಕ್ಕಿಂತ ಹೆಚ್ಚು ಕಾಲ ವಕೀಲ ವೃತ್ತಿಯಲ್ಲಿ ಸೇವೆ ಸಲ್ಲಿಸಿರುವ ಅನುಭವದ ಸಲಹೆ ನೀಡಿದರು.

ರಾಜ್ಯಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಆಯ್ಕೆ



ಪೊನ್ನಂಪೇಟೆ, ನ.6– ತಿತಿಮತಿಯ ಸರಕಾರಿ ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿಗಳು ರಾಜ್ಯ ಮಟ್ಟದ ಅಥ್ಲೆಟಿಕ್ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ನಡೆದ ಜಿಲ್ಲಾಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ತಿತಿಮತಿ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿ ವೈ. ಎಸ್. ಸೌಮ್ಯ ಟ್ರಿಪಲ್ ಜಂಪಿನಲ್ಲಿ ಪ್ರಥಮ ಸ್ಥಾನ ಮತ್ತು ಪಿ.ಜಿ. ಸಂಗೀತ ಹ್ಯಾಮರ್ ಥ್ರೋನಲ್ಲಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಈ ಇಬ್ಬರು ವಿದ್ಯಾರ್ಥಿಗಳು ಮುಂದೆ ಪುತ್ತೂರಿನಲ್ಲಿ ನಡೆಯಲಿರುವ ರಾಜ್ಯಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಕೊಡಗು ಜಿಲ್ಲಾ ತಂಡವನ್ನು ಪ್ರತಿನಿಧಿಸಲಿದ್ದಾರೆ ಎಂದು ಶಾಲೆಯ ದೈಹಿಕ ಶಿಕ್ಷಕರಾದ ಸಿಎಂ ರಾಘವೇಂದ್ರ ತಿಳಿಸಿದ್ದಾರೆ.

ನಿವೃತ್ತ ಪೊಲೀಸ್ ಅಧಿಕಾರಿ ಪತ್ನಿ ಮೇಲೆ ಹಲ್ಲೆ ನಡೆಸಿ ಸರ ಕದಿಯಲು ಯತ್ನಿಸಿದವನ ಬಂಧನ



ಮಡಿಕೇರಿ, ನ.6– ನಿವೃತ್ತ ಪೊಲೀಸ್ ಅಧಿಕಾರಿಯ ಮನೆಗೆ ನುಗ್ಗಿ ಅವರ ಪತ್ನಿಯ ಮೇಲೆ ಹಲ್ಲೆ ನಡೆಸಿ ಮಾಂಗಲ್ಯ ಸರ ಕದ್ದೊಯ್ಯಲು ಯತ್ನಿಸಿದ ಆರೋಪಿಯನ್ನು ಮಡಿಕೇರಿ ಪೊಲೀಸರು ಘಟನೆ ನಡೆದ 12 ಗಂಟೆಯ ಒಳಗೆ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ರಾಜಸ್ಥಾನ ರಾಜ್ಯ, ಅಜ್ಮೀರ್ ಜಿಲ್ಲೆಯ ಅಸ್ಸಲಿ ಮೊಡಲ್ಲಾ ಕಿಶಾನ್‌ಗಡ್ ಗ್ರಾಮ ನಿವಾಸಿ ವಿಕಾಶ್ ಚೋರ್ಡಿಯಾ(33) ಎಂಬಾತನೇ ಬಂಧಿತ ಆರೋಪಿಯಾಗಿದ್ದು, ಈತ ನಗರದ ಹೊರವಲಯದ ಖಾಸಗಿ ರೆಸಾರ್ಟ್ ಒಂದರಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡಿಕೊಂಡಿದ್ದಾನೆ. ಆರೋಪಿ ಬಳಿಯಿದ್ದ 27 ಗ್ರಾಂ ತೂಕದ ಚಿನ್ನಾಭರಣವನ್ನು ವಶಕ್ಕೆ ಪಡೆಯಲಾಗಿದೆ. ನಗರದ ಐಡಿಬಿಐ ಬ್ಯಾಂಕ್ ಎದುರು ವಾಸವಾಗಿದ್ದ ನಿವೃತ್ತ ಪೊಲೀಸ್ ಅಧಿಕಾರಿ ಎಂ.ಸಿ.ಪ್ರಭಾಕರ್ ಎಂಬವರ ಮನೆಗೆ ಭಾನುವಾರ ಸಂಜೆ 6.40ರ ವೇಳೆಗೆ ದಾಳಿ ಮಾಡಿದ್ದ ಕಳ್ಳ ಅವರ ಪತ್ನಿ ಸಾಕಮ್ಮ ಅವರ ತಲೆಯ ಭಾಗಕ್ಕೆ ಕಬ್ಬಿಣದ ಸಲಾಕೆಯಿಂದ ಹಲ್ಲೆ ನಡೆಸಿ, ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರವನ್ನು ಕಸಿಯಲು ಯತ್ನಿಸಿದ್ದ. ಆದರೆ ಸಾಕಮ್ಮ ಜೋರಾಗಿ ಕಿರುಚಿಕೊಂಡ ಕಾರಣ ಕಳ್ಳ ಸ್ಥಳದಿಂದ ಪರಾರಿಯಾಗಿದ್ದ. ಘಟನಾ ಸ್ಥಳಕ್ಕೆ ನಗರ ಪೊಲೀಸ್ ಅಧಿಕಾರಿ ಲೋಕೇಶ್, ಸಿಬ್ಬಂದಿಗಳು, ಶ್ವಾನ ದಳ, ಬೆರಳಚ್ಚು ಪತ್ತೆ ದಳ ಹಾಗೂ ಜಿಲ್ಲಾ ಅಪರಾಧ ಪತ್ತೆ ದಳದ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದ್ದರು. ಸುತ್ತಮುತ್ತಲಿನ ಕಟ್ಟಡಗಳಲ್ಲಿದ್ದ ಸಿ.ಸಿ. ಕ್ಯಾಮರಾಗಳನ್ನು ಪೊಲೀಸರು ಪರಿಶೀಲಿಸಿ ಸಿ.ಸಿ. ಕ್ಯಾಮರಾದಲ್ಲಿ ಸೆರೆಯಾಗಿದ್ದ ಆರೋಪಿಯ ಗುರುತನ್ನು ಸಾಮಾಜಿಕ ಜಾಲತಾಣಗಳ ಮೂಲಕ ಪ್ರಚಾರಪಡಿಸಲಾಗಿತ್ತು. ಈ ಕಾರಣದಿಂದ ಆರೋಪಿಯ ಬಗ್ಗೆ ಖಚಿತ ಮಾಹಿತಿ ಪಡೆದು ಬಂಧಿಸಲಾಗಿದೆ.

ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಸ್. ಸುಂದರ್‌ರಾಜ್ ಮಾರ್ಗದರ್ಶನದಲ್ಲಿ ನಗರ ಠಾಣಾಧಿಕಾರಿ ಲೋಕೇಶ್, ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ಉಮೇಶ್ ಉಪ್ಪಳಿಕೆ, ಮಡಿಕೇರಿ ನಗರ ವೃತ್ತನಿರೀಕ್ಷಕ ಅನೂಪ್ ಮಾದಪ್ಪ, ನಗರ ಪೊಲೀಸ್ ಠಾಣೆ ಸಿಬ್ಬಂದಿಗಳು ಮತ್ತು ಡಿಸಿಆರ್‌ಬಿ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಇಂದು ಪೌರಕಾರ್ಮಿಕರ ದಿನಾಚರಣೆ

ಮಡಿಕೇರಿ, ನ.6– ನಗರಸಭೆ ವತಿಯಿಂದ ಪೌರಕಾರ್ಮಿಕರ ದಿನಾಚರಣೆಯು ನ.7 ರಂದು ಬೆಳಗ್ಗೆ 11 ಗಂಟೆಗೆ ನಗರಸಭೆಯ ಕಾವೇರಿ ಕಲಾಕ್ಷೇತ್ರದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ವಿಜಯ್ ಅವರು ತಿಳಿಸಿದ್ದಾರೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಇಂದಿನಿಂದ ಸಿಎನ್‌ಸಿ 5ನೇ ಪಾದಯಾತ್ರೆ

ಮಡಿಕೇರಿ,ನ.6– ಕೊಡವ ಲ್ಯಾಂಡ್ ಭೌಗೋಳಿಕ–ರಾಜಕೀಯ ಸ್ವಾಯತ್ತತೆ ಸೇರಿದಂತೆ ಸಂವಿಧಾನದತ್ತವಾದ 9 ಬೇಡಿಕೆಗಳ ಕುರಿತು ಸರ್ಕಾರದ ಗಮನ ಸೆಳೆಯಲು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ನಡೆಸುತ್ತಿರುವ ಪಾದಯಾತ್ರೆಯ 5ನೇ ಹಂತ ನ.7ರಿಂದ ಆರಂಭಗೊಳ್ಳಲಿದೆ.

ಜಿಲ್ಲೆಯ ವಿವಿಧೆಡೆ ಪಾದಯಾತ್ರೆ ನಡೆಸಿ ಮಂದ್‌ಗಳಲ್ಲಿ ಕೊಡವ ಜನಜಾಗೃತಿ ಸಭೆಗಳನ್ನು ನಡೆಸಲಾಗುವುದು. ನ.10ರಂದು ಬೆಳಗ್ಗೆ ಪಾಡಿನಾಡ್–ಪಾಡಿ ಶ್ರೀ ಇಗ್ಗುತ್ತಪ್ಪ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮಧ್ಯಾಹ್ನ ಕುಂಜಿಲ ಕಕ್ಕಬ್ಬೆ 'ಕೆಂಜರಾಣೆ ಪಾಡಿನಾಡ್ ಮಂದ್'ನಲ್ಲಿ ಜಾಗೃತಿ ಸಭೆಯ ಮೂಲಕ ಯಾತ್ರೆಯನ್ನು ಮುಕ್ತಾಯಗೊಳಿಸಲಾಗುವುದು ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆ ಬಳಿಕ ಸಿಎಂ ಬದಲಾವಣೆ

ಚಾಮರಾಜನಗರ, ನ.6– ಲೋಕಸಭಾ ಚುನಾವಣೆ ಬಳಿಕ ರಾಜ್ಯದ ಮುಖ್ಯಮಂತ್ರಿ ಬದಲಾವಣೆಯಾಗಲಿದ್ದಾರೆ. ಈ ಬಗ್ಗೆ ಕಾಂಗ್ರೆಸ್ ಶಾಸಕರೇ ಹೇಳುತ್ತಿದ್ದಾರೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು. ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳು ಮೂಡುತ್ತಿವೆ. ಡಿ.ಕೆ.ಶಿವಕುಮಾರ್ ಅಥವಾ ಡಾ. ಜಿ.ಪರಮೇಶ್ವರ್ ಮುಂದೆ ಮುಖ್ಯಮಂತ್ರಿಯಾಗುತ್ತಾರೆ ಎಂದು ಕಾಂಗ್ರೆಸ್‌ನ ಕೆಲವು ಶಾಸಕರು, ಮುಖಂಡರು ಹೇಳಿಕೆ ನೀಡುತ್ತಿದ್ದಾರೆ ಎಂದರು.

ಪೇ ಡಿಸಿಎಂ: ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್‌ನವರು ಪೇ ಸಿಎಂ ಎಂದು ನಮ್ಮ ಸರ್ಕಾರದ ಮೇಲೆ ಇಲ್ಲಸಲ್ಲದ ಆರೋಪ ಮಾಡಿದ್ದರು. ಈಗ ಅವರದೇ ಸರ್ಕಾರ ಅಧಿಕಾರಕ್ಕೆ ಬಂದು 4 ತಿಂಗಳಾಗಿದೆ. ಏಕೆ ಈ ಬಗ್ಗೆ ತನಿಖೆ ನಡೆಸಿಲ್ಲ ಎಂದು ಪ್ರಶ್ನಿಸಿದ ಅವರು, ಇಂದಿನ ಸರ್ಕಾರದಲ್ಲಿ ಪೇ ಡಿಸಿಎಂ, ಪೇ ಸಿಎಂ ಎಂಬ 2 ಭಾಗವಾಗಿದ್ದು, ಬಿಬಿಎಂಪಿಯಲ್ಲಿ ಹಣ ಬಿಡುಗಡೆಯಾದರೆ ಎರಡು ಕಡೆಗೂ ನೀಡುವಂತಾಗಿದೆ ಎಂದು ಆರೋಪಿಸಿದರು. ಸರ್ಕಾರದ ಎಲ್ಲಾ ಗ್ಯಾರಂಟಿಗಳು ಲೋಕಸಭಾ ಚುನಾವಣೆ ನಂತರ ಸ್ಥಗಿತಗೊಳ್ಳಲಿದೆ. ಅಲ್ಲದೇ ಕರ್ನಾಟಕ ಸರ್ಕಾರ ದಿವಾಳಿಯಾಗಲಿದೆ. ಸರ್ಕಾರ ಇದ್ದು ಸತ್ತಂತೆ ಇದೆ. ಸಿದ್ದರಾಮಯ್ಯ ಅವರು ಗೌರವಯುತವಾಗಿ ರಾಜೀನಾಮೆ ನೀಡಿ ಮನೆಗೆ ಹೋಗಬೇಕು ಎಂದರು.

ಬಂಡೆ ಅಲ್ಲ, ಜಲ್ಲಿಕಲ್ಲು: ರಾಮನಗರದ ಬಂಡೆ ಎಂದೇ ಖ್ಯಾತಿ ಹೊಂದಿರುವ ಡಿ.ಕೆ.ಶಿವಕುಮಾರ್ ಅವರನ್ನು ಪ್ರಸ್ತುತ ಎಲ್ಲರೂ ಹೊಡೆದು ರಸ್ತೆಗೆ ಹಾಕುವ ಜಲ್ಲಿಕಲ್ಲು ಮಾಡಿದ್ದಾರೆ. ಅವರ ಮಾತಿಗೆ ಕಾಂಗ್ರೆಸ್‌ನ ಯಾರೂ ಕ್ಯಾರೇ ಅನ್ನುತ್ತಿಲ್ಲ ಎಂದು ವ್ಯಂಗ್ಯವಾಡಿದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ

335 ಮಂದಿ ತಪಾಸಣೆ, 170 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆ



ಚಾಮರಾಜನಗರ, ನ.6– ರೋಟರಿ ಸಂಸ್ಥೆಯಿಂದ ಪ್ರತಿ ತಿಂಗಳ ಮೊದಲ ಭಾನುವಾರ ನಡೆಯುವ ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ 335 ಮಂದಿ ಕಣ್ಣಿನ ತಪಾಸಣೆಗೆ ಒಳಪಟ್ಟರೆ, ಕಣ್ಣಿನ ಪೊರೆಯುಳ್ಳ 170 ಮಂದಿಯನ್ನು ಶಸ್ತ್ರಚಿಕಿತ್ಸೆಗೆ ತಮಿಳುನಾಡಿನ ಕೊಯಮತ್ತೂರಿನ ಅರವಿಂದ್ ಕಣ್ಣಿನ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ರೋಟರಿ ಭವನದಲ್ಲಿ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ಅರವಿಂದ ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಶಿಬಿರ ನಡೆಯಿತು.

ರೋಟರಿ ಅಧ್ಯಕ್ಷ ಸಿ.ಎನ್.ಚಂದ್ರಪ್ರಭ ಜೈನ್ ಮಾತನಾಡಿ, ಕಣ್ಣಿನ ದೃಷ್ಟಿ ಎಲ್ಲರಿಗೂ ಮಹತ್ವದ್ದಾಗಿದ್ದು, ಅದರಲ್ಲೂ ವಿಶೇಷವಾಗಿ ಮಹಿಳೆಯರು, ವಯೋವೃದ್ಧರೂ ದೃಷ್ಟಿ ಕಳೆದುಕೊಳ್ಳುತ್ತಿದ್ದಾರೆ. 45 ವರ್ಷ ದಾಟುತ್ತಿದ್ದಂತೆ ಕಣ್ಣಿನ ಸಮಸ್ಯೆ ಉಲ್ಬಣಿಸುತ್ತದೆ. ಇದರ ಬಗ್ಗೆ ಎಚ್ಚರಿಕೆ ವಹಿಸಬೇಕು. ಆಗಾಗ ಕಣ್ಣಿನ ತಪಾಸಣೆ ಮಾಡಿಸಿಕೊಂಡು ವೈದ್ಯರ ಸಲಹೆ ಪಡೆಯಬೇಕು ಎಂದು ತಿಳಿಸಿದರು.

ಶಿಬಿರದಲ್ಲಿ ರೋಟರಿ ಕಾರ್ಯದರ್ಶಿ ಅಬ್ದುಲ್ ಅಜೀಜ್, ರೋಟರಿಯನ್‌ಗಳಾದ ಆರ್.ಪ್ರಕಾಶ್, ಎಸ್.ಸುರೇಶ್, ವಿ.ಪ್ರಭಾಕರ್, ಆರ್.ಎಂ.ಸ್ವಾಮಿ, ಜಿ.ಆರ್. ಅಶ್ವಥ್ ನಾರಾಯಣ್, ಸಿ.ಎ.ನಾರಾಯಣ್, ಶ್ರೀನಿವಾಸನ್, ನಾಗರಾಜು, ಶ್ರೀನಿವಾಸ್ ಶೆಟ್ಟಿ, ಎಸ್‌ಆರ್‌ಎಸ್ ಶ್ರೀನಿವಾಸ್, ಎಂ. ಕಮಲ್‌ರಾಜ್, ಬಿ.ಕೆ. ಮೋಹನ್ ಹಾಗೂ ಅರವಿಂದ ಕಣ್ಣಿನ ಆಸ್ಪತ್ರೆ ಪಿಆರ್‌ಓ ಬಿ. ವಿಜಯಕಾಂತ್, ರೋಟರಿ ಮಾಜಿ ಅಧ್ಯಕ್ಷ ಕೆಎಂ.ಮಹದೇವಸ್ವಾಮಿ, ಕಾರ್ಯದರ್ಶಿ ಚಂದ್ರು, ಪ್ರಭಾಕರ್, ಅಶೋಕ್, ಉಲ್ಲಾಸ್, ಪ್ರಕಾಶ್, ಶ್ರೀನಿವಾಸ್, ಸಮಾಜ ಸೇವಕ ಡಾ.ಪರಮೇಶ್ವರಪ್ಪ, ಭವಾನಿ ಶಂಕರ್‌ರಾವ್ ಇತರರಿದ್ದರು.

ಯತ್ನಾಳ್ ತಂಡದಿಂದ ಚಾ.ನಗರದಲ್ಲಿ ಬರ ಪರಿಶೀಲನೆ

ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ, ರೈತರಿಂದ ಮಾಹಿತಿ ಸಂಗ್ರಹ



ಚಾಮರಾಜನಗರ, ನ.6– ಜಿಲ್ಲೆಯ ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೇತೃತ್ವದ ಬಿಜೆಪಿ ಬರ ಅಧ್ಯಯನ ತಂಡ ಜಿಲ್ಲೆಯ ಬರ ಪರಿಸ್ಥಿತಿ ಪರಿಶೀಲನೆ ನಡೆಸಿತು.

ಸೋಮವಾರ ಬೆಳಗ್ಗೆ 10.45ಕ್ಕೆ ಜಿಲ್ಲೆಯ ಗಡಿಗೆ ಆಗಮಿಸಿದ ತಂಡವನ್ನು ಜಿಲ್ಲಾ ಬಿಜೆಪಿಯಿಂದ ಸ್ವಾಗತಿಸಲಾಯಿತು. ನಂತರ ಗುಂಡ್ಲುಪೇಟೆ ತಾಲೂಕಿನ ಕಿಲಗೆರೆ, ಕುಲಗಾಣ, ಶೀಗೇವಾಡಿ, ಮೂಡ್ನಾಕೂಡು ಗ್ರಾಮಗಳಿಗೆ ಭೇಟಿ ನೀಡಿದ ತಂಡದ ಸದಸ್ಯರು ಮಳೆ ಕೊರತೆ ಹಾಗೂ ವಿದ್ಯುತ್ ಸಮಸ್ಯೆಯಿಂದ ಒಣಗಿರುವ ಬಾಳೆ, ಟೊಮೆಟೊ, ಸೇವಂತಿಗೆ ಹಾಗೂ ಹತ್ತಿ ಬೆಳೆ ಜಮೀನುಗಳಿಗೆ ಭೇಟಿ ನೀಡಿ ರೈತರಿಂದ ಮಾಹಿತಿ ಪಡೆದರು.

ಸರಿಯಾಗಿ ವಿದ್ಯುತ್ ನೀಡದೆ ಬಾಳೆ, ತರಕಾರಿ ಫಸಲು ಹಾನಿಗೊಂಡಿದೆ. ಸಂಬಂಧಪಟ್ಟ ಅಧಿಕಾರಿಗಳು, ಶಾಸಕರು, ಭೇಟಿ ನೀಡಿ ಪರಿಶೀಲಿಸಿಲ್ಲ. ನಷ್ಟ ಪರಿಹಾರವೂ ಸಿಕ್ಕಿಲ್ಲ. ಕಳೆದ 3 ದಿನಗಳಿಂದ ಮಳೆಯಾಗುತ್ತಿದ್ದರೂ ಏನು ಪ್ರಯೋಜನವಿಲ್ಲ ಎಂದು ರೈತರು ತಂಡದ ಗಮನಕ್ಕೆ ತಂದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಬಸನಗೌಡ ಪಾಟೀಲ್ ಯತ್ನಾಳ್, ರಾಜ್ಯದಲ್ಲಿ ಬರ ಪರಿಸ್ಥಿತಿ ನಿಭಾಯಿಸಲು ಸರ್ಕಾರ ವಿಫಲವಾಗಿದೆ. ಬರಪೀಡಿತ ಪ್ರದೇಶಗಳಿಗೆ ಶಾಸಕರು, ಅಧಿಕಾರಿಗಳು ಭೇಟಿ ನೀಡಿಲ್ಲ. ಸಮೀಕ್ಷೆಯನ್ನೇ ಸರಿ ಮಾಡಿಲ್ಲ ಎಂದು ಕಿಡಿಕಾರಿದರು. ಬರ ಪರಿಹಾರ ಕೇಳುವುದಕ್ಕಾಗಿ ಪ್ರಧಾನಿ ಮೋದಿಯವರು ಭೇಟಿಗೆ ಅವಕಾಶ ಕೊಡುತ್ತಿಲ್ಲ ಎಂದು ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಲು ಎರಡ್ಮೂರು ದಿನ, ವಾರ ಕಾಯುತ್ತಾರೆ. ಪ್ರಧಾನಿಯವರ ಭೇಟಿಗೆ ಕಾಯುವುದಕ್ಕೆ ಆಗುವುದಿಲ್ಲವೇ? ಹೋಗಿ ಭೇಟಿ ಮಾಡಿ ಪ್ರಧಾನಿಯವರಿಗೆ ವಾಸ್ತವ ಸ್ಥಿತಿ ವಿವರಿಸಲಿ ಎಂದರು.

ರಾಜ್ಯದ 216 ವಿಧಾನಸಭಾ ಕ್ಷೇತ್ರದಲ್ಲಿ ಬರಗಾಲವಿದೆ ಎಂದು ಸರ್ಕಾರವೇ ಹೇಳಿದೆ. ಆದರೆ, ಸರ್ಕಾರದ ಪರವಾಗಿ ಅಧಿಕಾರಿಗಳು, ಸಚಿವರು, ಶಾಸಕರು ಯಾರೂ ಪರಿಶೀಲನೆ ಮಾಡಿಲ್ಲ. ಅಂದಾಜು ಲೆಕ್ಕ ಮಾಡಿ ಕೇಂದ್ರಕ್ಕೆ ಕಾಟಾಚಾರಕ್ಕೆ ವರದಿ ಸಲ್ಲಿಸಿದ್ದಾರೆ ಎಂದು ದೂರಿದರು. ಬರ ಪರಿಹಾರವನ್ನು ಕೇಂದ್ರ ಸರ್ಕಾರ ಕೊಟ್ಟೇ ಕೊಡಲಿದೆ. ಮೊದಲು ರಾಜ್ಯ ಸರ್ಕಾರ ತನ್ನ ಪಾಲಿನ ಹಣ ಬಿಡುಗಡೆ ಮಾಡಲಿ. ರಾಜ್ಯ ಸರ್ಕಾರದ ಬಳಿ ದುಡ್ಡೇ ಇಲ್ಲ. ದಲಿತರ ದುಡ್ಡನ್ನೂ ಗ್ಯಾರಂಟಿ ಯೋಜನೆಗೆ ಬಳಸಿದ್ದಾರೆ. ಡಿಸೆಂಬರ್ ನಂತರ ನೌಕರರಿಗೆ ಸಂಬಳ ಕೊಡುವುದಕ್ಕೂ ಸರ್ಕಾರದ ಬಳಿ ಹಣ ಇಲ್ಲ ಎಂದು ವ್ಯಂಗ್ಯವಾಡಿದರು.

ಗ್ಯಾರಂಟಿ ಯೋಜನೆಯನ್ನೂ ಸರಿಯಾಗಿ ಅನುಷ್ಠಾನ ಮಾಡಿಲ್ಲ. ಗೃಹ ಲಕ್ಷ್ಮಿ ಯೋಜನೆ ದುಡ್ಡು ಇನ್ನೂ ಬಂದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕುರ್ಚಿ ಉಳಿಸುವುದು ಮತ್ತು ಗ್ಯಾರಂಟಿ ಯೋಜನೆಗೆ ದುಡ್ಡು ಹೊಂದಿಸುವ ಚಿಂತೆ ಬಿಟ್ಟರೆ ಬೇರೇನೂ ಇಲ್ಲ. ಡಿ.ಕೆ.ಶಿವಕುಮಾರ್ ರಾಮನಗರ, ಚನ್ನಪಟ್ಟಣವನ್ನು ಬೆಂಗಳೂರಿಗೆ ಸೇರಿಸುವ ಚಿಂತೆಯಲ್ಲಿದ್ದಾರೆ ಎಂದರು.

ಜಿಲ್ಲೆಯ ವಸ್ತುಸ್ಥಿತಿ ಮನವರಿಕೆ: ಜಿಲ್ಲೆಯ ಮಳೆಯಾಶ್ರಿತ ಪ್ರದೇಶದಲ್ಲಿ ಸರಿಯಾಗಿ ಮಳೆಯಾಗಿಲ್ಲ. ಅಲ್ಲದೇ ನೀರಾವರಿ ಪ್ರದೇಶಗಳಿಗೆ ಸರ್ಕಾರ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡಿಲ್ಲ. ಇದರಿಂದ ಜಿಲ್ಲೆಯ ಬಹುತೇಕ ಕಡೆ ಬೆಳೆಗಳು ಒಣಗಿ, ರೈತರು ನಷ್ಟದಲ್ಲಿದ್ದಾರೆ. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಚರ್ಚೆ ಮಾಡಿ, ಜಿಲ್ಲೆಯ ರೈತರಿಗೆ ಅಗತ್ಯ ನೆರವು ಕಲ್ಪಿಸಲಾಗುವುದು ಎಂದರು.

ಎಲ್ಲರೂ ವಿರೋಧ ಪಕ್ಷದ ನಾಯಕರೇ: ವಿಧಾನಸಭೆ ವಿರೋಧ ಪಕ್ಷದ ನಾಯಕನ ಆಯ್ಕೆಯನ್ನು ಪಕ್ಷದ ಹೈಕಮಾಂಡ್ ಮಾಡಲಿದೆ. ನಮ್ಮಲ್ಲಿ ಎಲ್ಲರೂ ವಿರೋಧ ಪಕ್ಷದ ನಾಯಕರೇ. ಹಿಂದಿನ ಅಧಿವೇಶನದಲ್ಲಿ 65 ಶಾಸಕರು ಸಮರ್ಥವಾಗಿ ಕೆಲಸ ಮಾಡಿದ್ದೇವೆ ಎಂದು ತಿಳಿಸಿದರು.

ಬರ ಅಧ್ಯಯನ ತಂಡದಲ್ಲಿ ಶಾಸಕ ಶ್ರೀವತ್ಸ, ಮಾಜಿ ಶಾಸಕರಾದ ಎನ್.ಮಹೇಶ್. ಸಿ.ಎಸ್. ನಿರಂಜನಕುಮಾರ್, ಹರ್ಷವರ್ಧನ್, ಎಸ್. ಬಾಲರಾಜು, ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕೊಡಗಿನ ಮುಖಂಡ ನವೀನ್, ಜಿಲ್ಲಾ ಘಟಕದ ಅಧ್ಯಕ್ಷ ಜಿ.ನಾರಾಯಣ ಪ್ರಸಾದ್, ಜಿಲ್ಲಾ ವಕ್ತಾರ ಅಯ್ಯನಪುರ ಶಿವಕುಮಾರ್, ಎಸ್‌ಟಿ ಮೋರ್ಚಾ ಅಧ್ಯಕ್ಷ ಜಯಸುಂದರ್ ಇತರರಿದ್ದರು.

ಮಾಜಿ ಸಚಿವ ಸೋಮಣ್ಣರನ್ನು ಕಡೆಗಣಿಸಿಲ್ಲ

ಚಾಮರಾಜನಗರ, ನ.6– ಮಾಜಿ ಸಚಿವ ವಿ.ಸೋಮಣ್ಣ ಅವರನ್ನು ಪಕ್ಷ ಕಡೆಗಣಿಸಿಲ್ಲ. ಅವರಿಗೆ ಮುಂದೆ ಒಳ್ಳೆಯ ಭವಿಷ್ಯವಿದೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ತಿಳಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸೋಮಣ್ಣ ಅವರನ್ನು ಪಕ್ಷದಲ್ಲಿ ಕಡೆಗಣಿಸಲಾಗುತ್ತಿದೆ ಎಂದೆಲ್ಲಾ ಹೇಳಿಕೆಗಳು ಬರುತ್ತಿವೆ. ಅದು ಸುಳ್ಳು. ಅವರಿಗೆ ಪಕ್ಷ ಉನ್ನತ ಸ್ಥಾನ ನೀಡಲಿದೆ. ಅವರು ತಾಳ್ಮೆಯಿಂದ ಇರಬೇಕು ಎಂದರು. ಸೋಮಣ್ಣ ಕಾಂಗ್ರೆಸ್‌ಗೆ ಹೋಗುತ್ತಾರೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಅಲ್ಲಿ ಈಗಾಗಲೇ 136 ಮಂದಿ ಶಾಸಕರಿದ್ದಾರೆ. ಅವರನ್ನೆಲ್ಲಾ ಸಮಾಧಾನ ಪಡಿಸಬೇಕಿದೆ. ಇದನ್ನು ಅರಿತು ಮುಂದಿನ ಲೋಕಸಭಾ ಚುನಾವಣೆಯಲ್ಲಿ ನರೇಂದ್ರ ಮೋದಿ ಪ್ರಧಾನಿಯಾಗಲು ದುಡಿಯಬೇಕಿದೆ ಎಂದರು. ವಿಧಾನಪರಿಷತ್ ಸದಸ್ಯ ಜಗದೀಶ್ ಶೆಟ್ಟರ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬಿಜೆಪಿ ಶಾಸಕರ ಖರೀದಿಸಲು ಶೆಟ್ಟರ್ ಅಂಗಡಿ ತೆರೆದಿದ್ದಾರೆ. ಅವರು ಗ್ರಾಪಂ ಅಧ್ಯಕ್ಷರಾಗಲೂ ಯೋಗ್ಯತೆ ಇಲ್ಲ. ಪಕ್ಷದಲ್ಲಿ ಎಲ್ಲಾ ಹುದ್ದೆಗಳನ್ನು ಅನುಭವಿಸಿರುವ ಅವರಿಗೆ ಬಿಜೆಪಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದರು.

ತನಿಖೆಗೆ ಒತ್ತಾಯ: ಪಿಎಸ್‌ಐ ಹಗರಣದ ಕಿಂಗ್‌ಪಿನ್ ಆರ್.ಡಿ.ಪಾಟೀಲ ಬಿಜೆಪಿಯವನಲ್ಲ. ಕಾಂಗ್ರೆಸ್ ಕಾರ್ಯಕರ್ತ. ಈ ಹಗರಣದ ತನಿಖೆಯನ್ನು ಸರ್ಕಾರ ಸಿಬಿಐಗೆ ವಹಿಸಲಿ ಎಂದು ಸವಾಲು ಹಾಕಿದರು. ಇಷ್ಟು ದಿನ ಪಿಎಸ್‌ಐ ಹಗರಣದ ಬಗ್ಗೆ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸುತ್ತಿದ್ದರು. ಈಗ ಯಾಕೆ ಮಾತಾಡುತ್ತಿಲ್ಲ? ಈ ಹಗರಣದಲ್ಲಿ ಅವರು ಶಾಮೀಲಾಗಿದ್ದಾರೆ ಎಂದು ನನಗೆ ಅನಿಸುತ್ತಿದೆ ಎಂದು ಆರೋಪಿಸಿದರು.

ವಿಶೇಷ ಆಂದೋಲನ

ಚಾಮರಾಜನಗರ, ನ.6– ಜಿಲ್ಲೆಯ 4 ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ಬಿಡತಕ್ಕವು, ಸ್ಥಳಾಂತರ ಮತ್ತು ತಿದ್ದುಪಡಿಗೆ ಸಂಬಂಧಿಸಿದಂತೆ ನ.18, 19, ಡಿ.2 ಹಾಗೂ 3 ರಂದು ವಿಶೇಷ ಆಂದೋಲನ ಹಮ್ಮಿಕೊಳ್ಳಲಾಗಿದೆ. ಸದರಿ ಆಂದೋಲನ ನಡೆಯುವ ದಿನದಂದು ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ಮತಗಟ್ಟೆಗಳಿಗೆ ನೇಮಕ ಮಾಡಿರುವ ಎಲ್ಲ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್‌ಒ) ಆಯಾ ಮತಗಟ್ಟೆಗಳಲ್ಲಿ ಹಾಜರಿದ್ದು ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ, ಬಿಡತಕ್ಕವು, ಸ್ಥಳಾಂತರ ಮತ್ತು ತಿದ್ದುಪಡಿಗೆ ಸಂಬಂಧಿಸಿ ದಂತೆ ನಿಗದಿತ ನಮೂನೆಗಳಲ್ಲಿ ಅರ್ಜಿ ಸ್ವೀಕರಿಸಲಿದ್ದಾರೆ.

ಮತದಾರರು ಮತದಾರರ ಪಟ್ಟಿಯಲ್ಲಿ ಅವರ ಹೆಸರು ಸರಿ ಇರುವುದನ್ನು ಖಚಿತಪಡಿಸಿಕೊಳ್ಳಲು, ಯಾವುದೇ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಶೇ. 100ರಷ್ಟು ದೋಷರಹಿತ ಮತದಾರರ ಪಟ್ಟಿ ಸಿದ್ಧತೆಗೆ ಸಾರ್ವಜನಿಕರು ಸಹಕರಿಸಬೇಕು ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿ ಶಿಲ್ಪಾ ನಾಗ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಸ್ಲೆರಿ ಬಾಟಲ್ ಪ್ರದರ್ಶಿಸಿ ಪ್ರತಿಭಟನೆ



ಚಾಮರಾಜನಗರ, ನ.6– ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವ ಕ್ರಮ ಖಂಡಿಸಿ ಕರ್ನಾಟಕ ಸೇನಾ ಪಡೆಯಿಂದ ಬಿಸ್ಲೆರಿ ಬಾಟಲ್ ಹಿಡಿದು ಸೋಮವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬಿಸ್ಲೆರಿ ಬಾಟಲ್ ಹಿಡಿದು ಕೇಂದ್ರ ಮತ್ತು ರಾಜ್ಯ ಸರ್ಕಾರ, ತಮಿಳುನಾಡು ಸರ್ಕಾರ, ಕಾವೇರಿ ನೀರು ನಿರ್ವಹಣಾ ಮಂಡಳಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘಟನೆಯ ಶಾ.ಮುರಳಿ ಮಾತನಾಡಿ, ತಮಿಳುನಾಡಿಗೆ ಕಾವೇರಿ ನೀರು ಹರಿಸುತ್ತಿರುವುದನ್ನು ಖಂಡಿಸಿ ಕಳೆದ 56 ದಿನಗಳಿಂದ ನಿರಂತರ ಪ್ರತಿಭಟನೆ ನಡೆಸುತ್ತಿದ್ದರೂ, ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಕಾವೇರಿ ವಿಚಾರದಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ಹೀಗಾಗಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಿಕೊಡಬೇಕು. ಸರ್ಕಾರ ನೀರು ಹರಿಸುತ್ತಿರುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ರಾಜು, ಗು.ಪುರುಷೋತ್ತಮ್, ಮಹೇಶ್ ಗೌಡ, ಚಾ.ಹ.ರಾಮು, ವೀರಭದ್ರ, ತಾಂಡವಮೂರ್ತಿ, ಲಿಂಗರಾಜು, ರಾಚಪ್ಪ, ಪ್ರಕಾಶ್ ಇತರರಿದ್ದರು.

ಸಾಲಕ್ಕಾಗಿ ಅರ್ಜಿ ಆಹ್ವಾನ

ಚಾಮರಾಜನಗರ, ನ.6– ಪರಿಶಿಷ್ಟ ಜಾತಿ ಮತ್ತು ಪಂಗಡ, ಅಲೆಮಾರಿ ಮತ್ತು ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಸಮುದಾಯದ ಜನಾಂಗದವರ ಸ್ವಯಂ ಉದ್ಯೋಗಕ್ಕೆ ನೇರ ಸಾಲ, ಮೈಕ್ರೋ ಕ್ರೆಡಿಟ್ (ಪ್ರೇರಣ), ಗಂಗಾ ಕಲ್ಯಾಣ ಹಾಗೂ ಉದ್ಯಮಶೀಲತಾ ಯೋಜನೆಗಳು ಮತ್ತು ಇತರೆ ಯೋಜನೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿಯನ್ನು ಸೇವಾಸಿಂಧು ಪೋರ್ಟಲ್ ಮೂಲಕ http://sevasindhu.karnataka.gov.in ಕರ್ನಾಟಕ ಒನ್ ಹಾಗೂ ಗ್ರಾಮ ಒನ್‌ಗಳಲ್ಲಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ನ.29 ಕಡೆ ದಿನ. ಹೆಚ್ಚಿನ ಮಾಹಿತಿಗೆ 9482300400, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರ ಕಚೇರಿಯ ಈಶ್ವರ ಮೊ: 8618474178 ಸಂಪರ್ಕಿಸಿ.

ಮುಡಾದ ಶೇ.50:50 ಅನುಪಾತದ ನಿವೇಶನ ಹಂಚಿಕೆ ನಿರ್ಣಯ ರದ್ದು



ಮೈಸೂರು, ನ.6– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ) ಶೇ.50:50 ಅನುಪಾತದ ನಿವೇಶನ ಹಂಚಿಕೆ ಸಂಬಂಧ ಕೈಗೊಂಡಿರುವ ನಿರ್ಣಯವನ್ನು ಸರ್ಕಾರ ರದ್ದುಪಡಿಸಿದೆ.

ಪ್ರಾಧಿಕಾರದ ಬಡಾವಣೆ ಮತ್ತು ಇತರೆ ಉದ್ದೇಶಗಳಿಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸದೆ, ಪರಿಹಾರ ನೀಡದೆ ಜಮೀನನ್ನು ಉಪಯೋಗಿಸಿದ ಪ್ರಕರಣಗಳಲ್ಲಿ ಶೇ.50:50 ಅನುಪಾತದಡಿ ನಿವೇಶನ ನೀಡುವ ನಿಟ್ಟಿನಲ್ಲಿ ಕ್ರಮ ವಹಿಸಲು 2020ರ ಸೆ.14ರ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು. ಈ ರೀತಿಯ ನಿಯಮ ಬಾಹಿರ ನಿರ್ಣಯಗಳನ್ನು ಮುಂದಿನ ಆದೇಶಕ್ಕೆ ಮುಡಾ ಆಯುಕ್ತರು 15 ದಿನದೊಳಗೆ ಸರ್ಕಾರಕ್ಕೆ ಕಳುಹಿಸಬೇಕು. ಸರ್ಕಾರದಿಂದ ಸೂಕ್ತ ಆದೇಶ ಸ್ವೀಕೃತವಾಗುವವರೆಗೂ ನಿರ್ಣಯಗಳನ್ನು ಜಾರಿಗೊಳಿಸುವಂತಿಲ್ಲ. ಆದರೆ ನಿಯಮ ಬಾಹಿರ ನಿರ್ಣಯದ ಬಗ್ಗೆ ಮುಡಾ ಆಯುಕ್ತರು ಯಾವುದೇ ಕ್ರಮ ವಹಿಸಿಲ್ಲ. ಜಿಲ್ಲಾಧಿಕಾರಿಗಳ ಅಭಿಪ್ರಾಯ ಅಥವಾ ವರದಿಯೂ ಸ್ವೀಕೃತವಾಗಿಲ್ಲ. ಈ ಹಿನ್ನೆಲೆಯಲ್ಲಿ ನಿಯಮಬಾಹಿರ ನಿರ್ಣಯವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 67ರಡಿಯಲ್ಲಿ ರದ್ದುಪಡಿಸಿ ಸರ್ಕಾರ ಆದೇಶಿಸಿದೆ.

ರಾಜ್ಯ ಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆ



34ನೇ ಜಿಲ್ಲಾ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನ 14–17 ವರ್ಷದ ಬಾಲಕರ ವಿಭಾಗದಲ್ಲಿ ಮೈಸೂರಿನ ಸೆಂಟ್ ಅರ್ನಾಲ್ಡ್ ಕೇಂದ್ರೀಯ ಶಾಲೆಯ 9ನೇ ತರಗತಿ ವಿದ್ಯಾರ್ಥಿ ಹಾಗೂ ಸುಭಾಷ್ ನಗರದ ನಿವಾಸಿ ತಾಲಿಬ್ ಸುಭಾನ್ ಮತ್ತು ನೀಲುಫರ್ ಅವರ ಪುತ್ರ ಮೊಹಮ್ಮದ್ ಅಹ್ಯಾನ್, 4 ಬೆಳ್ಳಿ ಪದಕ ಗೆಲ್ಲುವ ಮೂಲಕ ನ.9 ರಿಂದ ಮಂಗಳೂರಿನಲ್ಲಿ ನಡೆಯುವ 39ನೇ ರಾಜ್ಯ ಮಟ್ಟದ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾಗಿದ್ದಾರೆ.

ಕುತಂತ್ರ ಪಕ್ಷ ಕಾಂಗ್ರೆಸ್‌ನ್ನು ನಂಬಬೇಡಿ: ಅಖಿಲೇಶ್ ಯಾದವ್ ವಾಗ್ದಾಳಿ



ಭೋಪಾಲ್: ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿರುವ ಉತ್ತರ ಪ್ರದೇಶ ಮಾಜಿ ಸಿಎಂ ಅಖಿಲೇಶ್ ಯಾದವ್, ಕಾಂಗ್ರೆಸ್ ಪಕ್ಷವನ್ನು ಮೋಸ ಮಾಡುವ ಪಕ್ಷ ಎಂದು ಜರಿದಿದ್ದಾರೆ. ತಮಗೆ ಕಾಂಗ್ರೆಸ್ ಮೋಸ ಮಾಡಿದೆ ಎಂದು ಆರೋಪಿಸಿರುವ ಅಖಿಲೇಶ್ ಯಾದವ್, ಮುಂಬರುವ ಚುನಾವಣೆಯಲ್ಲಿ ಜನತೆಗೆ ಕಾಂಗ್ರೆಸ್‌ನ್ನು ನಂಬದಂತೆ ಕರೆ ನೀಡಿದ್ದಾರೆ.

ಕಾಂಗ್ರೆಸ್ ಕುತಂತ್ರ ಮಾಡುವ ಪಕ್ಷವಾಗಿದ್ದು, ಅದಕ್ಕೆ ಮತ ನೀಡಬೇಡಿ, ಮತಕ್ಕಾಗಿ ಕಾಂಗ್ರೆಸ್ ಈಗ ಜಾತಿ ಗಣತಿಯನ್ನು ಬೆಂಬಲಿಸುತ್ತಿದೆ. ಕಾಂಗ್ರೆಸ್ ನಮಗೆ ಮೋಸ ಮಾಡಿರಬೇಕಾದರೆ, ಸಾರ್ವಜನಿಕರು ಹೇಗೆ ಅದಕ್ಕೆ ಮುಖ್ಯವಾಗುತ್ತಾರೆ ಎಂದು ಅಖಿಲೇಶ್ ಯಾದವ್ ಮಧ್ಯಪ್ರದೇಶದ ಜತಾರಾ ಕ್ಷೇತ್ರದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ವಾಗ್ದಾಳಿ ನಡೆಸಿದ್ದಾರೆ. 2024ರ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ವೇಳೆಗೆ ಬಿಜೆಪಿ ಕೂಡ ಜಾತಿ ಆಧಾರಿತ ಜನಗಣತಿಗೆ ಬೆಂಬಲ ನೀಡಲಿದೆ. ಏಕೆಂದರೆ ಇದು ಮತದಾರರ ಬೇಡಿಕೆಯಾಗಿದೆ ಎಂದು ಅಖಿಲೇಶ್ ಯಾದವ್ ಹೇಳಿದ್ದಾರೆ. ಸಾರ್ವಜನಿಕ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ಎಸ್‌ಪಿ ಮುಖ್ಯಸ್ಥರು, ಕಳಪೆ ಮೂಲಸೌಕರ್ಯ ಮತ್ತು ಮಹಿಳೆಯರ ಸುರಕ್ಷತೆಯ ಬಗ್ಗೆ ಮಧ್ಯಪ್ರದೇಶದ ಈಗಿನ ಸರ್ಕಾರವನ್ನು ಗುರಿಯಾಗಿಸಿ ವಾಗ್ದಾಳಿ ನಡೆಸಿದ್ದಾರೆ.

ಪ್ರಧಾನಿ ಮೋದಿಯವರ ಉಚಿತ ಪಡಿತರ ಯೋಜನೆಗೆ ಪ್ರತಿಕ್ರಿಯಿಸಿದ ಯಾದವ್, ನೀವು ಪಡಿತರವಾಗಿ ಏನನ್ನೂ ಪಡೆಯದಿದ್ದರೆ, ನೀವು ಬಿಜೆಪಿಗೆ ಏಕೆ ಮತ ಹಾಕುತ್ತೀರಿ? ಎಂದು ಜನತೆಯನ್ನು ಪ್ರಶ್ನಿಸಿದ್ದು ಬಿಜೆಪಿ ಸರ್ಕಾರವನ್ನು ಲೂಟ್ ತಾಂತ್ರಿಕ್ ಸರ್ಕಾರ ಎಂದು ತಿವಿದಿದ್ದಾರೆ.

ಶಿಕ್ಷಣ ಇಲಾಖೆ ಅಧಿಕಾರಿ ವಿರುದ್ಧ ಕ್ರಮಕ್ಕೆ ಒತ್ತಾಯ

ಮೈಸೂರು,ನ.6(ಎಂಟಿವೈ)– ಕರ್ತವ್ಯ ಲೋಪ ಎಸಗಿ, ರಾಜಕೀಯ ಪಕ್ಷವೊಂದರ ಪರ ಸಕ್ರಿಯವಾಗಿ ಕೆಲಸ ಮಾಡುತ್ತಿರುವ ಮಂಗಳೂರು ಜಿಲ್ಲೆಯ ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ಡಾ॥ ರಾಮೇಗೌಡ ವಿರುದ್ಧ ಶಿಸ್ತು ಕ್ರಮಕ್ಕೆ ಒತ್ತಾಯಿಸಿ ಸರ್ಕಾರಕ್ಕೆ ದೂರು ಸಲ್ಲಿಸುತ್ತಿರುವುದಾಗಿ ಜನಸಂಗ್ರಾಮ ಪರಿಷತ್ ರಾಜ್ಯಾಧ್ಯಕ್ಷ ನಗರ್ಲೆ ಎಂ. ವಿಜಯ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಮೇಗೌಡರು ಈ ಹಿಂದೆ ಮಂಡ್ಯದಲ್ಲಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿಯೂ ರಾಜಕೀಯ ಪಕ್ಷವೊಂದರ ಪರ ಬಹಿರಂಗವಾಗಿಯೇ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡಿದ್ದರು. ಈ ಸಂಬಂಧ ದೂರು ದಾಖಲಾಗಿತ್ತು ಎಂದರು.

ಪರೀಕ್ಷಾ ನಿಯಂತ್ರಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ನಕಲಿ ಅಂಕಪಟ್ಟಿ, ಪರೀಕ್ಷಾ ಅಕ್ರಮ ಸೇರಿದಂತೆ ಹಲವು ಅವ್ಯವಹಾರಗಳಲ್ಲಿ ತೊಡಗಿದ್ದ ಆರೋಪ ಎದುರಿಸುತ್ತಿದ್ದಾರೆ. ಜನಪ್ರತಿನಿಧಿಯೊಬ್ಬರ ಕೃಪಾಕಟಾಕ್ಷದಿಂದ ಇದೀಗ ಮೈಸೂರು ಜಿಲ್ಲಾ ಶಿಕ್ಷಣ ಇಲಾಖೆಗೆ ಜಂಟಿ ನಿರ್ದೇಶಕರಾಗಿ ಬರುವ ಪ್ರಯತ್ನ ನಡೆಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಆ ಅಧಿಕಾರಿ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಬೇಕು ಹಾಗೂ ಮೈಸೂರಿಗೆ ನಿಯೋಜನೆಗೊಳ್ಳಲು ಅವಕಾಶ ನೀಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿ ಪತ್ರ ಬರೆಯುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜನ ಸಂಗ್ರಾಮ ಪರಿಷತ್ ಸದಸ್ಯರಾದ ಸಿ.ಟಿ. ಜಯರಾಂ, ಬೊಕ್ಕಹಳ್ಳಿ ನಂಜುಂಡಸ್ವಾಮಿ ಇದ್ದರು.

ಒಂದನೇ ಪುಟದಿಂದ

ನಿತ್ಯ ಏಳು ಗಂಟೆ ವಿದ್ಯುತ್ ಪೂರೈಕೆ

ರಾಜ್ಯಗಳಿಗೆ ನೀಡದಂತೆ ಆದೇಶ ಹೊರಡಿಸಿ, ಅದನ್ನು ಪಡೆಯ ಲಾಗುತ್ತಿದೆ. ಆ ಮೂಲಕ ವಿದ್ಯುತ್ ವಿತರಣೆ ಸಹಜ ಸ್ಥಿತಿಗೆ ಬಂದಿದೆ. ನೋಡಲ್ ಅಧಿಕಾರಿಗಳು ನಿರಂತರವಾಗಿ ಪರಿಸ್ಥಿತಿಯನ್ನು ಗಮನಿಸುತ್ತಿದ್ದಾರೆ. ವಿವಿಧ ವಿದ್ಯುತ್ ಸರಬರಾಜು ಕಂಪೆನಿಗಳ ವ್ಯಾಪ್ತಿಯಲ್ಲಿ ರೈತರ ಅಗತ್ಯತೆಗನುಗುಣವಾಗಿ ಐದರಿಂದ ಏಳು ಗಂಟೆಗಳ ಅವಧಿಗೆ ನಿರಂತರ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ರಾಜ್ಯದಾದ್ಯಂತ ಐಪಿ ಸೆಟ್‌ಗಳಿಗೆ ನಿರಂತರ ಏಳು ಗಂಟೆಗಳ ಅವಧಿಗೆ ವಿದ್ಯುತ್ ಒದಗಿಸಲು 600 ಮೆಗಾವ್ಯಾಟ್ ಹಾಗೂ ಪ್ರತಿದಿನಕ್ಕೆ 14 ಮಿಲಿಯನ್ ಯೂನಿಟ್‌ಗಳ ಅಗತ್ಯವಿದೆ.

ಸರ್ಕಾರದ ಮೇಲೆ ಹೆಚ್ಚಿನ ಹೊರೆಯಾಗದಂತೆ ಪ್ರತಿದಿನ ಏಳು ತಾಸು ವಿದ್ಯುತ್ ನೀಡಲು ಇಂದಿನ ಸಭೆಯಲ್ಲಿ ನಿರ್ಧರಿಸಲಾಯಿತು. ಅದಕ್ಕಾಗಿ ಸುಮಾರು 1500 ಕೋಟಿ ರೂ. ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಅನುದಾನದ ಉಳಿತಾಯ, ಮರುಹಂಚಿಕೆಯ ಮೂಲಕ ಈ ವೆಚ್ಚ ಭರಿಸಲಾಗುವುದು ಎಂದು ಹೇಳಿದರು.

ಹುಲಿ ದಾಳಿಗೆ ಮತ್ತೊಬ್ಬ ರೈತ ಬಲಿ

ಆಗಮಿಸ ದಿದ್ದರಿಂದ ಗ್ರಾಮಸ್ಥರು ಹಾಗೂ ರೈತರ ಆಕ್ರೋಶ ಮತ್ತಷ್ಟು ಹೆಚ್ಚಾಯಿತು. ಅರಣ್ಯಾಧಿಕಾರಿಗಳು ಸ್ಥಳಕ್ಕೆ ಬರುವವ ರೆಗೂ ಸ್ಥಳದಲ್ಲೇ ಪ್ರತಿಭಟಿಸುವುದಾಗಿ ಮಳೆಯಲ್ಲೇ ಗ್ರಾಮಸ್ಥರು ಹಾಗೂ ಕುಟುಂಬಸ್ಥರು ಶವದೊಂದಿಗೆ ಬೀಡುಬಿಟ್ಟಿದ್ದಾರೆ.

ಈ ವೇಳೆ ಮೃತ ರೈತ ಬಾಲಾಜಿ ನಾಯಕ ತಂದೆ ಲಕ್ಷ್ಮಿ ನಾಯಕ, ತಾಯಿ ಪಾರ್ವತಿ ಬಾಯಿ, ಪತ್ನಿ ಜ್ಯೋತಿ, ಪುತ್ರಿಯರಾದ ಐಶ್ವರ್ಯ, ಸೌಂದರ್ಯ ಹಾಗೂ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿದೆ. ಬಾಲಾಜಿ ನಾಯಕ ಬಡವರಾಗಿದ್ದು, ಮೊದಲನೆಯ ಪುತ್ರಿ ಐಶ್ವರ್ಯ ಪಿಯುಸಿ ಹಾಗೂ ಎರಡನೇ ಪುತ್ರಿ ಸೌಂದರ್ಯ ಎಸ್‌ಎಸ್‌ಎಲ್‌ಸಿ ಓದುತ್ತಿದ್ದಾರೆ. ಕೆಲ ದಿನಗಳ ಹಿಂದೆ ಕಾಡಾನೆ ದಾಳಿಯಿಂದ ರೈತನೋರ್ವ ಮೃತಪಟ್ಟಿದ್ದು, ಮತ್ತೆ ಇದೀಗ ಹುಲಿ ದಾಳಿಗೆ ಮತ್ತೊಬ್ಬ ರೈತ ಬಲಿಯಾಗಿದ್ದಾನೆ. ಇದರಿಂದ ಕೃಷಿ ಕೆಲಸಕ್ಕೆ ಹೋಗುವುದಿರಲಿ, ಮನೆಯಿಂದ ಹೊರಗಡೆ ಬರಲು ಪ್ರಾಣ ಭಯದ ಪರಿಸ್ಥಿತಿ ನಿರ್ಮಾಣವಾಗಿದೆ. ಸ್ಥಳದಲ್ಲಿ ತಹಶೀಲ್ದಾರ್ ಪರಶಿವಮೂರ್ತಿ, ಪಿಎಸ್‌ಐ ನಂದೀಶ್ ಕುಮಾರ್, ಪೊಲೀಸ್ ಸಿಬ್ಬಂದಿ ನಾಗನಾಯಕ, ಇಮ್ರಾನ್, ಕೃಷ್ಣ, ಆನಂದ್, ಪ್ರಕಾಶ್ ಚಂದ್ರು, ಗ್ರಾಮ ಪಂಚಾಯಿತಿ ಅಧ್ಯಕ್ಷ ಅಜಿತ್ ಕುಮಾರ್, ಸದಸ್ಯರಾದ ದೇವದಾಸ್, ಕುರ್ಣೇಗಾಲ ಬೆಟ್ಟಸ್ವಾಮಿ, ಕೃಷ್ಣ, ಗ್ರಾಮಸ್ಥರು ಇದ್ದರು.

15 ಲಕ್ಷ ಪರಿಹಾರ ಚೆಕ್ ವಿತರಣೆ

ಸೋಮವಾರ ಮಧ್ಯರಾತ್ರಿ ಘಟನಾ ಸ್ಥಳಕ್ಕೆ ಶಾಸಕ ಅನಿಲ್ ಚಿಕ್ಕಮಾದು ಅರಣ್ಯಾಧಿಕಾರಿಗಳೊಂದಿಗೆ ಭೇಟಿ ನೀಡಿ, ಮೃತ ರೈತ ಬಾಲಾಜಿ ನಾಯಕ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರದ ಚೆಕ್ ವಿತರಿಸಿದರು. ಇದೇ ವೇಳೆ ಪತ್ನಿ ಜ್ಯೋತಿಗೆ ಮಾಶಾಸಾನ ಹಾಗೂ ಒಬ್ಬ ಪುತ್ರಿಗೆ ಅರಣ್ಯ ಇಲಾಖೆಯಿಂದ ಕೆಲಸ ನೀಡುವುದಾಗಿ ಭರವಸೆ ನೀಡಿದರು. ಸಿಎಫ್‌ಓ ಡಾ.ರಮೇಶ್ ಕುಮಾರ್, ಎಸಿಎಫ್ ಪರಮೇಶ್ವರ್ ಹಾಗೂ ಸಿಬ್ಬಂದಿ ಇದ್ದರು.

ಭತ್ತದ ಬೆಳೆಗೆ ರೋಗದ ಬಾಧೆ: ರೈತರು ಕಂಗಾಲು

ಮೈಸೂರು,ನ.6(ಎಂಟಿವೈ)– ಬರಗಾಲದಿಂದ ತತ್ತರಿಸಿದ್ದ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಹ ಅನುಭವವಾಗುತ್ತಿದೆ. ಭತ್ತಕ್ಕೆ ಹಲವು ರೋಗ ಬಾಧೆ ಕಾಡತೊಡಗಿದ್ದು ರೈತರನ್ನು ಕಂಗಾಲಾಗಿಸಿದೆ.

ಮೈಸೂರು ಜಿಲ್ಲೆಯ ವಿವಿಧ ತಾಲೂಕು ವ್ಯಾಪ್ತಿಯಲ್ಲಿ ಬೆಳೆದಿರುವ ಭತ್ತದ ಬೆಳೆ ನೀರಿನ ಕೊರತೆ ಎದುರಿಸುತ್ತಿರುವ ಸಂದರ್ಭದಲ್ಲಿಯೇ ವಿವಿಧ ರೋಗಬಾಧೆ ಕಾಡಲಾರಂಭಿಸಿದೆ. ವರುಣಾ ನಾಲೆ, ಕಬಿನಿ ಜಲಾಶಯದ ವಿವಿಧ ನಾಲೆಗಳಲ್ಲಿ 15 ದಿನ ಹರಿಸಿದ ನೀರು ಸೇರಿದಂತೆ ಪಂಪ್‌ಸೆಟ್‌ನಿಂದ ನೀರುಣಿಸಿ ಬೆಳೆದ ಭತ್ತದ ಬೆಳೆ ಕಾಯಿಕಚ್ಚುವ ಸಂದರ್ಭದಲ್ಲಿ ಏಕಕಾಲಕ್ಕೆ ವಿವಿಧ ರೋಗ ಕಾಣಿಸಿಕೊಂಡಿರುವುದು ರೈತರನ್ನು ಕಂಗೆಡಿಸಿದೆ. ಇದರೊಂದಿಗೆ ಕೀಟಬಾಧೆಯೂ ಹೆಚ್ಚಾಗಿದ್ದು, ಕೈಗೆ ಬಂದ ತುತ್ತು ಬಾಯಿಗೆ ಬರದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಭತ್ತದ ಬೆಳೆಗೆ ಕಂದು ಚುಕ್ಕೆರೋಗ, ಬೆಂಕಿರೋಗ, ದುಂಡಾಣು ಅಂಗಮಾರಿ ರೋಗ, ಊದು ಬತ್ತಿರೋಗ ಹಾಗೂ ಇನ್ನಿತರ ರೋಗಭಾಧೆ ತೀವ್ರ ಸ್ವರೂಪದಲ್ಲಿ ಕಾಣಿಸಿಕೊಂಡಿದೆ. ಕೃಷಿ ಇಲಾಖೆ ಕಾರ್ಯೋನ್ಮುಖವಾಗಿ ಭತ್ತದ ಬೆಳೆ ರಕ್ಷಣೆಗೆ ರೈತರಲ್ಲಿ ಜಾಗೃತಿ ಮೂಡಿಸುತ್ತಿದೆ.



ರೈತರಲ್ಲಿ ಜಾಗೃತಿ: ಭತ್ತದ ಬೆಳೆಗಳಿಗೆ ರೋಗಬಾಧೆ ಕಾಡಲಾರಂಭಿಸಿದ ಹಿನ್ನೆಲೆಯಲ್ಲಿ ಮೈಸೂರು ತಾಲೂಕಲ್ಲಿ ಕೃಷಿ ಅಧಿಕಾರಿಗಳು ಕ್ಷೇತ್ರ ಪರಿಶೀಲನೆ ತೆರಳಿ ರೈತರು ಬೆಳೆದಿರುವ ಭತ್ತದ ಬೆಳೆಯನ್ನು ರಕ್ಷಿಸಿಕೊಳ್ಳುವ ವಿಧಾನವನ್ನು ತಿಳಿಸತೊಡಗಿದ್ದಾರೆ. ಮೋಡ ಕವಿದ ವಾತಾವರಣದಿಂದಾಗಿ ಭತ್ತದ ಬೆಳೆಗಳಿಗೆ ರೋಗ ಬಾಧೆ, ಕೀಟಗಳ ಹಾವಳಿ ಹೆಚ್ಚಾಗಲಿದ್ದು, ಅವುಗಳ ತಡೆಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮದ ಬಗ್ಗೆ ಮಾಹಿತಿ ಒದಗಿಸುತ್ತಿದ್ದಾರೆ.

ಮೈಸೂರು ತಾಲೂಕಿನ ಸಹಾಯಕ ಕೃಷಿ ನಿರ್ದೇಶಕಿ ಡಾ.ಹೆಚ್.ಬಿ.ಮಧುಲತಾ, ನಾಗನಹಳ್ಳಿಯ ವಿಸ್ತರಣಾ ಶಿಕ್ಷಣ ಘಟಕದ ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಎನ್.ಪುಷ್ಪಾ, ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಎಸ್.ಜೆ.ಹೇಮಂತ್ ಅವರನ್ನೊಳಗೊಂಡ ತಂಡ ತಾಲೂಕಿನ ಕಸಬಾ ಹೋಬಳಿಯ ನಾಗನಹಳ್ಳಿ, ಲಕ್ಷ್ಮೀಪುರ, ಕಳಸ್ತವಾಡಿ ಹಾಗೂ ವರುಣಾ ಹೋಬಳಿಯ ಕೀಳನಪುರ, ಕುಪ್ಪೇಗಾಲ, ಹೊಸಹಳ್ಳಿ, ಮುದ್ದೇಗೌಡನಹುಂಡಿ, ಯಡಕೋಳ, ದೇವಲಾಪುರ ಸೇರಿದಂತೆ ವಿವಿಧ ಗ್ರಾಮಗಳಿಗೆ ಆತ್ಮಯೋಜನೆಯಡಿ ಜಂಟಿ ಕ್ಷೇತ್ರ ಭೇಟಿ ನೀಡಿ, ರೈತರಿಗೆ ತಾಂತ್ರಿಕ ಮಾಹಿತಿಯನ್ನು ನೀಡಿದರು.

ಈ ವೇಳೆ ಸಹಾಯಕ ಪ್ರಾಧ್ಯಾಪಕಿ ಡಾ.ಆರ್.ಎನ್.ಪುಷ್ಪ ಮಾತನಾಡಿ, ಭತ್ತದ ಬೆಳೆಗೆ ಈಗಾಗಲೇ ಮೇಲುಗೊಬ್ಬರವನ್ನು ನೀಡಲಾಗಿದೆ. ಜಿಲ್ಲೆಯ ಕೆಲವು ಭಾಗಗಳಲ್ಲಿ ಭತ್ತದ ಪ್ರಮುಖ ರೋಗಗಳಾದ ಕಂದು ಚುಕ್ಕೆರೋಗ, ಬೆಂಕಿ ರೋಗ ದುಂಡಾಣು ಅಂಗಮಾರಿ ರೋಗ ಹಾಗೂ ಜ್ಯೋತಿ ತಳಿಯ ಭತ್ತದ ಬೆಳೆಗೆ **ಊದು ಬತ್ತಿರೋಗ** ಕಾಣಿಸಿ ಕೊಳ್ಳುತ್ತಿದೆ. ಈ ರೋಗಗಳನ್ನು ಹತೋಟಿಗೆ ತರದಿದ್ದಲ್ಲಿ ಕಾಳುಗಳು ಜೊಳ್ಳಾಗುವ ಸಾಧ್ಯತೆ ಹೆಚ್ಚು. ಆದ್ದರಿಂದ ರೈತರು ಸಸ್ಯ ಸಂರಕ್ಷಣಾ ಕ್ರಮಗಳನ್ನು ಅನುಸರಿಸಬೇಕೆಂದು ತಿಳಿಸಿದರು. ವಿವಿಧ ರೋಗಗಳಿಂದ ಭತ್ತದ ಬೆಳೆ ರಕ್ಷಣೆಗೆ ಏನೇನು ಕ್ರಮ ಅನುಸರಿಸಬೇಕು ಎಂಬುದನ್ನು ರೈತರಿಗೆ ವಿವರಿಸಿದರು.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ 9980366789ನ್ನು ಸಂಪರ್ಕಿಸಲು ಕೋರಲಾಗಿದೆ. ಹಿಂಗಾರು ಹಂಗಾಮಿನಲ್ಲಿ ಬಿತ್ತನೆಯಾಗಿರುವ ಹುರುಳಿ ಬೆಳೆಗೆ, ಬೆಳೆ ವಿಮೆ ಮಾಡಿಸಲು, ಪ್ರಧಾನಮಂತ್ರಿ ಫಸಲ್ ವಿಮಾ ಯೋಜನೆಯಡಿ ನೋಂದಾಯಿಸಿಕೊಳ್ಳುವಂತೆ ಕೃಷಿ ಇಲಾಖೆ ಕೋರಿದೆ.

ವಕೀಲರ ವಿರುದ್ಧ ಎಫ್‌ಐಆರ್: ಕಲಾಪದಿಂದ ಹೊರಗುಳಿದು ಪ್ರತಿಭಟಿಸಿದ ವಕೀಲರು



ಮೈಸೂರು,ನ.6(ಎಂಟಿವೈ)– ಜಮೀನು ವಿವಾದ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಮೂವರು ವಕೀಲರ ವಿರುದ್ಧ ಎಫ್‌ಐಆರ್ ದಾಖಲಿಸಿರುವ ಪೊಲೀಸರ ನಡೆ ಖಂಡಿಸಿ, ಮೈಸೂರಲ್ಲಿ ವಕೀಲರು ಕಲಾಪದಿಂದ ಹೊರಗುಳಿದು ಬಹಿಷ್ಕರಿಸಿ ಪ್ರತಿಭಟನೆ ನಡೆಸಿದರು.

ಮೈಸೂರು ತಾಲೂಕಿನ ಮಾವಿನಹಳ್ಳಿ ಗ್ರಾಮದಲ್ಲಿ ನಾಲ್ಕು ದಿನದ ಹಿಂದೆ ಎರಡು ಕುಟುಂಬಗಳ ನಡುವೆ ನಡೆದ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ಜಯಪುರ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣದಲ್ಲಿ ಮಾವಿನಹಳ್ಳಿ ನಿವಾಸಿ, ವಕೀಲರಾದ ಅಭಿಷೇಕ, ಸಿದ್ದೇಶ ಮತ್ತು ಬೋರೇಗೌಡ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಪೊಲೀಸರು ಪೂರ್ವಾಪರ ಪರಿಶೀಲಿಸದೆ, ರಾಜಕೀಯ ಒತ್ತಡಕ್ಕೆ ಒಳಗಾಗಿ ವಕೀಲರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಆರೋಪಿಸಿ ಸೋಮವಾರ ಕಲಾಪದಿಂದ ದೂರವುಳಿದ ವಕೀಲರು ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ದುರುದ್ದೇಶದಿಂದ ವ್ಯಕ್ತಿಯೊಬ್ಬ ನೀಡಿದ ದೂರನ್ನು ಪರಿಶೀಲಿಸದೆ ಜಯಪುರ ಠಾಣೆಯ ಅಧಿಕಾರಿಗಳು ಪ್ರಕರಣ ದಾಖಲಿಸಿದ್ದಾರೆ. ಘಟನೆ ವೇಳೆ ವಕೀಲರು ಸ್ಥಳದಲ್ಲಿ ಇಲ್ಲದಿದ್ದರೂ ಸತ್ಯಾಂಶ ಪರಿಶೀಲಿಸದೆ, ಪೂರ್ವಾಗ್ರಹ ಪೀಡಿತರಾಗಿ ವಕೀಲರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ರಾಜಕೀಯ ಒತ್ತಡಕ್ಕೆ ಒಳಗಾಗಿ ಎಫ್‌ಐಆರ್ ದಾಖಲಿಸಿದ ಪೊಲೀಸ್ ಅಧಿಕಾರಿಯನ್ನು ಅಮಾನತು ಮಾಡಬೇಕು. ಹಿರಿಯ ಅಧಿಕಾರಿಗಳು ಪ್ರಕರಣದ ಸತ್ಯಾಸತ್ಯತೆ ಪರಿಶೀಲಿಸಬೇಕು. ಎಫ್‌ಐಆರ್‌ನಿಂದ ವಕೀಲರ ಹೆಸರನ್ನು ತೆಗೆಯಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮುಂದುವರೆಸುವುದಾಗಿ ಎಚ್ಚರಿಕೆ ನೀಡಿದರು. ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ವಕೀಲ ಡಾ.ಬಿ.ಶಿವಣ್ಣ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಇಂದಿನಿಂದ 'ಜಲ ದೀಪಾವಳಿ'

'ಮಹಿಳೆಯರಿಗಾಗಿ ನೀರು, ನೀರಿಗಾಗಿ ಮಹಿಳೆಯರು' ಪರಿಕಲ್ಪನೆಯಡಿ ಮೈಸೂರು ಪಾಲಿಕೆ ಡೆ–ನಲ್ಮ್ ವಿನೂತನ ಆಚರಣೆ

ಮೈಸೂರು, ನ.6(ಎಂಕೆ)– 'ಮಹಿಳೆಯರಿಗಾಗಿ ನೀರು, ನೀರಿಗಾಗಿ ಮಹಿಳೆಯರು' ಪರಿಕಲ್ಪನೆಯಲ್ಲಿ ನೀರ್ ತುಂಬೋ ಹಬ್ಬ 'ಜಲ ದೀಪಾವಳಿ' ಆಚರಣೆ...!

ಮೈಸೂರು ನಗರಪಾಲಿಕೆ ಡೇ–ನಲ್ಮ್ ವಿಭಾಗದ ವತಿಯಿಂದ ಅಮೃತ್–2.0 ಅಭಿಯಾನದಡಿ ನಾಳೆ(ನ.7 ರಿಂದ 9ರವರೆಗೆ)ಯಿಂದ ಮೂರು ದಿನ 'ಮಹಿಳೆಯರಿಗಾಗಿ ನೀರು, ನೀರಿಗಾಗಿ ಮಹಿಳೆಯರು'(Women for Water, Water for Women Campaign 'Jal Diwali') 'ಜಲ ದೀಪಾವಳಿ' ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ನಗರಪಾಲಿಕೆಯ 'ನೀರು ಸಂಸ್ಕರಣಾ ಘಟಕ'ಗಳಲ್ಲಿ ನೀರನ್ನು ಬಿಂದಿಗೆಗಳಿಗೆ ತುಂಬಿಸುವ ಮೂಲಕ ಜಲ ಜಾಗೃತಿ ಮೂಡಿಸುವ ವಿಶೇಷ ಕಾರ್ಯಕ್ರಮ ಇದಾಗಿದೆ. ಮನೆಗಳಿಗೆ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ಪೂರೈಕೆ, ನಾಗರಿಕರು ಉತ್ತಮ ಗುಣಮಟ್ಟದ ನೀರನ್ನು ಪಡೆದುಕೊಳ್ಳಲು ಅನುಸರಿಸುವ ವಿವಿಧ ಪರೀಕ್ಷಾ ಮಾದರಿಯ ಪ್ರಕ್ರಿಯೆಯ ಬಗ್ಗೆ ಮಾಹಿತಿಯನ್ನು ತಿಳಿಸುವುದರ ಜೊತೆಗೆ ನೀರಿನ ಮೂಲ ಸೌಕರ್ಯದ ಬಗ್ಗೆ ಮಾಲೀಕತ್ವದ ಭಾವನೆಯನ್ನು ಮಹಿಳೆಯರ ನಡುವೆ ತರುವುದಾಗಿದೆ.



30 ಮಹಿಳಾ ಸ್ವ–ಸಹಾಯ ಸಂಘ: 'ಜಲ ದೀಪಾವಳಿ' ಜಾಗೃತಿ ಕಾರ್ಯಕ್ರಮದಲ್ಲಿ 30 ಮಹಿಳಾ ಸ್ವ–ಸಹಾಯ ಸಂಘದ ಸದಸ್ಯರು ಭಾಗವಹಿಸಲಿದ್ದು, ವಾಣಿ ವಿಲಾಸ ವಾಟರ್ ವರ್ಕ್‌ನಿಂದ ಮೈಸೂರು ನಗರದಲ್ಲಿರುವ ಎಲ್ಲಾ ನೀರು ಸಂಸ್ಕರಣಾ ಘಟಕಗಳಿಗೆ ಭೇಟಿ ನೀಡಲಾಗುವುದು ಎಂದು ನಗರ ಪಾಲಿಕೆ ಡೇ–ನಲ್ಮ್ ವಿಭಾಗದ ಅಭಿಯಾನ ವ್ಯವಸ್ಥಾಪಕ ಡಾ.ಜೆ.ಎಸ್.ಭೈರಲಿಂಗಯ್ಯ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಉದಾಸೀನ ಮನೋಭಾವದಿಂದ ಯುವ ಪೀಳಿಗೆ ಅವಕಾಶ ವಂಚಿತವಾಗುತ್ತಿದೆ

ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯ



ಮೈಸೂರು, ನ.6(ಎಸ್‌ಪಿಎನ್)– ನಿಮ್ಮ ಮುಂದಿನ ಭವಿಷ್ಯಕ್ಕಾಗಿ (ಅಭ್ಯರ್ಥಿಗಳು) ನಾಳೆ ಎಂಬ ಉದಾಸೀನತೆ ಬಿಟ್ಟು ಇಂದೇ ಎನ್ನುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ಯಶಸ್ಸು ನಿಮ್ಮದಾಗಲಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಆಯೋಜಿಸಿದ್ದ ಯುಜಿಸಿ–ನೆಟ್ ಮತ್ತು ಕೆ–ಸೆಟ್ ಪರೀಕ್ಷಾ ಉಚಿತ ತರಬೇತಿ ಶಿಬಿರಕ್ಕೆ ಚಾಲನೆ ನೀಡಿ, ಮಾತನಾಡಿದರು.

ಇಂದಿನ ಯುವ ಪೀಳಿಗೆ ಇಂದು ಮಾಡುವ ಕೆಲಸವನ್ನು ನಾಳೆ ಮಾಡಿದರಾಯಿತು ಎನ್ನುವ ಉದಾಸೀನ ಮನೋಭಾವದಿಂದ ಹಲವು ಅದ್ಭುತ ಅವಕಾಶಗಳನ್ನು ಕಳೆದುಕೊಳ್ಳುತ್ತಿದ್ದಾರೆ. ನಿಶ್ಚಿತ ಮತ್ತು ನಿಖರ ಗುರಿಯನ್ನು ಇಟ್ಟುಕೊಳ್ಳುವುದರ ಜೊತೆಗೆ ಒಂದು ವ್ಯವಸ್ಥಿತವಾದ ವೇಳಾಪಟ್ಟಿಯನ್ನು ಮಾಡಿಕೊಂಡು ನಿರಂತರ ಪರಿಶ್ರಮ ಹಾಕಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.

ಇಂದಿನ ಯುವಕರು ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ ಇತರರು ಮಾಡುವುದಕ್ಕಿಂತ ಭಿನ್ನವಾಗಿ ಆಲೋಚಿಸಿ ಕೆಲಸ ಮಾಡಿ ತೋರಿಸಿದರೆ ಬಹುತೇಕ ವೃತ್ತಿ ಜೀವನದಲ್ಲಿ ಯಶಸ್ಸು ಗಳಿಸುತ್ತಾರೆ. ಕಠಿಣ ಪರಿಶ್ರಮವಿಲ್ಲದೆ ಯಾವುದೇ ಪ್ರತಿಫಲವನ್ನು ನಿರೀಕ್ಷೆ ಮಾಡಬೇಡಿ ಎಂದು ಸಲಹೆ ನೀಡಿದರು.

ಪ್ರತಿ ಸಾಧಕ, ಮುಂದಿನ ಐದು ಅಥವಾ ಹತ್ತು ವರ್ಷಗಳಲ್ಲಿ ನಾನು ಏನಾಗಬೇಕು ಮತ್ತು ಎಲ್ಲಿರಬೇಕು ಎಂಬ ಗುರಿ ಇಟ್ಟುಕೊಂಡು ನಿರಂತರ ಶ್ರಮ ಹಾಕಬೇಕು. ಅಲ್ಲದೆ, ಮುಂದಿನ ಮಾರ್ಚ್ ನಂತರ ಕರ್ನಾಟಕದಲ್ಲಿ ಸುಮಾರು ಐದು ಸಾವಿರ ಅಧ್ಯಾಪಕರ ಹುದ್ದೆಯನ್ನು ತುಂಬಲು ತಯಾರಿ ನಡೆಸುತ್ತಿದೆ. ಇಂತಹ ಅದ್ಭುತ ಅವಕಾಶವನ್ನು ಕಳೆದುಕೊಳ್ಳಬೇಡಿ ಎಂದು ಶಿಬಿರಾರ್ಥಿಗಳಿಗೆ ಸಲಹೆ ನೀಡಿದರು.

ಮೈಸೂರು ಜಿಲ್ಲೆಯ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ಮಾತನಾಡಿ, 25 ವರ್ಷಗಳ ಹಿಂದೆ ನಾನು ಜ್ಞಾನಬುತ್ತಿ ಸಂಸ್ಥೆಯಲ್ಲಿ ವಿದ್ಯಾರ್ಥಿಯಾಗಿ ಬಂದು ತರಬೇತಿ ಪಡೆದ ಘಳಿಗೆಯನ್ನು ನೆನಪು ಮಾಡಿಕೊಂಡರಲ್ಲದೆ, ಸಾಧಕನಿಗೆ ಗುರು ಮತ್ತು ಗುರಿ ಇರಬೇಕು. ಅಂತೆಯೇ ಪರೀಕ್ಷೆಯಲ್ಲಿ ಉತ್ತರಿಸುವಾಗ ಎಲ್ಲರಿಗಿಂತ ಭಿನ್ನವಾಗಿ ಬರೆದರೆ ಮೌಲ್ಯಮಾಪಕರ ಗಮನ ಸೆಳೆದು ಅತ್ಯುತ್ತಮ ಅಂಕಗಳಿಸಿದ ಕೆಲ ಪ್ರಸಂಗಗಳನ್ನು ಉದಾಹರಣೆ ನೀಡಿದರು.

ಅಖಿಲ ಭಾರತ ಸಹಕಾರ ಮಹಾಮಂಡಳದ ನಿರ್ದೇಶಕ ವೈ.ಎನ್. ಶಂಕರೇಗೌಡ ಮಾತನಾಡಿದರು.

ವೇದಿಕೆಯಲ್ಲಿ ಶಿಕ್ಷಣ ತಜ್ಞರಾದ ಪ್ರೊ. ಎನ್.ಎನ್. ಪ್ರಹ್ಲಾದ್, ಪ್ರೊ. ಆರ್.ಎನ್. ಪದ್ಮನಾಭ ಪ್ರೊ. ವಿ. ಜಯಪ್ರಕಾಶ್, ಪ್ರೊ. ಕೆ. ಯಶೋಧರ, ಪ್ರೊ.ಎನ್. ಮಹದೇವಸ್ವಾಮಿ, ಪ್ರೊ. ಕೃ.ಪ. ಗಣೇಶ, ಜೈನಹಳ್ಳಿ ಸತ್ಯನಾರಾಯಣಗೌಡ, ಕಾರ್ಯದರ್ಶಿ ಎಚ್. ಬಾಲಕೃಷ್ಣ ಉಪಸ್ಥಿತರಿದ್ದರು.

ಶ್ರೀಲಂಕಾ ವಿರುದ್ಧ ಬಾಂಗ್ಲಾಗೆ 3 ವಿಕೆಟ್ ಜಯ



ದೆಹಲಿ, ನ.6– ಶಕೀಬ್ ಅಲ್ ಹಸನ್ ಅವರ ಆಲ್‌ರೌಂಡ್ ಆಟದ ನೆರವಿನಿಂದ ಬಾಂಗ್ಲಾದೇಶ ಶ್ರೀಲಂಕಾ ವಿರುದ್ಧ 3 ವಿಕೆಟ್‌ಗಳ ಜಯ ಸಾಧಿಸಿದೆ.

ಇಲ್ಲಿನ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ 49.3 ಓವರ್‌ಗಳಲ್ಲಿ 279 ರನ್‌ಗಳಿಗೆ ಆಲೌಟ್ ಆಯಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಕುಸಲ್ ಪೆರೇರಾ 4 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ನಂತರ 2ನೇ ವಿಕೆಟ್‌ಗೆ ಜೊತೆಯಾದ ಪಥುಮ್ ನಿಸ್ಸಾಂಕ ಹಾಗೂ ಕುಸಲ್ ಮೆಂಡೀಸ್ 62 ರನ್ ಜೊತೆಯಾಟವಾಡಿ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 19 ರನ್ ಗಳಿಸಿದ್ದ ಮೆಂಡೀಸ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ನಿಸ್ಸಾಂಕ 41ರನ್ ಗಳಿಸಿ ಔಟಾದರು. ಬಳಿಕ ಬಂದ ಸದೀರ ಸಮರವಿಕ್ರಮ ಕೂಡ 41 ರನ್ ಗಳಿಸಿದರು. ಈ ವೇಳೆ ಕ್ರೀಸ್‌ಗೆ ಆಗಮಿಸಬೇಕಾಗಿದ್ದ ಆಂಜಲೋ ಮ್ಯಾಥ್ಯೂಸ್ ಟೈಮ್ಡ್ ಔಟಾದರು. ಮತ್ತೊಂದೆಡೆ ಜವಾಬ್ದಾರಿಯುತ ಆಟವಾಡಿದ ಚರಿತ್ ಅಸಲಂಕ 105 ಎಸೆತಗಳಲ್ಲಿ 5 ಸಿಕ್ಸರ್, 6 ಬೌಂಡರಿ ಒಳಗೊಂಡ 108 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಧನಂಜಯ ಡಿಸಿಲ್ವ 34, ಮಹೇಶ್ ತೀಕ್ಷಣ 22 ರನ್ ಗಳಿಸಿದರು. ಬಾಂಗ್ಲಾ ಪರ ಶೋರಿಫುಲ್ ಇಸ್ಲಾಂ, ನಾಯಕ ಶಕೀಬ್ ಅಲ್ ಹಸನ್ ತಲಾ 2, ತಂಝಿಮ್ ಹಸನ್ ಸಾಕಿಬ್ 3, ಮೆಹಿದಿ ಹಸನ್ ಮಿರಾಜ್ 1 ವಿಕೆಟ್ ಉರುಳಿಸಿದರು.

280 ರನ್ ಗೆಲುವಿನ ಗುರಿ ಬೆನ್ನತ್ತಿದ ಬಾಂಗ್ಲಾದೇಶ 41.1 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 282 ರನ್ ಗಳಿಸಿ ಗೆಲುವು ಸಾಧಿಸಿತು. ತಂಡದ ಪರ ಲಿಟ್ಟನ್ ದಾಸ್ 23, ನಜ್ಮುಲ್ ಹೊಸೈನ್ ಶಾಂತೋ 90, ಶಕೀಬ್ ಅಲ್ ಹಸನ್ 82, ಮಹಮ್ಮದುಲ್ಲಾ 22, ತೌಹಿದ್ ಹೃದಯೋಯ್ 15 ರನ್ ಗಳಿಸಿದರು. ಶ್ರೀಲಂಕಾಪರ ದಿಲ್ಶಾನ್ ಮಧುಶಂಕ 3, ಮಹೇಶ್ ತೀಕ್ಷಣ, ಆಂಜಲೋ ಮ್ಯಾಥ್ಯೂಸ್ ತಲಾ 2 ವಿಕೆಟ್ ಪಡೆದರು. ಶಕೀಬ್ ಅಲ್ ಹಸನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಯ ಬೆನ್ನೆಲುಬು

ಸಹಕಾರ ತಜ್ಞ ಪ್ರೊ.ಮಹೇಂದ್ರ ಕುಮಾರ್ ಅಭಿಮತ

ಮೈಸೂರು,ನ.6(ಎಂಟಿವೈ)– ದೇಶದ ಜಿಡಿಪಿಯಲ್ಲಿ ಶೇ.13ರಷ್ಟು ಕೊಡುಗೆ ನೀಡುತ್ತಿರುವ ಸಹಕಾರ ಕ್ಷೇತ್ರ ದೇಶದ ಆರ್ಥಿಕತೆಗೆ ಬೆನ್ನೆಲುಬಾಗಿದೆ ಎಂದು ಸಹಕಾರ ತಜ್ಞ ಪ್ರೊ.ಎಸ್.ಮಹೇಂದ್ರ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಇಎಂಆರ್‌ಸಿ ಸಭಾಂಗಣದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯವು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಸೋಮವಾರ ಆಯೋಜಿಸಿದ್ದ 'ಸಹಕಾರ' ಕುರಿತ ಚರ್ಚಾಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಹಕಾರ ಕ್ಷೇತ್ರದಲ್ಲಿ ರೈತರು, ಕಾರ್ಮಿಕರು, ಶ್ರಮಿಕ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ವರ್ಗದವರನ್ನು ಸಹಕಾರ ಕ್ಷೇತ್ರ ಸ್ವಾವಲಂಬಿಗಳನ್ನಾಗಿ ರೂಪಿಸುತ್ತಿದೆ. ಸಧೃಡವಾಗಿರುವ ಸಹಕಾರ ಕ್ಷೇತ್ರ ದೇಶದ ಅರ್ಥ ವ್ಯವಸ್ಥೆಯನ್ನು ಗಟ್ಟಿಗೊಳಿಸುತ್ತಿದೆ. ಇದರಿಂದಾಗಿ ಜಿಡಿಪಿಯಲ್ಲಿ ಶೇ.13ರಷ್ಟು ಸಹಕಾರ ಕ್ಷೇತ್ರದಿಂದ ಕೊಡುಗೆ ಲಭಿಸುತ್ತಿದೆ. ಬ್ರಿಟನ್‌ನ ಮ್ಯಾಂಚೆಸ್ಟರ್‌ನಲ್ಲಿ ಆರಂಭವಾದ ಸಹಕಾರ ಸಂಘಗಳ ಆಲೋಚನೆ ಜಗತ್ತಿನ ಆರ್ಥಿಕ ಅಭಿವೃದ್ಧಿಗೆ ನೆರವಾಗಿದೆ ಎಂದರು.



ಕರ್ನಾಟಕದಲ್ಲಿ ಕೆಎಂಎಫ್, ಗುಜರಾತ್‌ನ ಅಮುಲ್ ಸೇರಿದಂತೆ ವಿವಿಧ ಹಾಲು ಒಕ್ಕೂಟಗಳು ಬಹುರಾಷ್ಟ್ರೀಯ ಕಂಪನಿಗಳಿಗೆ ಸವಾಲೊಡ್ಡುವಂತೆ ಬೆಳೆದು ನಿಂತಿವೆ. ಹೈನುಗಾರಿಕೆಯಷ್ಟೇ ಅಲ್ಲದೆ ಸಕ್ಕರೆ, ಖಾದಿ, ಸೆಣಬು, ಆಹಾರ ಧಾನ್ಯ, ರಸಗೊಬ್ಬರ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿಯೂ ಸಹಕಾರ ಸಂಘಗಳು ಸ್ಥಾಪಿಸಲಾಗಿದೆ.ರಾಜ್ಯದ ಉತ್ಪಾದನೆಯಾಗುತ್ತಿರುವ ನಂದಿನಿ ಉತ್ಪನ್ನಗಳು ಅಂತರರಾಷ್ಟ್ರೀಯ ಮನ್ನಣೆ ಗಳಿಸಿದೆ. ತಿರುಪತಿಯ ಲಡ್ಡು ತಯಾರಿಕೆಯಲ್ಲೂ ನಂದಿನಿ ತುಪ್ಪ ಬಳಸಲಾಗುತ್ತಿದೆ. ರೈತರನ್ನು ಸ್ವಾವಲಂಬಿಯಾಗಿ ಮಾಡಿದ್ದೇ ಸಹಕಾರ ಸಂಘಗಳು ಎಂದರು.

ಕಾರ್ಯಕ್ರಮದಲ್ಲಿ ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ.ಮಹದೇವನ್ ಮಾತನಾಡಿ, ದೇಶದ ಸಂಪತ್ತು ಕೆಲವೇ ವ್ಯಕ್ತಿಗಳ ಬಳಿ ಕ್ರೋಢೀಕರಣಗೊಳ್ಳುತ್ತಿದೆ ಎಂಬ ಆರೋಪ ಕೇಳಿ ಬಂದಿದೆ. ಇದರಿಂದ ಆರ್ಥಿಕ ಅಸಮಾನತೆ ಹೆಚ್ಚಾಗುತ್ತಿದೆ. ಶ್ರಮಕ್ಕೆ ಅನುಗುಣವಾಗಿ ವೇತನ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಶ್ರಮಿಕ ವರ್ಗಕ್ಕೆ ಅಗತ್ಯ ಸೌಲಭ್ಯ ಸಿಗಬೇಕು. ಉತ್ತಮ ಜೀವನ ನಡೆಸಲು ಶಿಕ್ಷಣ, ಆರೋಗ್ಯ ಸೇರಿದಂತೆ ಮೂಲ ಅವಶ್ಯಕಗಳನ್ನು ಪೂರೈಸಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಸಹಕಾರ ತತ್ವದಲ್ಲಿ ಎಲ್ಲರ ಅಭಿವೃದ್ಧಿ ಸಾಧ್ಯವಿದೆ. ಜನಸಂಖ್ಯೆಯೇ ಭಾರತದ ಸಂಪತ್ತಾಗಿದೆ. ಇಲ್ಲಿರುವ ಅಗಾಧ ಮಾನವ ಸಂಪನ್ಮೂಲವನ್ನು ಯೋಜಿತವಾಗಿ ಬಳಸಿಕೊಳ್ಳಬೇಕು. ಉದ್ಯೋಗ ಸೃಷ್ಟಿಯಾಗಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ರಾಜ್ಯ ಸಹಕಾರ ವ್ಯವಸ್ಥಾಪನಾ ಸಂಸ್ಥೆಯ ಪ್ರಾಂಶುಪಾಲ ಚಂದ್ರಶೇಖರ್, ಪ್ರೊ.ಎನ್.ಎಸ್.ಸುಷ್ಮಾ ಇದ್ದರು.

ಮೈಸೂರು ಮಿತ್ರ



ಹಳೇ ಗಂಡನ ಪಾದವೇ ಗತಿ...!?

ಗಾಣದ ಎಣ್ಣೆ ಮೊರೆ ಹೋಗುತ್ತಿರುವ ಜನ

● ಗಾಣದ ಎಣ್ಣೆ ಬಹುಪಯೋಗಿ ● ದುಬಾರಿಯಾದರೂ ಗಾಣದ ಎಣ್ಣೆ ಬಳಕೆ ● ರಕ್ತದೊತ್ತಡ, ಮಧುಮೇಹ, ಸಂಧಿನೋವಿಗೆ ರಾಮಬಾಣ ● ಪೌಷ್ಟಿಕಾಂಶವಿರುವ ಶುದ್ಧ ಎಣ್ಣೆ



ಬಾಪುಲಿಂಗರಾಜ್ ಅರಸ್

ಮೈಸೂರು, ನ.6– ಯಾವುದೇ ಆಹಾರ ಪದಾರ್ಥ ಖರೀದಿ ಮಾಡಿದರೂ ಅದರಲ್ಲಿ ರಾಸಾಯನಿಕ ಅಂಶ ಇದ್ದೇ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಕಲಬೆರಕೆ ಇಲ್ಲದ ಆಹಾರ ಪದಾರ್ಥ ಸಿಗುವುದೇ ಕಷ್ಟ. ಅಡುಗೆ ಎಣ್ಣೆ ದೇಹದ ಮೇಲೆ ನೇರ ಪರಿಣಾಮ ಬೀರಲಿದೆ. ಇತ್ತೀಚಿನ ದಿನಗಳಲ್ಲಿ ಅಡುಗೆ ಎಣ್ಣೆ ಬೆರಕೆ ಭೀತಿ ಎದುರಾಗಿದೆ. ಇದರಿಂದಲೇ ನಾನಾ ಕಾಯಿಲೆಗಳಿಗೆ ಜನ ತುತ್ತಾಗುತ್ತಿದ್ದಾರೆ ಎಂಬ ದೂರುಗಳು ಕೇಳಿಬರುತ್ತಿವೆ. ಆದ ಕಾರಣ ಈಗ ಜನ ಗಾಣದಿಂದ ತೆಗೆದ ಶುದ್ಧ ಎಣ್ಣೆ ಮೊರೆ ಹೋಗುತ್ತಿದ್ದಾರೆ.

ಮಾರುಕಟ್ಟೆಯಲ್ಲಿ ಹಲವು ಅಡುಗೆ ಎಣ್ಣೆ ದೊರೆಯುತ್ತಿವೆ. ಆದರೆ, ಎಲ್ಲಾ ಎಣ್ಣೆಗಳಲ್ಲಿ ರಾಸಾಯನಿಕ ಅಂಶವಿರುತ್ತದೆ. ಜೊತೆಗೆ ಕೆಲವು ಕಂಪನಿಗಳಿಂದ ಕಲಬೆರಕೆ ಎಣ್ಣೆಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂಬ ದೂರುಗಳಿವೆ. ಇದು ಶುದ್ಧವಲ್ಲದ ಎಣ್ಣೆ ಎಂದು ತಿಳಿದಿದ್ದರೂ ಜನರು ಅನಿವಾರ್ಯವಾಗಿ ಅದನ್ನೇ ಖರೀದಿಸಿ, ಸೇವಿಸುತ್ತಿದ್ದಾರೆ. ಇಂತಹ ರಾಸಾಯನಿಕ ಹಾಗೂ ಕಲಬೆರಕೆ ಎಣ್ಣೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ವೈದ್ಯರು ಎಚ್ಚರಿಸಿದ್ದಾರೆ. ಹಾಗಾಗಿ, ಈಗ ಜನರು ಗಾಣದ ಎಣ್ಣೆಗೆ ಮುಗಿಬಿದ್ದಿದ್ದಾರೆ.

ಗಾಣದ ಎಣ್ಣೆ ಹೊಸದೇನೂ ಅಲ್ಲ. ಹಿಂದೆ ಎತ್ತಿನ ಗಾಣದ ಹೊಸ ಅವತಾರವೇ ಇದು. ನಮ್ಮ ತಾತ-ಮುತ್ತಾತರ ಕಾಲದಲ್ಲಿ ಎಲ್ಲರೂ ಗಾಣದ ಶುದ್ಧ ಎಣ್ಣೆಯನ್ನೇ ಬಳಸುತ್ತಿದ್ದರು. ಅಡುಗೆ ಎಣ್ಣೆ, ಕೊಬ್ಬರಿ ಎಣ್ಣೆ, ಅರಳೆಣ್ಣೆ, ಹುಚ್ಚೆಳ್ಳೆಣ್ಣೆ, ಸೂರ್ಯಕಾಂತಿ ಎಣ್ಣೆ ಸೇರಿದಂತೆ ಎಲ್ಲಾ ರೀತಿಯ ಎಣ್ಣೆಯನ್ನು ಗಾಣದಲ್ಲಿ ತೆಗೆಯುತ್ತಿದ್ದರು. ಕಡ್ಲೆಕಾಯಿ, ಸೂರ್ಯಕಾಂತಿ, ಕೊಬ್ಬರಿ, ಅರಳು, ಹುಚ್ಚೆಳ್ಳು ಸೇರಿದಂತೆ ನಾನಾ ಎಣ್ಣೆ ಕಾಳುಗಳನ್ನು ತೆಗೆದುಕೊಂಡು ಹೋಗಿ, ಅಲ್ಲೇ ಕೂತು, ಗಾಣ ಆಡಿಸಿ, ಮನೆಗೆ ತರುತ್ತಿದ್ದರು.

ಗಾಣಕ್ಕೆ ಎತ್ತುಗಳ ಹೂಡಿದರೆ ಅವು ಸುತ್ತಲಾರಂಭಿಸುತ್ತಿದ್ದಂತೆ, ಉತ್ಪತ್ತಿಯಾದ ಎಣ್ಣೆಯನ್ನು ಭಟ್ಟಿ ಇಳಿಸಿ ನೀಡಲಾಗುತ್ತಿತ್ತು. ಜನ, ಯಾವುದೇ ಕಲಬೆರಕೆ ಹಾಗೂ ರಾಸಾಯನಿಕ ಅಂಶವಿಲ್ಲದ ಗಾಣದ ಎಣ್ಣೆಯನ್ನೇ ಬಳಸುತ್ತಿದ್ದರು.

ಗಾಣದಿಂದ ತಯಾರಿಸಿದ ಎಣ್ಣೆ ಶುದ್ಧ ಹಾಗೂ ಪೌಷ್ಟಿಕಾಂಶಯುಕ್ತವಾಗಿರುತ್ತಿತ್ತು. ಗಾಣದ ಎಣ್ಣೆಯಿಂದ ಅಡುಗೆ ಮಾಡಿದರೆ ತಿಂಡಿ-ತಿನಿಸುಗಳ ರುಚಿಯೂ ಮಸ್ತ್... ಮಸ್ತ್... ಗಾಣದಿಂದ ತೆಗೆದ ಅರಳೆಣ್ಣೆಯನ್ನು ದೀಪ ಬೆಳಗಿಸಲು, ಔಷಧಿಯಾಗಿ ಸೇವನೆ ಹಾಗೂ ತಲೆಗೆ ಹಚ್ಚುತ್ತಿದ್ದರು. ಈಗಲೂ ಶುದ್ಧ ಅರಳೆಣ್ಣೆಗೆ ಭಾರಿ ಡಿಮ್ಯಾಂಡ್ ಇದೆ. ತಲೆ ನೋವು ಸೇರಿದಂತೆ ಯಾವುದೇ ರೀತಿಯ ಬೇನೆಗಳಿಗೆ ಸಿದ್ಧೌಷಧಿ. ಜೊತೆಗೆ ಸೊಂಪಾದ ಕೂದಲು ಬೆಳವಣಿಗೆಗೂ ಸಹಕಾರಿ. ಹಲವು ರೀತಿಯ ಔಷಧಿ ತಯಾರಿಕೆಗೂ ಗಾಣದ ಎಣ್ಣೆಯನ್ನು ಬಳಸುತ್ತಿದ್ದರು.

ಶುದ್ಧ ಎಣ್ಣೆ ಸೇರಿದಂತೆ ರಾಸಾಯನಿಕ ಹಾಗೂ ಕಲಬೆರಕೆ ಮುಕ್ತ ಆಹಾರ ಸೇವನೆಯಿಂದಾಗಿಯೇ ನಮ್ಮ ಪೂರ್ವಜರು ಶತಾಯುಷಿಗಳಾಗಿ ಬಾಳಿದರು. ಗಾಣದ ಎಣ್ಣೆ ಬಳಸುತ್ತಾ ಬಂದವರು ಈಗಲೂ ಗಟ್ಟಿ ಮುಟ್ಟಾಗಿದ್ದಾರೆ. ಗಾಣದ ಎಣ್ಣೆ ಬಹುಪಯೋಗಿ ಹಾಗೂ ಪೌಷ್ಟಿಕಾಂಶದಿಂದ ಕೂಡಿರುತ್ತದೆ ಎಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ.

ಆದರೆ ಆಧುನಿಕ ಗಾಳಿಯಿಂದ ಬಹಳಷ್ಟು ಬದಲಾವಣೆಗಳಾಗಿವೆ. ದೃಶ್ಯ ಮಾಧ್ಯಮವೂ ಸೇರಿದಂತೆ ನಾನಾ ಜಾಹೀರಾತು ಆಕರ್ಷಣೆಯಲ್ಲಿ ಎಣ್ಣೆ ಕಂಪನಿಗಳು ತೋರಿಸುವ ಜಾಹೀರಾತಿಗೆ ಜನರು ಮಾರುಹೋಗಿದ್ದಾರೆ. ಅದೇ ಶುದ್ಧವಾದ ಎಣ್ಣೆ ಎಂದು ದುಬಾರಿ ಬೆಲೆ ಕೊಟ್ಟು ಖರೀದಿಸುತ್ತಿದ್ದಾರೆ. ಇದರಿಂದ ಹಲವು ಕಂಪನಿಗಳ ರಾಸಾಯನಿಕಯುಕ್ತ ಎಣ್ಣೆಗಳು ಗಾಣದ ಎಣ್ಣೆಯನ್ನು ಆಪೋಶನ ತೆಗೆದು ಕೊಂಡಿವೆ. ಈ ಹಿನ್ನೆಲೆಯಲ್ಲಿ ದಿನ ಕಳೆದಂತೆ ಗಾಣಗಳು ಮಾಯವಾದವು. ತೀರಾ ಹಳ್ಳಿಗಳಲ್ಲೇ ಈಗ ಗಾಣಗಳು ಕಾಣಸಿಗುವುದಿಲ್ಲ. ಈಗಿನ ಮಕ್ಕಳಿಗೆ ಗಾಣ ಹೇಗಿತ್ತು ಎಂಬುದನ್ನು ಚಿತ್ರ ತೋರಿಸಿ, ವಿವರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಹಳೇ ಮೈಸೂರು ಭಾಗದಲ್ಲಿ ಮರದ ಗಾಣಗಳು ಕಾಣಸಿಗದಿದ್ದರೂ ಉತ್ತರ ಕರ್ನಾಟಕದ ಕೆಲವು ಭಾಗದಲ್ಲಿ ಈಗಲೂ ಗಾಣಗಳು ಇನ್ನೂ ಉಳಿದಿವೆ.

ಆದರೆ ಈಗ ಜನರಿಗೆ ಹಿಂದಿನವರ ಪರಿಶುದ್ಧತೆ ಪರಿಜ್ಞಾನದ ಅರಿವಾಗಿದೆ. ಈಗ ಕಂಪನಿಗಳ ರಾಸಾಯನಿಕ ಹಾಗೂ ಕಲಬೆರಕೆ ಎಣ್ಣೆ ಸೇವನೆಯಿಂದ ಆರೋಗ್ಯದ ಮೇಲೆ ಆಗುತ್ತಿರುವ ದುಷ್ಪರಿಣಾಮ ಅರ್ಥವಾಗಿದೆ. ಈ ಕಾರಣದಿಂದ ಜನರು ಈಗ ಮತ್ತೆ ಗಾಣದ ಎಣ್ಣೆ ಖರೀದಿಗೆ ಮಾರುಹೋಗಿದ್ದಾರೆ.

ಈಗಲೂ ಕೂಡ ಗಾಣದ ಶುದ್ಧ ಎಣ್ಣೆ ಸಿಗುತ್ತದೆ. ಆದರೆ ಎತ್ತಿನ ಮರದ ಗಾಣದ ಬದಲು ವಿದ್ಯುತ್ ಬಳಕೆಯ ಗಾಣಗಳು ಬಂದಿದೆ. ವಿದ್ಯುತ್ ಗಾಣವಾದರೂ ಇವುಗಳಿಂದಲೂ ಶುದ್ಧ ಎಣ್ಣೆ ದೊರೆಯುತ್ತಿದೆ.

ಮೈಸೂರಿನ ದೇವಾಂಬ ಅಗ್ರಹಾರ, ಶಿವರಾಂಪೇಟೆ, ಅಗ್ರಹಾರ ಸೇರಿದಂತೆ ಹಲವು ಸ್ಥಳಗಳಲ್ಲಿ ವಿದ್ಯುತ್ ಗಾಣಗಳಿವೆ. ಬಹಳಷ್ಟು ಜನರು ವಿದ್ಯುತ್ ಗಾಣದಿಂದ ಎಣ್ಣೆ ಖರೀದಿಸುತ್ತಿದ್ದಾರೆ.

ದೇವಾಂಬ ಅಗ್ರಹಾರದ ಅಂಕಣ ಚೆಟ್ಟಿಯಾರ್, ಸುಂದರ್ ರಾಜ್, ಎತ್ತಿನ ಗಾಣ ನಡೆಸುತ್ತಿದ್ದರು. ಆದರೆ ಎತ್ತಿನ ಗಾಣದ ಜಾಗ ತಮ್ಮ ಕೈಬಿಟ್ಟ ಕಾರಣ ಈಗ ವಿದ್ಯುತ್ ಗಾಣ ನಡೆಸುತ್ತಿದ್ದಾರೆ.

ಕೊಬ್ಬರಿ ಎಣ್ಣೆ, ಅರಳೆಣ್ಣೆ, ಕಡ್ಲೆಕಾಯಿ ಎಣ್ಣೆ, ಎಳ್ಳೆಣ್ಣೆ, ಹುಚ್ಚೆಳ್ಳೆಣ್ಣೆ, ಸೂರ್ಯಕಾಂತಿ ಎಣ್ಣೆ ಸೇರಿದಂತೆ ಇತರೆ ಎಣ್ಣೆಗಳು ದೊರೆಯುತ್ತವೆ. ಕೊಬ್ಬರಿ, ಅರಳು, ಕಡ್ಲೆಕಾಯಿ ಬೀಜ ಸೇರಿದಂತೆ ಇತರೆ ಕಾಳುಗಳನ್ನು ತೆಗೆದುಕೊಂಡು ಹೋದರೆ ವಿದ್ಯುತ್ ಗಾಣದಿಂದ ಅಲ್ಲೇ ಅರೆದು ಶುದ್ಧವಾದ ಎಣ್ಣೆ ಕೊಡುತ್ತಾರೆ.

ಮಾಮೂಲಿ ಕಂಪನಿ ಎಣ್ಣೆಗಳಿಗಿಂತ ವಿದ್ಯುತ್ ಗಾಣದ ಎಣ್ಣೆಯ ಬೆಲೆ ದುಬಾರಿ. ಆದರೂ ಬಹಳಷ್ಟು ಜನರು ಆರೋಗ್ಯದ ದೃಷ್ಟಿಯಿಂದ ದುಬಾರಿ ಹಣ ಕೊಟ್ಟು ಗಾಣದ ಎಣ್ಣೆಯನ್ನೇ ಖರೀದಿಸುತ್ತಿದ್ದಾರೆ.

ಭಾರತ ದೇಶವು ಅತೀ ಹೆಚ್ಚು ಅಡುಗೆ ಎಣ್ಣೆಯನ್ನು ವಿದೇಶದಿಂದ ಆಮದು ಮಾಡಿಕೊಳ್ಳುತ್ತದೆ. ಆಗಸ್ಟ್ ತಿಂಗಳಲ್ಲಿ ಭಾರತವು 10.78 ಮೆಟ್ರಿಕ್ ಟನ್ ಅಡುಗೆ ಎಣ್ಣೆ ಆಮದು ಮಾಡಿಕೊಂಡಿತ್ತು. ಇಂಡೋನೇಷ್ಯಾ, ಮಲೇಷಿಯಾ, ಥೈಲ್ಯಾಂಡ್‌ನಿಂದ ಭಾರತಕ್ಕೆ ತಾಳೆ ಎಣ್ಣೆ ಆಮದಾದರೆ, ಬ್ರೆಜಿಲ್, ರಷ್ಯಾ, ಅರ್ಜೆಂಟೈನಾ ಹಾಗೂ ಉಕ್ರೇನ್‌ನಿಂದ ಸೋಯಾಬಿನ್ ಎಣ್ಣೆ ಆಮದಾಗುತ್ತದೆ.

ಎಣ್ಣೆಯಲ್ಲಿ ರಾಸಾಯನಿಕ ಅಂಶ ಹಾಗೂ ಕಲಬೆರಕೆ ಇದ್ದರೆ ಮನುಷ್ಯನ ಆರೋಗ್ಯದ ಮೇಲೆ ಅದು ನೇರ ಪರಿಣಾಮ ಬೀರುತ್ತದೆ. ಇದರಿಂದ ಬಹಳಷ್ಟು ರೋಗಗಳಿಂದ ಬಳಲುತ್ತಿದ್ದಾರೆ. ಈ ನಿಟ್ಟಿನಲ್ಲಿ ಕಲಬೆರಕೆ ಮುಕ್ತ ಎಣ್ಣೆಯ ಬಗ್ಗೆ ಇತ್ತೀಚೆಗೆ ಪರಿಣಾಮಕಾರಿ ಅಭಿಯಾನಗಳು ನಡೆಯುತ್ತಿದೆ.

ಈ ಕಾರಣದಿಂದಲೇ ಇತ್ತೀಚೆಗೆ ಸಿರಿ ಧಾನ್ಯಗಳ ಬಳಕೆ ಹೆಚ್ಚಾಗಿದೆ. ಜೊತೆಗೆ ರಾಸಾಯನಿಕ ಗೊಬ್ಬರ ಬಳಸದೆ ನೈಜ ಕೃಷಿಯಲ್ಲಿ ಬೆಳೆದ ಆಹಾರ ಪದಾರ್ಥಗಳಿಗೆ ಹೆಚ್ಚಿನ ಬೇಡಿಕೆ ಇದೆ. ಈ ಸಂದರ್ಭದಲ್ಲೇ ಗಾಣದ ಎಣ್ಣೆಗೆ ಬೇಡಿಕೆ ಇದೆ.

ಆದರೆ ಎಲ್ಲಾ ಗಾಣದ ಎಣ್ಣೆಯಲ್ಲಿ ಶುದ್ಧತೆ ಇದೆ ಎಂದು ಹೇಳಲು ಸಾಧ್ಯವಿಲ್ಲ. ಕೆಲವು ಗಾಣದಲ್ಲಿ ಕೂಡ ಕಲಬೆರಕೆ ಮಾಡಿರುವ ಸಾಧ್ಯತೆ ಇದೆ. ಈ ಕಾರಣದಿಂದ ಜನರು ಎಚ್ಚರಿಕೆಯಿಂದ ಇರುವುದು ಅತ್ಯವಶ್ಯವಾಗಿದೆ.

> ರೋಟರಿ ಮೆಷಿನ್ ಎಂಬ ವಿದ್ಯುತ್ ಗಾಣದಿಂದ ಎಣ್ಣೆ ತೆಗೆಯುತ್ತೇವೆ. ಇದು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಆದರೆ ಶುದ್ಧ ಎಣ್ಣೆ ದೊರೆಯುತ್ತದೆ ಎಂಬ ಕಾರಣದಿಂದ ಜನರು ಇಲ್ಲೇ ಬಂದು ಖರೀದಿ ಮಾಡುತ್ತಾರೆ. ನಮ್ಮ ತಾತ-ಮುತ್ತಾತನ ಕಾಲದಿಂದಲೂ ನಮ್ಮ ಮೂಲ ವೃತ್ತಿ ಗಾಣವೇ ಆಗಿದೆ. ಕೆಮಿಕಲ್ಸ್ ಇರುವ ಕಲಬೆರಕೆ ಎಣ್ಣೆಯಿಂದ ಅನಾರೋಗ್ಯ ಉಂಟಾಗುತ್ತಿದೆ ಎಂದು ಬಹಳಷ್ಟು ಜನರಿಗೆ ಈಗ ಮನವರಿಕೆಯಾಗಿದೆ. ಈ ಕಾರಣದಿಂದ ಜನರು ಈಗ ಗಾಣದ ಎಣ್ಣೆಯನ್ನೇ ಬಳಸುತ್ತಿದ್ದಾರೆ.
>
> – **ಎಸ್.ಎನ್.ಕೆ.ಅಂಕಣ ಚೆಟ್ಟಿಯಾರ್**, ಗಾಣದ ಎಣ್ಣೆ ತಯಾರಕ

> ಈಗಿನ ಕಂಪನಿಗಳ ಎಣ್ಣೆಯಲ್ಲಿ ರಾಸಾಯನಿಕ ಅಂಶ ಇರುತ್ತದೆ. ಜೊತೆಗೆ ಕಲಬೆರಕೆ ಇಲ್ಲದ ಎಣ್ಣೆ ಸಿಗುವುದು ಕಷ್ಟ. ಆದ ಕಾರಣ ನಾವು ದುಬಾರಿ ಬೆಲೆಯಾದರೂ ಸರಿ ಎಂದು ಗಾಣದ ಶುದ್ಧ ಎಣ್ಣೆಯನ್ನೇ ಬಳಸುತ್ತಿದ್ದೇವೆ. ಅಡುಗೆಗೆ, ತಲೆಗೆ, ಔಷಧಿ ತಯಾರಿಕೆಗೆ ಗಾಣದ ಎಣ್ಣೆಯನ್ನೇ ಬಳಕೆ ಮಾಡುತ್ತೇವೆ. ಗಾಣದ ಎಣ್ಣೆ ಬಿಟ್ಟು ಬೇರೆ ಎಣ್ಣೆಯನ್ನು ಈ ತನಕ ಬಳಸಿಲ್ಲ.
>
> – **ನಾಗೇಂದ್ರ**, ಮೈಸೂರು ವಾಸಿ


ಕಂಪನಿ ಎಣ್ಣೆ ಹಾಗೂ ಗಾಣದ ಎಣ್ಣೆ ಬಳಕೆಯಿಂದ ಆಗಿರುವ ವ್ಯತ್ಯಾಸವನ್ನು ಜನರು ಖಚಿತಪಡಿಸಿಕೊಂಡಿದ್ದಾರೆ. ಗಾಣದ ಎಣ್ಣೆ ಬಳಕೆಯಿಂದ ರಕ್ತದೊತ್ತಡ, ಮಧುಮೇಹ, ಸಂಧಿನೋವು ಸೇರಿದಂತೆ ಇತರೆ ಬೇನೆಗಳು ಇಲ್ಲದಂತಾಗಿದೆ. ಈ ಕಾರಣದಿಂದ ಸ್ವಾಸ್ಥ್ಯ, ಆರೋಗ್ಯ ಕಾಪಾಡಿಕೊಳ್ಳುವ ದೃಷ್ಟಿಯಿಂದ ಜನರು ಈಗ ಗಾಣದ ಎಣ್ಣೆಗೆ ಮುಗಿ ಬಿದ್ದಿದ್ದಾರೆ.

ಒಟ್ಟಾರೆ ಹಿಂದಿನ ವ್ಯವಸ್ಥೆಯ ಮಹತ್ವ ಏನು ಎಂಬುದು ಈಗಿನ ಜನರಿಗೆ ನಿಧಾನವಾಗಿ ಅರ್ಥವಾಗುತ್ತಿದೆ. ಇದರಿಂದ ಆಧುನಿಕತೆಯಲ್ಲಿ ಬಹಳಷ್ಟು ಬದಲಾವಣೆಗಳಾದರೂ ಹಿರಿಯರು ಅನುಸರಿಸುವ ಪದ್ಧತಿಯನ್ನೇ ನಿಧಾನವಾಗಿ ಅನುಕರಣೆ ಮಾಡುತ್ತಿದ್ದಾರೆ.

ಮೈಸೂರು ಜೈಲಲ್ಲಿ ಮೊಬೈಲ್ ಜಾಮರ್ ನಿಷ್ಕ್ರಿಯ

ಇದುವರೆಗೂ ಇದ್ದದ್ದು 2ಜಿ, 3ಜಿ ಆದರೆ ಸುಧಾರಿತ ತರಂಗಾಂತರಕ್ಕೆ ಬ್ರೇಕ್ ಇಲ್ಲ!

ಮೈಸೂರು, ನ. 6(ಬಿಎಲ್‌ಯು)– ಇಂದಿನ ಅಪರಾಧ ಜಗತ್ತಿನಲ್ಲಿ ಜೈಲಿನಲ್ಲಿದ್ದುಕೊಂಡೇ ಹೊರಗಿನ ಸಂಪರ್ಕ ಸಾಧಿಸಿ ಅಪರಾಧ ವೆಸಗುವುದು ಸರ್ವೇಸಾಮಾನ್ಯವಾಗಿದೆ. ಎಷ್ಟೋ ಪ್ರಕರಣಗಳಲ್ಲಿ ಜೈಲಿನಲ್ಲಿರುವ ಕ್ರಿಮಿನಲ್‌ಗಳು ಹೊರಗಿನ ತಮ್ಮ ಸಹಚರರ ಮೂಲಕ ಡೀಲ್‌ಗಳನ್ನು ನಡೆಸುತ್ತಿರುವುದು ಬಯಲಾಗಿದೆ. ಈ ಸಂಬಂಧ ಜೈಲಿನಲ್ಲಿರುವ ಕ್ರಿಮಿನಲ್‌ಗಳ ವಿರುದ್ಧ ಪ್ರಕರಣಗಳೂ ದಾಖಲಾಗಿವೆ.



ಮಾಫಿಯಾ ಡಾನ್‌ಗಳು, ಭಯೋತ್ಪಾದಕರು ಜೈಲಿನಲ್ಲೇ ಕುಳಿತು ಸ್ಕೆಚ್ ಸಿದ್ಧಪಡಿಸಿ, ಹೊರಗಿನವರ ಸಂಪರ್ಕದೊಂದಿಗೆ ವ್ಯವಸ್ಥಿತವಾಗಿ ಅಪರಾಧ ಕೃತ್ಯಗಳನ್ನೂ ಎಸಗುತ್ತಾರೆ. ಅಂತಹ ಪ್ರಕರಣಗಳು ದಾಖಲಾದರೂ ಕೂಡ ಆ ಸಂದರ್ಭದಲ್ಲಿ ಅವರು ಜೈಲಿನಲ್ಲಿದ್ದರು ಎಂಬ ಕಾರಣದಿಂದ ಕಾನೂನಿನ ಹಿಡಿತದಿಂದ ಸಲೀಸಾಗಿ ಬಚಾವಾಗುತ್ತಾರೆ. ಹೀಗಾಗಿ ಜೈಲಿನಲ್ಲಿರುವ ಕ್ರಿಮಿನಲ್‌ಗಳು ಹೊರಗಿನವರ ಮೂಲಕ ಅಪರಾಧ ಕೃತ್ಯಗಳನ್ನು ಎಸಗದಂತೆ ಜೈಲು ಆಡಳಿತ ಕೆಲವು ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳುತ್ತದೆ. ಉದಾಹರಣೆಗೆ ಜೈಲುವಾಸಿಗಳು ತಮ್ಮ ಸಂಬಂಧಿಕರಿಗೆ ಬರೆಯುವ ಪತ್ರಗಳನ್ನು ಜೈಲು ಅಧಿಕಾರಿಗಳು ಓದಿದ ನಂತರವೇ ಪೋಸ್ಟ್ ಮಾಡುತ್ತಾರೆ. ಅದೇ ರೀತಿ ಜೈಲುವಾಸಿಗಳಿಗೆ ಬರುವ ಪತ್ರಗಳನ್ನೂ ಕೂಡ ಅಧಿಕಾರಿಗಳು ಓದಿದ ನಂತರವೇ ಕೊಡುತ್ತಾರೆ. ಜೈಲುವಾಸಿಗಳನ್ನು ನೋಡಲು ಬರುವವರು ಮಾತನಾಡುವಾಗ ಅವರ ಬಳಿಯೇ ನಿಂತು ಮಾತುಗಳನ್ನು ಆಲಿಸುತ್ತಾರೆ. ಜೈಲುವಾಸಿಗಳಿಗೆ ಸಂಬಂಧಿಕರು ಹೊರಗಿನಿಂದ ನೀಡುವ ಪದಾರ್ಥಗಳನ್ನು ಪರಿಶೀಲನೆ ಮಾಡುತ್ತಾರೆ. ಈ ಕ್ರಮಗಳೆಲ್ಲವೂ ಜೈಲುವಾಸಿಗಳ ಸುರಕ್ಷತೆಗೆ ಮಾತ್ರವಲ್ಲದೇ ಜೈಲಿನಲ್ಲಿರುವ ಕ್ರಿಮಿನಲ್‌ಗಳು ಹೊರಗಿನವರೊಂದಿಗೆ ಸಂಪರ್ಕ ಬೆಳೆಸಿಕೊಂಡು ಅಪರಾಧ ಎಸಗುವುದನ್ನು ತಡೆಯಲು ಜೈಲು ಆಡಳಿತ ಮಾಡಿಕೊಂಡಿರುವ ವ್ಯವಸ್ಥೆ.

ಇದೆಲ್ಲವೂ ಹಳೇಯ ವ್ಯವಸ್ಥೆಗಳಾಗಿದ್ದು, ಈಗಿನ ತಂತ್ರಜ್ಞಾನ ಯುಗದಲ್ಲಿ ಕ್ರಿಮಿನಲ್‌ಗಳು ಮೊಬೈಲ್ ಮೂಲಕವೇ ಜೈಲಿನಿಂದ ಹೊರಗಿನವರ ಸಂಪರ್ಕ ಸಾಧಿಸಿ ದುಷ್ಕೃತ್ಯ ಎಸಗುವುದು ಸರ್ವೆ ಸಾಮಾನ್ಯವಾಗಿದೆ. ಕೆಲವೊಮ್ಮೆ ಜೈಲಿನಲ್ಲಿರುವಾತ ಮೊಬೈಲ್ ಮೂಲಕ ಹೊರಗಿನವರೊಂದಿಗೆ ಮಾತನಾಡಿರುವ ಆಡಿಯೋಗಳು ವೈರಲ್ ಆಗಿವೆ. ಹೀಗಾಗಿ ಕರ್ನಾಟಕದ ಜೈಲುಗಳಿಗೆ ಸುಮಾರು 5 ವರ್ಷದ ಹಿಂದೆ ಮೊಬೈಲ್‌ಗಳು ಕಾರ್ಯನಿರ್ವಹಿಸದಂತೆ ಜಾಮರ್‌ಗಳನ್ನು ಅಳವಡಿಸಲಾಗಿತ್ತು. ಆಗ ಇದ್ದದ್ದು 2ಜಿ ಮತ್ತು 3ಜಿ ಯುಗ. ಆದರೆ, ತಾಂತ್ರಿಕತೆ ಬೆಳವಣಿಗೆಯಿಂದ ಈಗ 5ಜಿ ಆಗಿದೆ. ಜೈಲುಗಳಲ್ಲಿ ಕ್ರಿಮಿನಲ್‌ಗಳು ಹೊರಗಿನ ಸಂಪರ್ಕ ಸಾಧಿಸಲು ಸಾಧ್ಯವಾಗದಂತೆ ಮೊಬೈಲ್ ಜಾಮರ್‌ಗಳನ್ನು ಅಳವಡಿಸಿತ್ತಾದರೂ, ಇಂದಿನ 5ಜಿ ಯುಗದಲ್ಲಿ ಜಾಮರ್‌ಗಳು ಕೆಲಸಕ್ಕೆ ಬಾರದಂತೆ ಆಗಿವೆ.

ಇದಕ್ಕೆ ಮೈಸೂರು ಕೇಂದ್ರ ಕಾರಾಗೃಹವೂ ಹೊರತಾಗಿಲ್ಲ. ಇಲ್ಲಿ ಅಳವಡಿಸಿರುವ ಜಾಮರ್‌ಗಳು ಕೆಲಸ ಮಾಡದ ಕಾರಣ ಜೈಲಿನಲ್ಲಿರುವ ಕ್ರಿಮಿನಲ್‌ಗಳು ಹೊರ ಜಗತ್ತಿನೊಂದಿಗೆ ಸಂಪರ್ಕ ಸಾಧಿಸಿ ದುಷ್ಕೃತ್ಯಗಳನ್ನು ಎಸಗಲು ಸಾಧ್ಯವಾಗುತ್ತಿದೆ. ಜೈಲಿನಲ್ಲಿರುವವರು ತಮ್ಮದೇ ಆದ ಜಾಲದ ಮೂಲಕ ಮೊಬೈಲ್‌ಗಳನ್ನು ಜೈಲಿಗೆ ತರಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಪೂರಕವೆಂಬಂತೆ ಪದೇ ಪದೇ ಜೈಲಿನಲ್ಲಿ ಮೊಬೈಲ್‌ಗಳು ಪತ್ತೆಯಾಗುತ್ತಿರುವ ಪ್ರಕರಣಗಳು ಮಂಡಿ ಪೊಲೀಸ್ ಠಾಣೆಯಲ್ಲಿ ವರದಿಯಾಗಿವೆ.

ಕ್ರಿಮಿನಲ್‌ಗಳು ತಮ್ಮ ಕೃತ್ಯಗಳನ್ನು ಎಸಗಲು ಕಾಲ ಕಾಲಕ್ಕೆ ಅಪ್‌ಡೇಟ್ ಆಗುತ್ತಿದ್ದಾರೆ. ಅದೇ ರೀತಿ ಕ್ರಿಮಿನಲ್‌ಗಳ ದುಷ್ಕೃತ್ಯಗಳನ್ನು ತಡೆಯುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳನ್ನು, ಸರ್ಕಾರವು ಕೂಡ ಕಾಲ ಕಾಲಕ್ಕೆ ಅಪ್‌ಡೇಟ್ ಮಾಡಬೇಕಾದ ಅನಿವಾರ್ಯತೆ ಇದೆ 650 ಕೈದಿಗಳ ಸಾಮರ್ಥ್ಯ ಹೊಂದಿರುವ ಮೈಸೂರು ಕೇಂದ್ರ ಕಾರಾಗೃಹದಲ್ಲಿ ಇರುವ 750 ಕೈದಿಗಳ ಮೇಲೆ ಬೆರಳೆಣಿಕೆಯಷ್ಟು ಇರುವ ಅಧಿಕಾರಿಗಳಿಂದ ಸದಾಕಾಲ ನಿಗಾ ವಹಿಸಲು ಸಾಧ್ಯವಾಗುವುದಿಲ್ಲ. ಕೈದಿಗಳು 20 ಎಕರೆ ವಿಸ್ತೀರ್ಣ ಹೊಂದಿರುವ ಜೈಲಿನ ಯಾವುದಾದರೂ ಒಂದು ಮೂಲೆಯಲ್ಲಿ ಅಥವಾ 5 ಎಕರೆ ವಿಸ್ತೀರ್ಣದಲ್ಲಿ ನಿರ್ಮಾಣವಾಗಿರುವ ಕಟ್ಟಡದ ಯಾವುದೇ ಭಾಗದಲ್ಲಿ ಮೊಬೈಲ್ ಅಡಗಿಸಿಟ್ಟು ತಮಗೆ ಬೇಕಾದಾಗ ಅದನ್ನು ಬಳಸಿಕೊಳ್ಳುವುದು ಸಲೀಸಾಗಿದೆ. ಸರ್ಕಾರವು ಈ ಜೈಲಿನಲ್ಲಿ 5ಜಿ ತರಂಗಗಳು ಕಾರ್ಯನಿರ್ವಹಿಸದಂತೆ ಜಾಮರ್ ಅಳವಡಿಸಿದ್ದರೆ, ಜೈಲುವಾಸಿಗಳು ಹೊರಗಿನರೊಂದಿಗೆ ಸಂಪರ್ಕ ಸಾಧಿಸಿ ದುಷ್ಕೃತ್ಯ ಎಸಗುವುದನ್ನು ತಪ್ಪಿಸಬಹುದು. ಆ ನಿಟ್ಟಿನಲ್ಲಿ ಸರ್ಕಾರ ಕಾರ್ಯೋನ್ಮುಖವಾಗಬೇಕಾದ ಅವಶ್ಯಕತೆ ಇದೆ.

> ಕೆಲವು ವರ್ಷಗಳ ಹಿಂದೆ ಮೈಸೂರು ಜೈಲಿನಲ್ಲಿ 2ಜಿ ಮತ್ತು 3ಜಿ ಮೊಬೈಲ್ ಜಾಮರ್‌ಗಳನ್ನು ಅಳವಡಿಸಲಾಗಿತ್ತು. ಈಗ ನಾವು 5ಜಿ ಯುಗದಲ್ಲಿದ್ದು ಆ ಜಾಮರ್‌ಗಳು ಸಂಪೂರ್ಣವಾಗಿ ನಿಷ್ಕ್ರಿಯಗೊಂಡಿವೆ. ಈವರೆಗೂ ಬಂಧೀಖಾನೆ ಇಲಾಖೆ ಈ ಜೈಲಿಗೆ 5ಜಿ ಸಾಮರ್ಥ್ಯದ ಜಾಮರ್ ಅಳವಡಿಸಿಲ್ಲ. ಮೈಸೂರು ಜೈಲು ಮಾತ್ರವಲ್ಲದೇ ಬೆಂಗಳೂರಿನ ಪರಪ್ಪನಅಗ್ರಹಾರ ಜೈಲು ಸೇರಿದಂತೆ ರಾಜ್ಯದ ಯಾವುದೇ ಜೈಲಿನಲ್ಲೂ 5ಜಿ ಸಾಮರ್ಥ್ಯದ ಜಾಮರ್ ಅಳವಡಿಸಿಲ್ಲ. ಆದರೆ ನಾವು ಜೈಲಿನೊಳಗೆ ಮೊಬೈಲ್ ಕೊಂಡೊಯ್ಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದೇವೆ.
>
> – **ರಮೇಶ್**, ಮೈಸೂರು ಕಾರಾಗೃಹದ ಹಿರಿಯ ಅಧೀಕ್ಷಕ

ಭಾರತದ ವಿರುದ್ಧ ಹೀನಾಯ ಸೋಲು

ಸಂಪೂರ್ಣ ಶ್ರೀಲಂಕಾ ಕ್ರಿಕೆಟ್ ಮಂಡಳಿ ವಜಾ

ಕೊಲಂಬೊ: ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ಭಾರತದ ವಿರುದ್ಧ ಶ್ರೀಲಂಕಾ ತಂಡವು ಹೀನಾಯ ಸೋಲು ಅನುಭವಿಸಿದ ನಂತರ ರಾಷ್ಟ್ರೀಯ ಕ್ರಿಕೆಟ್ ಮಂಡಳಿಯನ್ನು ವಜಾಗೊಳಿಸಿ ಶ್ರೀಲಂಕಾದ ಕ್ರೀಡಾ ಸಚಿವ ರೋಷನ್ ರಣಸಿಂಘೆ ಸೋಮವಾರ ಆದೇಶ ಹೊರಡಿಸಿದ್ದಾರೆ.

ಐಸಿಸಿ ಏಕದಿನ ವಿಶ್ವಕಪ್‌ನಲ್ಲಿ ಭಾರತದ ವಿರುದ್ಧ ಶ್ರೀಲಂಕಾ ತಂಡವು ಅವಮಾನಕಾರಿ ಸೋಲನನುಭವಿಸಿದ ಕೆಲ ದಿನಗಳ ಬಳಿಕ ಈ ಬೆಳವಣಿಗೆ ನಡೆದಿದೆ. 1996ರ ಏಕದಿನ ವಿಶ್ವಕಪ್ ವಿಜೇತ ತಂಡದ ನಾಯಕ ಅರ್ಜುನ ರಣತುಂಗ ಅವರನ್ನು ಮಂಡಳಿಯ ಮಧ್ಯಂತರ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ನವೆಂಬರ್ 2 ರಂದು ಮುಂಬೈನಲ್ಲಿ ಭಾರತದ ವಿರುದ್ಧ ನಡೆದ ಪಂದ್ಯದಲ್ಲಿ 358 ರನ್‌ಗಳ ಗುರಿ ಪಡೆದಿದ್ದ ಶ್ರೀಲಂಕಾ ತಂಡವು ಕೇವಲ 55 ರನ್‌ಗಳಿಗೆ ಸರ್ವಪತನ ಕಂಡು, 302ರನ್‌ಗಳ ಹೀನಾಯ ಸೋಲು ಅನುಭವಿಸಿತ್ತು.

ಈ ಸೋಲಿನಿಂದ ಕೆರಳಿದ್ದ ರಣಸಿಂಘೆ ಅವರು ಕ್ರಿಕೆಟ್ ಮಂಡಳಿಯ ಪದಾಧಿಕಾರಿಗಳ ವಿರುದ್ಧ ಕಿಡಿಕಾರಿದ್ದರು. ನಿಮಗೆ ಅಧಿಕಾರದಲ್ಲಿ ಉಳಿಯಲು ಯಾವುದೇ ನೈತಿಕ ಹಕ್ಕಿಲ್ಲ ಎಂದು ನುಡಿದಿದ್ದರು. ಅಲ್ಲದೆ ತಮ್ಮ ಹುದ್ದೆಗೆ ತಕ್ಷಣ ಸ್ವಯಂ ಪ್ರೇರಿತವಾಗಿ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದರು. ಇದೀಗ ಮಂಡಳಿಯನ್ನು ವಜಾಗೊಳಿಸಿ ಮಧ್ಯಂತರ ಅಧ್ಯಕ್ಷರನ್ನಾಗಿ ಅರ್ಜುನ ರಣತುಂಗ ಅವರಿಗೆ ಅಧಿಕಾರ ನೀಡಲಾಗಿದೆ.

ಏಷ್ಯಾಕಪ್ ಟೂರ್ನಿಯ ಫೈನಲ್ ಪಂದ್ಯದಲ್ಲಿಯೂ ಲಂಕಾ ತಂಡ ಭಾರತ ಎದುರು ಕೇವಲ 50 ರನ್‌ಗೆ ಆಲೌಟ್ ಆಗಿ ಹೀನಾಯ ಸೋಲು ಕಂಡಿತ್ತು ಈ ವೇಳೆಯೂ ರಣಸಿಂಘೆ ಅವರು ಕ್ರಿಕೆಟ್ ಮಂಡಳಿಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು. ಅಲ್ಲದೆ ಎಚ್ಚರಿಕೆಯನ್ನೂ ನೀಡಿದ್ದರು. ವಿಶ್ವಕಪ್‌ನಲ್ಲಿಯೂ ಇದೇ ಪ್ರದರ್ಶನ ಮುಂದುವರಿದ ಕಾರಣ ಮಂಡಳಿಯನ್ನೇ ವಜಾಗೊಳಿಸಲಾಗಿದೆ.

ಇದರ ಬೆನ್ನಲ್ಲೇ ಮಂಡಳಿಯ ಪದಾಧಿಕಾರಿಗಳ ವಿರುದ್ಧ ರಣಸಿಂಘೆ ಅವರು ಕಿಡಿಕಾರಿದ್ದರು. ಅಧಿಕಾರದಲ್ಲಿ ಉಳಿಯಲು ಅವರಿಗೆ ನೈತಿಕ ಹಕ್ಕಿಲ್ಲ ಎಂದು ನುಡಿದಿದ್ದ ಅವರು, ಕೂಡಲೇ ಅವರು ಸ್ವಯಂಪ್ರೇರಿತವಾಗಿ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದರು.

ವೈದ್ಯ ವಿದ್ಯಾರ್ಥಿಗಳ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕಕ್ಕೆ ಅದ್ಭುತ ಪ್ರತಿಕ್ರಿಯೆ

ಭವಿಷ್ಯದ ವೈದ್ಯರ ರಂಗಾಭಿನಯ ಪ್ರತಿಭೆ ಅನಾವರಣ



ಮೈಸೂರು, ನ.6(ಎಂಕೆ)– 'ನಾವು ಪ್ರೀತಿಸುವುದಕ್ಕಾಗಿಯೇ ಹುಟ್ಟಿದ್ದೇವೆ' ಎನ್ನುವ ಪ್ರೇಮಿಗಳ ಪ್ರೇಮಾಂಕುರಕ್ಕೆ ಶಿಳ್ಳೆ-ಚಪ್ಪಾಳೆಗಳ ಹೂ ಮಳೆ...!

ನಗರದ ಜೆ.ಕೆ.ಮೈದಾನದಲ್ಲಿರುವ ಅಮೃತ ಮಹೋತ್ಸವ ಸಭಾಂಗಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಹಾಗೂ ಶತಮಾನೋತ್ಸವ ಸಂಭ್ರಮದ ಹಿನ್ನೆಲೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಿದ್ಯಾರ್ಥಿಗಳ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕ ಪ್ರದರ್ಶನ ನೋಡುಗರ ಮನದಲ್ಲಿ ಹಾಸ್ಯ ಮತ್ತು ಪ್ರೇಮದ ಅಲೆ ಎಬ್ಬಿಸಿತು.

ಪ್ರಸಿದ್ಧ ನಾಟಕಕಾರ ವಿಲಿಯಂ ಷೇಕ್ಸ್‌ಪಿಯರ್ ರಚನೆ, ನಾಡೋಜ ನಿಸಾರ್ ಅಹಮದ್ ಕನ್ನಡಾನುವಾದ, ರಂಗಕರ್ಮಿ ದೀಪಕ್ ಮೈಸೂರು ವಿನ್ಯಾಸ ಮತ್ತು ಪರಿಕಲ್ಪನೆ, ಜೀವನ್‌ಕುಮಾರ್ ಹೆಗ್ಗೋಡು ನಿರ್ದೇಶನ, ಸಾಗರ್ ಎಸ್‌ಗುಂಬಳ್ಳಿ ಮತ್ತು ಎಸ್.ಪ್ರಜ್ವಲ್ ನೃತ್ಯ ಸಂಯೋಜನೆ, ಕೆ.ಆರ್.ಧನುಷ್ ಸಹಾಯ ಹಾಗೂ ಎಸ್.ದರ್ಶನ್ ಸಮರ್ಥ್ ಮತ್ತು ಎಸ್.ಶಿವಕುಮಾರ್ ನಿರ್ವಹಣೆಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಮನಮೋಹಕ ಅಭಿಯಾನ ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ಹಾಸ್ಯ ಮತ್ತು ಪ್ರೇಮ, ಪ್ರಣಯದ ಕಥಾ ಹಂದರವುಳ್ಳ 'ಎ ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ನಾಟಕ ಪ್ರದರ್ಶಿಸಿದ ವೈದ್ಯಕೀಯ ವಿದ್ಯಾರ್ಥಿಗಳು, ಕಲೆ, ಸಾಹಿತ್ಯ, ಸಂಗೀತ, ರಂಗಭೂಮಿಯಲ್ಲೂ ತಮಗಿರುವ ಆಸಕ್ತಿಯನ್ನು ಸಾಬೀತು ಮಾಡಿದರಲ್ಲದೆ ಕನ್ನಡ ಭಾಷಾಭಿಮಾನ ಮೆರೆದರು.

ಇದಕ್ಕೂ ಮುನ್ನ ನಾಟಕ ಪ್ರದರ್ಶನದ ಉದ್ಘಾಟನೆ ನೆರವೇರಿಸಿದ ಅಂಕಣಕಾರ ಬಿ.ಚಂದ್ರೇಗೌಡ ಮಾತನಾಡಿ, ಜನರ ಮನಸ್ಸನ್ನೇ ಕೇಂದ್ರೀಕರಿಸಿ ನಾಟಕಗಳನ್ನು ರಚನೆ ಮಾಡಿದ ವಿಲಿಯಂ ಷೇಕ್ಸ್‌ಪಿಯರ್ ಅವರ ಚಿಂತನೆ ಇಂದಿಗೂ ಪ್ರಸ್ತುತವಾಗಿವೆ. 16ನೇ ಶತಮಾನದಿಂದ ಇಲ್ಲಿಯವರೆಗೂ ಷೇಕ್ಸ್‌ಪಿಯರ್ ಅವರ ನಾಟಕಗಳು ಜನಮಾನಸವಾಗಲೂ ಮನುಷ್ಯರ ಮನಸ್ಸನು ಅರಿತು ಬರೆದದ್ದೆ ಕಾರಣ. ಆದ್ದರಿಂದ ಜಗತ್ತಿನ ನಾಟಕಕಾರರಲ್ಲಿ ಷೇಕ್ಸ್‌ಪಿಯರ್ ಮೊದಲಿಗರಾಗಿದ್ದಾರೆ ಎಂದು ಹೇಳಿದರು.

ಮೊದಲು ತಂದೆ-ತಾಯಿ ನೋಡಿದವರನ್ನೇ ಮದುವೆಯಾಗಬೇಕಾದ ವಾತಾವರಣವಿತ್ತು. ಆಧುನಿಕ ಯುಗದಲ್ಲಿ ಬದಲಾವಣೆಯಾಗುತ್ತಿದ್ದರೂ ಇಂದಿಗೂ ಜಾತಿ ಕಾರಣಕ್ಕೆ ಪ್ರೇಮಿಗಳ ಹತ್ಯೆಯಾಗುತ್ತಿದೆ. ಕೆಲ ದಿನಗಳ ಹಿಂದೆ ಕೋಲಾರದಲ್ಲಿ ತಂದೆಯೇ ತನ್ನ ಮಗಳನ್ನು ಕೊಲೆ ಮಾಡಿರುವುದು ಅತ್ಯಂತ ಕ್ರೌರ್ಯವಾಗಿದೆ. ಜಾತಿ ವ್ಯವಸ್ಥೆ ಮಾಡಿಕೊಂಡಿರುವ ಸಮಾಜದಲ್ಲಿ ಪ್ರೇಮ ವಿವಾಹ ಕಷ್ಟವೇ ಆದರೂ ನಿಸರ್ಗದ ನಿಯಮದಲ್ಲಿ ಇಷ್ಟ ಪಟ್ಟವರನ್ನು ಜಾತಿ-ಧರ್ಮವೆನ್ನದೆ ವಿವಾಹವಾಗುವುದು, ಜೊತೆಯಾಗಿ ಬದುಕುವುದು ಸರಿಯಾಗಿದೆ. ಎಲ್ಲದಕ್ಕೂ ಮನುಷ್ಯನ ಮನಸ್ಸೇ ಪ್ರಧಾನ ಎಂಬುದನ್ನು ಬರೆದದ್ದು ವಿಲಿಯಂ ಷೇಕ್ಸ್‌ಪಿಯರ್ ಎಂದು ತಿಳಿಸಿದರು.

ಪವಾಡ: ಸದಾ ಸೇವಾ ಕೆಲಸದಲ್ಲಿ ತೊಡಗಿರುವ ವೈದ್ಯಕೀಯ ವಿದ್ಯಾರ್ಥಿಗಳು ನಾಟಕ ಪ್ರದರ್ಶನ ನೀಡುತ್ತಿರುವುದು ಪವಾಡವಾಗಿದೆ. ಕಲೆ, ಸಾಹಿತ್ಯ, ನೃತ್ಯ, ನಾಟಕಗಳಲ್ಲಿ ನಮಗೂ ಆಸಕ್ತಿ ಇದೆ, ನಾವೂ ಕೂಡ ಸಕ್ರಿಯವಾಗಿ ಭಾಗವಹಿಸುತ್ತೇವೆ ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕರಾದ ಡಾ.ಕೆಆರ್. ದಾಕ್ಷಾಯಿಣಿ, ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿ ಡಾ.ಚಂದ್ರಶೇಖರ್, ಕಾಲೇಜು ಕನ್ನಡ ಸಂಘದ ಅಧ್ಯಕ್ಷ ಡಾ.ರವೀಂದ್ರನಾಥ್, ರಂಗಕರ್ಮಿ ದೀಪಕ್ ಮೈಸೂರು, ಶುಭ ಜಯರಾಮ್, ವೈದ್ಯಕೀಯ ವಿದ್ಯಾರ್ಥಿಗಳಾದ ಶಿವಕುಮಾರ್, ಅಭಿಷೇಕ್, ಚಂದನ್‌ರೆಡ್ಡಿ ಉಪಸ್ಥಿತರಿದ್ದರು.



ಇಂದು ಉಚಿತ ತಪಾಸಣೆ, ವಿಶೇಷ ಚಿಕಿತ್ಸಾ ಶಿಬಿರ

ಮೈಸೂರು,ನ.6– ಮೈಸೂರು ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿನ ಹೊರರೋಗಿ ಕಾಯ ಚಿಕಿತ್ಸಾ ವಿಭಾಗದಲ್ಲಿ ನ.7 ರಂದು ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರಿಗೆ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಒಂದು ದಿನದ ಮಧುಮೇಹ ಹಾಗೂ ಮಧುಮೇಹ ಜನ್ಯ ನರಗಳ ಸಮಸ್ಯೆಗಳಿಗೆ ಉಚಿತ ತಪಾಸಣೆ ಹಾಗೂ ಚಿಕಿತ್ಸೆ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ಡಾ. ಮೈತ್ರೇಯಿಆರ್.ಸಿ. ದೂಸಂ– 8618570803, ಡಾ. ಸುಜಯ್ ಕುಮಾರ್ ಎಂ.ಡಿ ದೂ.ಸಂ–9986083244, ಡಾ. ಭೀಮಾರೆಡ್ಡಿ ದೂ.ಸಂ–9740564173, ಡಾ.ಸಂಗೀತ ದೂ.ಸಂ– 8722240385, ಡಾ. ಹರ್ಷಿತ ದೂ.ಸಂ–8762322800 ಅನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ನ. 6– ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ನ. 9 ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಹುಣಸೂರು ತಾಲೂಕಲ್ಲಿ ಶೀಘ್ರ ಜನತಾ ದರ್ಶನ

• ಶಾಸಕ ಜಿ.ಡಿ. ಹರೀಶ್‌ಗೌಡ ಭರವಸೆ • ವಿವಿಧ ಗ್ರಾಮಗಳಲ್ಲಿ ಅಹವಾಲು ಸ್ವೀಕಾರ

ಹುಣಸೂರು.ನ.6–ಗ್ರಾಮೀಣ ಜನರು ಸಮಸ್ಯೆಗಳನ್ನು ಹೊತ್ತು ಸರ್ಕಾರಿ ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು, ಜನಸಾಮಾನ್ಯರ ಮನೆಯ ಬಾಗಿಲಿಗೆ ಹೋಗಿ ಸಮಸ್ಯೆಗಳನ್ನು ಪರಿಹರಿಸುವ ಉದ್ದೇಶದಿಂದ ಜನತಾ ದರ್ಶನವನ್ನು ಶೀಘ್ರದಲ್ಲೇ ಹಮ್ಮಿಕೊಳ್ಳಲಾಗುವುದು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ಹೇಳಿದರು.

ತಾಲೂಕಿನ ಕರ್ಣಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಸೋಮವಾರ ಭೇಟಿ ನೀಡಿ ಜನರ ಅಹವಾಲು ಆಲಿಸಿ ಮಾತನಾಡಿದ ಅವರು, ತಾಲೂಕಿನ ಹಲವಾರು ಗ್ರಾಮಗಳಲ್ಲಿ ಇ–ಸ್ವತ್ತು ಸಮಸ್ಯೆಯಿಂದ ರೈತರು ಮತ್ತು ಸಾರ್ವಜನಿಕರು ಜಮೀನುಗಳ ಮಾರಾಟ, ಖರೀದಿ ಹಾಗೂ ಬ್ಯಾಂಕ್‌ಗಳಲ್ಲಿ ಸಾಲಸೌಲಭ್ಯ ಪಡೆಯಲು ಆಗುತ್ತಿಲ್ಲ. ಆದ್ದರಿಂದ ತಾಲೂಕು ಅಧಿಕಾರಿಗಳು ಜನರು ಸಮಸ್ಯೆ ಪರಿಹರಿಸಲು ಮುಂದಾಗಬೇಕು ಎಂದು ತಿಳಿಸಿದರು.

ತಾಲೂಕಿನಲ್ಲಿ ಕೃಷಿ ಮತ್ತು ಅರಣ್ಯ ಭೂಮಿ ಕುರಿತು ಸಾಕಷ್ಟು ಗೊಂದಲಗಳಿದ್ದು, ಬಗರ್‌ಹುಕುಂ ಅರ್ಜಿ 57ರ ಸಮಸ್ಯೆಯನ್ನು ಪರಿಹರಿಸಬೇಕಿದೆ. ತಾಲೂಕಿನಲ್ಲಿ ಇನ್ನೂ ಹಲವು ಗ್ರಾಮಗಳಲ್ಲಿ ಗ್ರಾಮ ಒನ್ ಕೇಂದ್ರಗಳನ್ನು ತೆರೆಯಬೇಕು. ಸೂಕ್ತ ದಾಖಲೆಗಳನ್ನು ರೈತರಿಗೆ ನೀಡುವ ಮೂಲಕ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಲಾಗಿದೆ. ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ಮಳೆ ಇಲ್ಲದೇ ಬೆಳೆ ಹಾನಿಯಾಗಿದೆ.



ಸರ್ಕಾರದಿಂದ ಬೆಳೆ ಹಾನಿ ಪರಿಹಾರ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ ಎಂದರು.

ಜನತಾ ದರ್ಶನ ಕಾಟಾಚಾರವಾಗಬಾರದು: ಜನತಾ ದರ್ಶನ ಕಾಟಾಚಾರ ಎಂಬಂತೆ ಆಗಬಾರದು. ಮೂರು ದಶಕಗಳಿಂದ ಕಂದಾಯ ಇಲಾಖೆ ಸೇರಿದಂತೆ ಇತರ ಇಲಾಖೆಗಳ ಜ್ವಲಂತ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ತಾಲೂಕಿನಲ್ಲಿ ವಿಶೇಷವಾಗಿ ಸಮಾಜದ ಮುಖ್ಯವಾಹಿನಿಯಿಂದ ದೂರ ಉಳಿದ ರೈತ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಲಾಗುತ್ತಿದೆ. ಸಮಸ್ಯೆಗೆ ಸ್ಥಳದಲ್ಲಿಯೇ ಪರಿಹಾರ ಕಂಡುಕೊಳ್ಳಲು ಒತ್ತು ನೀಡಲಾಗಿದೆ. ಗ್ರಾಮ ಠಾಣಾ, ಪೋಡಿ, ಇ–ಸ್ವತ್ತು, ಸ್ಮಶಾನ ಜಾಗ, ಹದ್ದುಬಸ್ತು, ವಿಧವಾ, ವೃದ್ಧಾಪ್ಯ ವೇತನಗಳಂತಹ ಸೌಲಭ್ಯಗಳನ್ನು ನೇರವಾಗಿ ಜನರಿಗೆ ತಲುಪಿಸುವುದು ಜನತಾ ದರ್ಶನ ಕಾರ್ಯಕ್ರಮದ ಉದ್ದೇಶವಾಗಿದೆ. ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದಿನನಿತ್ಯ ನೂರಾರು ಅರ್ಜಿಗಳು ಬರುತ್ತಿವೆ. ಇವುಗಳನ್ನು ಪರಿಹರಿಸುವಂತೆ ತಾಲೂಕು ಆಡಳಿತ ಅಧಿಕಾರಿಗಳಿಗೆ ಶಾಸಕರು ತಿಳಿಸಿದರು.

ಇದಕ್ಕೂ ಮುನ್ನ ತಾಲೂಕಿನ ಕರ್ಣಕುಪ್ಪೆ ಗ್ರಾಪಂ ವ್ಯಾಪ್ತಿಯ ವಡ್ಡಿಮನುಗನಹಳ್ಳಿ, ಕಣಗಾಲು, ಹರೀನಹಳ್ಳಿ, ಕಲ್ಕಡ ಗ್ರಾಮಗಳಿಗೆ ಭೇಟಿ ನೀಡಿ ಶಾಸಕ ಜಿ.ಡಿ.ಹರೀಶ್ ಗೌಡ ಅವರನ್ನು ಗ್ರಾಮಸ್ಥರು ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ಬರಮಾಡಿಕೊಂಡರು.

ನಂತರ ತಾಲೂಕು ಆಡಳಿತದಿಂದ ಇ–ಸ್ವತ್ತು ಸಮಸ್ಯೆ ಬಗೆಹರಿಸಬೇಕು. ಬಗರ್‌ಹುಕುಂನ ನಮೂನೆ–57ರ ಸಮಸ್ಯೆ ಇತ್ಯರ್ಥಪಡಿಸಬೇಕು. ನಕಾಶೆ ಕಂಡ ದಾರಿಯಲ್ಲಿ ಕಾಲು ದಾರಿ, ಬಂಡಿ ದಾರಿ ಬಿಡಿಸಬೇಕು. ಸ್ಮಶಾನ ಒತ್ತುವರಿಯನ್ನು ತೆರವುಗೊಳಿಸಬೇಕು ಎಂದು ಗ್ರಾಮಸ್ಥರು ಶಾಸಕರಿಗೆ ಮನವಿ ಸಲ್ಲಿಸಿದರು. ಜೆಡಿಎಸ್ ಮುಖಂಡರಾದ ರಂಜಿತಾ ಚಿಕ್ಕಮಾದು, ಹರವೆ ಶ್ರೀಧರ್, ಪ್ರಭಾಕರ್, ಆರಾಧ್ಯ, ಗ್ರಾಪಂ ಮಾಜಿ ಅಧ್ಯಕ್ಷ ಪಾಪಣ್ಣ, ಪುಟ್ಟರಾಜು, ಸೋಮಶೇಖರ್, ಆನಂದ್, ನಟೇಶ್, ಪಿಡಿಓ ಪ್ರದೀಪ್, ಷಡಕ್ಷರಿ, ಹಾಗೂ ಯಜಮಾನರು ಹಾಜರಿದ್ದರು.

ಕಂದಾಯ ಇಲಾಖೆ ಮಾತೃ ಹೃದಯ ಇಲಾಖೆ



ಕೆ.ಆರ್.ನಗರ, ನ.6– ಕಂದಾಯ ಇಲಾಖೆ ಮಾತೃ ಹೃದಯದ ಇಲಾಖೆಯಾಗಿದ್ದು, ಎಲ್ಲಾ ಇಲಾಖೆ ಕಾರ್ಯಕ್ರಮಗಳನ್ನು ಕಂದಾಯ ಇಲಾಖೆಯಿಂದಲೇ ಮೊದಲು ಪ್ರಾರಂಭ ಮಾಡಲಾಗುವುದು ಎಂದು ತಹಶೀಲ್ದಾರ್ ಸಿ.ಎಸ್.ಪೂರ್ಣಿಮಾ ತಿಳಿಸಿದರು.

ಪಟ್ಟಣದ ಕುವೆಂಪು ಬಡಾವಣೆಯ ಶಾಹಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಮತ್ತು ಕಂದಾಯ ದಿನಾಚರಣೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಇಲಾಖೆಗಳಿಗಿಂತಲೂ ಕಂದಾಯ ಇಲಾಖೆ ಸರ್ವಶ್ರೇಷ್ಠ. ದಕ್ಷತೆ, ಪ್ರಾಮಾಣಿಕತೆಗೆ ಹೆಸರಾಗಿರುವ ಈ ಇಲಾಖೆ ವರ್ಷದ 365 ದಿನಗಳಲ್ಲೂ ಕರ್ತವ್ಯ ನಿರ್ವಹಿಸುತ್ತಿದೆ. ಕಂದಾಯ ದಿನಾಚರಣೆಯೊಂದಿಗೆ ಕನ್ನಡ ರಾಜ್ಯೋತ್ಸವ ಆಚರಿಸುವುದು ಹೆಮ್ಮೆಯ ವಿಷಯವಾಗಿದೆ ಎಂದರು.

ನಾಡಿನ ನೆಲ–ಜಲ, ಗಡಿಗಾಗಿ ತಮ್ಮ ಹೋರಾಟವನ್ನು ಮುಡುಪಾಗಿಟ್ಟ ಹಿರಿಯರ ಮಾರ್ಗದರ್ಶನದಲ್ಲಿ ನಾವುಗಳೆಲ್ಲರೂ ಪ್ರಾಮಾಣಿಕವಾಗಿ ಕನ್ನಡ ನಾಡನ್ನು ಕಟ್ಟಿ ಬೆಳೆಸೋಣ. ಕಂದಾಯ ಇಲಾಖೆಯನ್ನು ರಾಜ್ಯದಲ್ಲೇ ಅತ್ಯುತ್ತಮ ಇಲಾಖೆ ಎಂಬ ಹೆಗ್ಗಳಿಕೆಗೆ ಎಲ್ಲರೂ ದುಡಿಯೋಣ ಎಂದು ಕರೆ ನೀಡಿದರು.

ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹರೀಶ್ ಮಾತನಾಡಿ, ಬೇರೆ ಇಲಾಖೆಗಳಿಗಿಂತ ಕಂದಾಯ ಇಲಾಖೆ ಭಿನ್ನವಾಗಿದೆ. ಶಿಸ್ತಿಗೆ ಮತ್ತೊಂದು ಹೆಸರೇ ಕಂದಾಯ ಇಲಾಖೆಯಾಗಿದ್ದು, ಎಲ್ಲಾ ಜವಾಬ್ದಾರಿಯನ್ನು ಕಂದಾಯ ಇಲಾಖೆಯೇ ಹೊರುತ್ತದೆ. ಕನ್ನಡಿಗರಾದ ನಮಗೆ ರಾಜ್ಯೋತ್ಸವ ಹಾಗೂ ಕಂದಾಯ ದಿನಾಚರಣೆ ಎರಡೂ ಒಂದೇ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಗ್ರೇಡ್ 2 ತಹಶೀಲ್ದಾರ್ ಮೋಹನ್, ಬಾಲಸುಬ್ರಹ್ಮಣ್ಯ, ಶಿರಸ್ತೇದಾರ್‌ಗಳಾದ ಶಿವಕುಮಾರ್, ಅಸ್ಲಾಂ ಪಾಷಾ, ಉಪ ತಹಶೀಲ್ದಾರ್‌ಗಳಾದ ಮಹೇಶ್, ಮಂಜುನಾಥ್, ದೀಪಕ್, ಕೃಷ್ಣಮೂರ್ತಿ, ಶರತ್, ಧ್ರುವಕುಮಾರ್, ಸಣ್ಣಸ್ವಾಮಿ, ಶಶಿಕುಮಾರ್, ಭಾಸ್ಕರ್, ಚಿದಾನಂದ, ಸಂತೋಷ್, ಮಧು, ದೀಪಾಶ್ರೀ, ಐಶ್ವರ್ಯ, ಹಂಸಾ ಇನ್ನಿತರರು ಹಾಜರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಹಿರೀಕ್ಯಾತನಹಳ್ಳಿ: ಹುಣಸೂರು ತಾಲೂಕಿನ ಗಾವಡಗೆರೆ ವಿದ್ಯುತ್ ವಿತರಣಾ ಉಪಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣೆ ಕಾರ್ಯ ಹಮ್ಮಿಕೊಂಡಿರುವುದರಿಂದ ನ.7ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ವಿತರಣೆ ಉಪಕೇಂದ್ರ ವ್ಯಾಪ್ತಿಯ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಹಿರೀಕ್ಯಾತನಹಳ್ಳಿ, ಶಿರೇನಹಳ್ಳಿ, ಮೋದೂರು, ಚಿಟ್ಟಿಕ್ಯಾತನಹಳ್ಳಿ, ಹರವೆ, ರಾಮೇನಹಳ್ಳಿ, ಮೈಲಾಂಬೂರು, ಮಂಚಬಾಯನಹಳ್ಳಿ ಉಂಡವಾಡಿ, ಬಿಳಿಗೆರೆ, ಜಾಬಗೆರೆ, ಕೆರೆಯೂರು, ಶಂಕರೇಗೌಡನಕೊಪ್ಪಲು, ಕಳ್ಳಿಕೊಪ್ಪಲು, ಮಾರಗೌಡನಹಳ್ಳಿ, ಅಗ್ರಹಾರ, ಹೊನ್ನೇನಹಳ್ಳಿ, ಮರೂರು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಸೆಸ್ಕ್ ಎಇಇ ಸಿದ್ದಪ್ಪ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ: ನ್ಯಾಯಾಧೀಶ ಸತೀಶ



ಸರಗೂರು: ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧವಾಗಿದ್ದು, ಪೋಷಕರು ಇದನ್ನು ತಡೆಗಟ್ಟಲು ಮುಂದಾಗಬೇಕು ಎಂದು ಪ್ರಧಾನ ಸಿವಿಲ್ ಮತ್ತು ಜೆಎಂಎಫ್ ನ್ಯಾಯಾಧೀಶ ಕೆ.ಜಿ.ಸತೀಶ ತಿಳಿಸಿದರು.

ತಾಲೂಕಿನ ಕೆಬ್ಬೇಪುರ ಹಾಡಿಯ ಗಿರಿಜನ ಆಶ್ರಮ ಶಾಲೆಯಲ್ಲಿ ಪಟ್ಟಣದ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್, ತಾಲೂಕು ಕಾನೂನು ಸೇವೆಗಳ ಸಮಿತಿ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಬಿ.ಮಟಕೆರೆ ಗ್ರಾಮ ಪಂಚಾಯಿತಿ ಹಾಗೂ ಪ್ರಕೃತಿ ಗಿರಿಜನ ಮಹಿಳಾ ಒಕ್ಕೂಟದ ವತಿಯಿಂದ ಆಯೋಜಿಸಿದ್ದ ಬಾಲ್ಯವಿವಾಹ ತಡೆ ಕುರಿತ ಕಾನೂನು ಅರಿವು ಮತ್ತು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ನೀಡಲು ಪೋಷಕರು ಮುಂದಾಗಬೇಕು. ಸರ್ಕಾರ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಉಚಿತ ಸೌಲಭ್ಯ ನೀಡುತ್ತಿದ್ದು, ಇದರಿಂದ ಶಿಕ್ಷಣವಂತರನ್ನಾಗಿಸುವುದು ಎಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.


ಬಾಲ್ಯವಿವಾಹದಿಂದ ಹೆರಿಗೆ ವೇಳೆ ತಾಯಿ ಮತ್ತು ಮಕ್ಕಳ ಸಾವುಗಳು ಹೆಚ್ಚಾಗಿ ಸಂಭವಿಸುತ್ತಿರುವುದರಿಂದ ಅದನ್ನು ತಡೆಗಟ್ಟುವ ನಿಟ್ಟಿನಲ್ಲಿ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ. ಗ್ರಾಮಗಳಲ್ಲಿ ಯಾವುದೇ ಬಾಲ್ಯವಿವಾಹವಾಗುತ್ತಿದ್ದರೆ ತಕ್ಷಣ ಹತ್ತಿರದ ಠಾಣೆಯ ಪೊಲೀಸರ ಗಮನಕ್ಕೆ ತರುವ ಮೂಲಕ ಬಾಲ್ಯವಿವಾಹ ತಡೆಗಟ್ಟಲು ಎಲ್ಲರೂ ಕೈ ಜೋಡಿಸಬೇಕು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕಂದಾಯ, ಕಾರ್ಮಿಕ, ಶಿಕ್ಷಣ, ಆರೋಗ್ಯ, ಆರಕ್ಷಕ, ಗ್ರಾಮ ಮತ್ತು ಪಟ್ಟಣ ಪಂಚಾಯಿತಿಗಳ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ಸೇವೆ ಸಲ್ಲಿಸಲಾಗುತ್ತಿದೆ ಎಂದರು.

ಸ್ವಾಮಿ ವಿವೇಕಾನಂದ್‌ನ ಸಿಇಓ ಸವಿತಾ, ತಾಲೂಕು ಆರೋಗ್ಯಾಧಿಕಾರಿ ಡಾ.ಟಿ.ರವಿಕುಮಾರ್, ಆರಕ್ಷಕ ಉಪ ನಿರೀಕ್ಷಕ ನಂದೀಶ್ ಕುಮಾರ್, ನಿವೃತ್ತ ಐಪಿಎಸ್ ಅಧಿಕಾರಿ ಚಮನ್ ಲಾಲ್, ತಾಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಆಶಾ ಮಾತನಾಡಿದರು. ಇದೇ ವೇಳೆ ಬಾಲ್ಯವಿವಾಹ ತಡೆಗಟ್ಟುವಂತೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಚಂದ್ರಶೇಖರ್, ಗ್ರಾಪಂ ಅಧ್ಯಕ್ಷ ಅಜಿತ್ ಕುಮಾರ್, ಪಿಡಿಓ ಬಿ.ಭಾಗ್ಯ, ಗಿರಿಜನ ಆಶ್ರಮ ಶಾಲೆಯ ಮುಖ್ಯಶಿಕ್ಷಕ ಶಿವಲಿಂಗನಾಯಕ, ಹಾಡಿಯ ಮುಖಂಡರಾದ ಚಿಕ್ಕಯ್ಯ, ಮಾಚಮ್ಮ, ವಸಂತಮ್ಮ, ಮಾರಮ್ಮ, ಸ್ವಾಮಿ ವಿವೇಕಾನಂದ ಮೂವ್‌ಮೆಂಟ್‌ನ ಹಿರಿಯ ವ್ಯವಸ್ಥಾಪಕ ಡಾ.ಆರ್.ಅಭಿಷೇಕ್, ಎಸ್.ಸಂತೋಷ್, ವ್ಯವಸ್ಥಾಪಕ ಕೆ.ವೆಂಕಟಸ್ವಾಮಿ, ಸಿಬ್ಬಂದಿ ಹಾಜರಿದ್ದರು.

ಮಗುವಿನೊಂದಿಗೆ ತಂದೆ ಆತ್ಮಹತ್ಯೆಗೆ ಯತ್ನ

ಕೌಟುಂಬಿಕ ಕಲಹಕ್ಕೆ ಬೇಸತ್ತು ವಾಟರ್ ಟ್ಯಾಂಕ್ ಮೇಲೇರಿದ ಭೂಪ

ನಂಜನಗೂಡು, ನ.6–ಕುಡಿಯುವ ನೀರಿನ ಓವರ್‌ಹೆಡ್ ಟ್ಯಾಂಕ್ ಮೇಲೇರಿ ತನ್ನ ಮಗುವಿನೊಂದಿಗೆ ತಂದೆ ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ತಾಲೂಕಿನ ಕಸುವಿನಹಳ್ಳಿ ಗ್ರಾಮದಲ್ಲಿ ಸೋಮವಾರ ನಡೆದಿದೆ.



ಗ್ರಾಮದ ಕೃಷ್ಣಮೂರ್ತಿ (40) ತನ್ನ ಎರಡು ವರ್ಷದ ಗಂಡು ಮಗುವಿನೊಂದಿಗೆ ಓವರ್‌ಹೆಡ್ ಟ್ಯಾಂಕ್ ಮೇಲೇರಿ ಆತ್ಮಹತ್ಯೆಗೆ ಯತ್ನಿಸಿದ ಭೂಪ.

ಗಂಡ–ಹೆಂಡತಿ ನಡುವೆ ಕೌಟುಂಬಿಕ ಕಲಹ ಉಂಟಾಗಿದ್ದು, ಇದರಿಂದ ಬೇಸತ್ತ ಕೃಷ್ಣಮೂರ್ತಿ ಮಗುವಿನೊಂದಿಗೆ ಏಣಿ ಮೂಲಕ ವಾಟರ್ ಟ್ಯಾಂಕ್ ಮೇಲೇರಿದ್ದಾನೆ. ಗ್ರಾಮಸ್ಥರು ಕೆಳಗೆ ಇಳಿಯುವಂತೆ ಎಷ್ಟೇ ಹೇಳಿದರೂ ಯಾರ ಮಾತಿಗೂ ಕ್ಯಾರೆ ಎನ್ನದೆ ಈತ ಸಾಯುತ್ತೇನೆ ಎಂದು ಪಟ್ಟುಹಿಡಿದಿದ್ದ.

ಸ್ಥಳೀಯರು ತುರ್ತು ಸಹಾಯವಾಣಿ 112ಕ್ಕೆ ಕರೆ ಮಾಡಿ ಮಾಹಿತಿ ನೀಡಿದರು. ನಂತರ ಸ್ಥಳಕ್ಕೆ ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸ್ ಸಿಬ್ಬಂದಿ ಗಿರೀಶ್, ಚೇತನ್ ಭೇಟಿ ನೀಡಿ, ಆತನ ಸಮಸ್ಯೆ ಆಲಿಸಿ, ನಿನ್ನ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆ. ಮಗುವನ್ನು ಕರೆದುಕೊಂಡು ಕೆಳಗಡೆ ಇಳಿಯುವಂತೆ ಪೊಲೀಸರು ಮನವಿ ಮಾಡಿದರು.

ಪೊಲೀಸರ ಮನವಿಗೆ ಸ್ಪಂದಿಸಿದ ಕೃಷ್ಣಮೂರ್ತಿ, ಮಗುವಿನೊಂದಿಗೆ ಕೆಳಗಡೆ ಇಳಿದಿದ್ದಾನೆ. ಬಳಿಕ ಈತನನ್ನು ಪೊಲೀಸರು ವಶಕ್ಕೆ ಪಡೆದು ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವಿಚಾರಣೆ ನಡೆಸಿದ್ದಾರೆ.

ಬೆಳೆಗಾರರಿಂದ ಹೂವು ಖರೀದಿಸುವಂತೆ ಪ್ರತಿಭಟನೆ



ತಿ.ನರಸೀಪುರ: ಸುಗಂಧರಾಜ ಹೂವನ್ನು ಬೆಳೆಗಾರರಿಂದ ನೇರವಾಗಿ ಮಾರು ಕಟ್ಟೆಯ ಬೆಲೆಯಲ್ಲಿ ಖರೀದಿಸುವಂತೆ ಆಗ್ರಹಿಸಿ ಹೂವಿನ ಬೆಳೆಗಾರರು ಹಾಗೂ ರೈತರು ಸೋಮವಾರ ತಾಲೂಕಿನ ಕೆಂಪಯ್ಯನಹುಂಡಿ ಗ್ರಾಮದ ಜೋಡಿ ತುಂಬಲ ರಸ್ತೆಯ ನ್ಯಾಚುರಲ್ ಆ್ಯಂಡ್ ಎಸೆನ್ಷಿಯಲ್ ಕಾರ್ಖಾನೆ ಬಳಿ ಪ್ರತಿಭಟನೆ ನಡೆಸಿದರು.

ಕಾರ್ಖಾನೆಯ ಗೇಟ್ ಬಳಿ ಜಮಾಯಿಸಿದ ಪ್ರತಿಭಟನಾಕಾರರು, ಕಾರ್ಖಾನೆಯವರು ಏಜೆಂಟ್‌ರ ಮೂಲಕ ಈ ಭಾಗದ ರೈತರಿಂದ ಕೇವಲ ಶೇ.20.ರಷ್ಟು ಸುಗಂಧರಾಜ ಹೂವನ್ನು ಖರೀದಿಸುತ್ತಿದ್ದಾರೆ. ಉಳಿದ ಹೂವನ್ನು ಬೇರೆ ಕಡೆಯಿಂದ ಕಡಿಮೆ ಬೆಲೆಗೆ ಖರೀದಿಸುತ್ತಾರೆ. ಇದರಿಂದ ಈ ಭಾಗದಲ್ಲಿ ಹೂವು ಬೆಳೆಯುವ ರೈತರಿಗೆ ನಷ್ಟವಾಗುತ್ತಿದೆ. ಆದ್ದರಿಂದ ಬೆಳೆಗಾರರಿಂದ ಹೂವನ್ನು ನೇರವಾಗಿ ಖರೀದಿಸಬೇಕು ಎಂದು ಒತ್ತಾಯಿಸಿದರು.

ಕೆಲ ರೈತರಿಗೆ ಲಾಭ ಮಾಡಿಕೊಡಲು ಉಳಿದ ರೈತರಿಗೆ ಅನ್ಯಾಯ ಮಾಡುವುದು ಸರಿಯಲ್ಲ. ಕಾರ್ಖಾನೆಯವರು ತಮಿಳುನಾಡು ಹಾಗೂ ಇನ್ನಿತರ ಕಡೆಯಿಂದ ಹೂವನ್ನು ಖರೀದಿಸುತ್ತಿದ್ದು, ಸ್ಥಳೀಯ ರೈತರಿಗೆ ಮೋಸ ಮಾಡುತ್ತಿದ್ದಾರೆ. ನೆಪಮಾತ್ರಕ್ಕೆ ಕೆಲ ರೈತರಿಂದ 1000 ಕೆಜಿ ಹೂವನ್ನು ಮಾತ್ರ ಖರೀದಿಸಿ, ಉಳಿದ ಹೂವನ್ನು ಬೇರೆ ಕಡೆಯಿಂದ ತರುತ್ತಿದ್ದಾರೆ. ಇದರಿಂದ ಈ ಭಾಗದ ಬೆಳೆಗಾರರಿಗೆ ತೊಂದರೆಯಾಗುತ್ತಿದೆ. ಈ ಭಾಗದಲ್ಲಿ ಹೂ ಬೆಳೆಯುವ ರೈತರ ಹೂವನ್ನೇ ನೇರವಾಗಿ ಖರೀದಿಸಬೇಕು ಹಾಗೂ ಮಾರುಕಟ್ಟೆಯ ಬೆಲೆ ನೀಡಬೇಕು ಎಂದು ಆಗ್ರಹಿಸಿದರು.

ನಂತರ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಾರ್ಖಾನೆಯ ವ್ಯವಸ್ಥಾಪಕ ಹರಿಪ್ರಸಾದ್ ಮಾತನಾಡಿ, ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸಿ ಶನಿವಾರ ಹೂವಿನ ದರ ನಿಗದಿ ಮಾಡುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆ ಕೈ ಬಿಡಲಾಯಿತು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಿರಗಸೂರು ಶಂಕರ್, ಬಸವರಾಜು, ಬಿ.ಪಿ.ಪರಶಿವಮೂರ್ತಿ, ತರಕಾರಿ ನಿಂಗರಾಜು, ಉಮೇಶ್, ಅಪ್ಪಣ್ಣ, ವಾಚ್‌ಕುಮಾರ್, ಮಹದೇವಸ್ವಾಮಿ, ಸುಗಂಧರಾಜು ಹೂವಿನ ಬೆಳೆಗಾರರಾದ ಬೆನಕನಹಳ್ಳಿ ವಿಜಯ್‌ಕುಮಾರ್, ಬೆನಕನಹಳ್ಳಿ ಯೋಗೇಶ್, ಬಿಳುಗಲಿ ಮದನ್ ಕುಮಾರ್, ನಾಗೇಶ್, ಬಸಪ್ಪ, ವೆಂಕಟರಾಮು, ಹೆಳವರಹುಂಡಿ ಮಹದೇವ, ಶಂಭುದೇವನಪುರ ನಾಗೇಶ್, ರೇವಣ್ಣ, ಮಹದೇವಸ್ವಾಮಿ, ಮಂಜುನಾಥ್, ಮಾವಿನಹಳ್ಳಿ ಎಂ.ಬಿ.ಪುಟ್ಟಸ್ವಾಮಿ, ಬಿ.ಪ್ರಕಾಶ್, ಪವನ್ ಮತ್ತಿತರರು ಇದ್ದರು.

ನನ್ನ ಅನುದಾನದಲ್ಲೂ ಕೆರೆಗಳಿಗೆ ನೀರು: ಶಾಸಕ ಅನಿಲ್ ಚಿಕ್ಕಮಾದು

ಹೆಚ್.ಡಿ.ಕೋಟೆ, ನ.6–ಇಬ್ಜಾಲ್ ಏತ ನೀರಾವರಿ ಯೋಜನೆ ಮೂಲಕ ಕಬಿನಿ ನದಿಯಿಂದ ಕೆರೆಗಳಿಗೆ ನೀರು ತುಂಬಿಸುವ ಕಾರ್ಯ ಆರಂಭವಾಗಿದ್ದು, ನನ್ನ ಅನುದಾನದಲ್ಲೂ ಪೈಪ್‌ಲೈನ್ ಮಾಡಿಸಿ ಕೆಲ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಕಣಿಯನಹುಂಡಿ ಗ್ರಾಮದ ಬೆಟ್ಟಪ್ಪನಕೆರೆಗೆ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಹಿಂದೆ ಸಂಸದರಾಗಿದ್ದ ಆರ್. ಧ್ರುವನಾರಾಯಣ್ ಮತ್ತು ಶಾಸಕರಾಗಿದ್ದ ಚಿಕ್ಕಮಾದು ಅವರ ಶ್ರಮದಿಂದ ಹಂಪಾಪುರ ಹೋಬಳಿಯ 17 ಕೆರೆಗಳಿಗೆ ನೀರು ತುಂಬಿಸಲು ಇಬ್ಜಾಲ್ ಏತ ನೀರಾವರಿ ಯೋಜನೆ ಆರಂಭಿಸಲಾಯಿತು. ಇದರಿಂದ ಬೆಟ್ಟಪ್ಪನಕೆರೆ ಸಂಪೂರ್ಣವಾಗಿ ತುಂಬಿರುವುದರಿಂದ ಸ್ಥಳೀಯ ಮುಖಂಡರೊಂದಿಗೆ ಬಾಗಿನ ಅರ್ಪಿಸಲಾಗಿದೆ. ಈ



ಕೆರೆ ತುಂಬಿರುವುದರಿಂದ ಈ ಭಾಗದ ರೈತರಿಗೆ ಹೆಚ್ಚು ಅನುಕೂಲವಾಗಲಿದೆ. ಜತೆಗೆ ಅಂತರ್ಜಲ ವೃದ್ಧಿಯಾಗಿ ಕೃಷಿಗೂ ಅನುಕೂಲವಾಗಲಿದೆ ಎಂದರು.

ಯಾವುದೇ ಸರ್ಕಾರವಾಗಲಿ ರೈತರಿಗೆ ಅನುಕೂಲವಾಗುವ ಯೋಜನೆಗಳನ್ನು ರೂಪಿಸಬೇಕು ಮತ್ತು ಬೆಳೆಗಳಿಗೆ ಉತ್ತಮ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಬೇಕು. ಈಗಿನ ಏತ ನೀರಾವರಿ ಯೋಜನೆಯಿಂದ ಕೆಲ ಗ್ರಾಮಗಳ ಕೆರೆಗಳು ಕೈಬಿಟ್ಟುಹೋಗಿದ್ದು, ಅಂತಹ ಕೆರೆಗಳಿಗೂ ಮುಂದಿನ ದಿನಗಳಲ್ಲಿ ನೀರು ತುಂಬಿಸಲು ಕ್ರಮ ಕೈಗೊಳ್ಳಲಾಗುವುದು. ಹಾಗೆಯೇ ತಾಲೂಕಿನ ಜನರ ಸಮಸ್ಯೆಗಳನ್ನು ತಿಳಿಯಲು ಪ್ರತಿ ಗ್ರಾಮಗಳಲ್ಲೂ ಅಧಿಕಾರಿಗಳೊಂದಿಗೆ ಜನಸಂಪರ್ಕ ಸಭೆ ನಡೆಸಲಾಗುವುದು. ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು.

ಇದೇ ವೇಳೆ ಪ್ರೊ.ನಿ.ಗಿರೀಗೌಡ, ಮುಖಂಡರಾದ ಜಿ.ಬಿ.ಸರಗೂರು ನಟರಾಜ್, ಕ್ಯಾತನಹಳ್ಳಿ ನಾಗರಾಜು, ಚಿಕ್ಕೆರೆಯೂರು ಕೆಂಡಗಣ್ಣೇಗೌಡ, ವಿಎಸ್‌ಎಸ್‌ಎನ್ ಅಧ್ಯಕ್ಷ ಆನಂದ್, ಬೆಟ್ಟದಬೀಡು ನಾಗಣ್ಣ, ಗಣೇಶ್, ಮಂಜುನಾಥ್, ಕೆಂಪೇಗೌಡ, ಶಿಂಡೇನಹಳ್ಳಿ ಎಂ.ಗಿರೀಶ್, ಸಿದ್ದೇಗೌಡ, ಕೀರ್ತಿಕುಮಾರ್, ರಾಜಶೇಖರ್, ಕೃಷ್ಣೇಗೌಡ, ದೇವೇಗೌಡ, ಶಿವರಾಮ್, ಪಾಪೇಗೌಡ, ಅನುರಾಜ್ ಸಣ್ಣನಿಂಗೇಗೌಡ, ಕುನ್ನೇಗೌಡ, ಜಯರಾಮ್, ಪಿಡಿಓ ಪ್ರಶಾಂತ್, ಹೆಚ್.ಪಿ.ಸುದರ್ಶನ್, ರಾಜು, ಗ್ರಾಮಸ್ಥರು ಹಾಜರಿದ್ದರು.

> ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಯ ಬಹುಪಾಲು ಗ್ರಾಮಗಳು ಒಣಭೂಮಿ ಪ್ರದೇಶವಾಗಿದ್ದು, ಇಲ್ಲಿನ ರೈತರು ವ್ಯವಸಾಯ ಮಾಡಲು ಮಳೆ ಬಿಟ್ಟರೆ ಕೊಳವೆ ಬಾವಿಯೇ ನೀರಿನ ಮೂಲವಾಗಿದೆ. ಆದ್ದರಿಂದ ಶಾಸಕರು ಇಲ್ಲಿನ ಕೆರೆಗಳಿಗೂ ನೀರು ತುಂಬಿಸಲು ಕ್ರಮ ಕೈಗೊಳ್ಳಬೇಕು. ಹಲವಾರು ವರ್ಷಗಳಿಂದ ಉಳುಮೆ ಮಾಡುತ್ತಿರುವ ಪ್ರಾಮಾಣಿಕ ರೈತರಿಗೆ ಸಾಗುವಳಿ ವಿತರಿಸಿ ಖಾತೆ ಮಾಡಿಕೊಡಬೇಕು.
> –ಕೆ.ಈರೇಗೌಡ, ಮೈಮುಲ್ ನಿರ್ದೇಶಕ

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಟೈಗರ್ ನಾಗೇಶ್ವರ್ ರಾವ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಘೋಸ್ಟ್ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯಾರಿಯನ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭಗವತಿ ಕೇಸರಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಲಿಯೋ (ಕ)	2 ಪ್ರದರ್ಶನಗಳು
ರಾಜಕಮಲ್	
ಮಾ ಊರಿ ಪಾಲಿಮೆರಿ ಪಾರ್ಟ್–2 (ತೆ)	4 ಪ್ರದರ್ಶನಗಳು
ಸಂಗಂ	
ಟಗರುಫಲ್ಯ(ಕ)	4 ಪ್ರದರ್ಶನಗಳು
ಲಿಡೋ	
ಭಾವಪೂರ್ಣ (ಕ)	2 ಪ್ರದರ್ಶನಗಳು
ಲಿಯೋ (ತ)	2 ಪ್ರದರ್ಶನಗಳು
ತಿಬ್ಬಾದೇವಿ	
ಲಿಯೋ(ತ)	4 ಪ್ರದರ್ಶನಗಳು
ಪ್ರಭಾ	
ಟಿಆರ್‌ಪಿ ರಾಮ(ಕ)	2 ಪ್ರದರ್ಶನಗಳು
ಗರುಡ ಪುರಾಣ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟಗರುಪಲ್ಯ (ಕ): ಬೆ.10.45ಕ್ಕೆ, ಮ.1.20ಕ್ಕೆ, ರಾ.7.15ಕ್ಕೆ, ಲಿಯೋ (ತ): ಸಂ.4ಕ್ಕೆ, ಘೋಸ್ಟ್ (ಕ): ರಾ.9.50ಕ್ಕೆ.
ಸ್ಕ್ರೀನ್ 2	ಗರುಡ ಪುರಾಣ (ಕ): ಬೆ.10.50ಕ್ಕೆ, ಲಿಯೋ (ತ): ಮ.1.35ಕ್ಕೆ, ಯುಟಿ 69 (ಹಿಂ): ಸಂ.4.45ಕ್ಕೆ, ಕೀಡಾ ಕೋಲ (ತೆ): ರಾ.7.15ಕ್ಕೆ, ರಾ.9.45ಕ್ಕೆ
ಸ್ಕ್ರೀನ್ 3	12th ಫೇಲ್ (ಹಿಂ): ಬೆ.10.45ಕ್ಕೆ, ರಾ.7ಕ್ಕೆ, ಕ್ರೇಜಿ ಕೀರ್ತಿ (ಕ): ಮ.1.45ಕ್ಕೆ, ಟಗರುಪಲ್ಯ (ಕ): ಸಂ.4.15ಕ್ಕೆ, ಗರುಡನ್ (ಮ): ರಾ.9.55ಕ್ಕೆ.
ಸ್ಕ್ರೀನ್ 4	ಘೋಸ್ಟ್ (ಕ): ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಟಗರು ಪಲ್ಯ (ಕ): ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಘೋಸ್ಟ್ (ಕ): ಬೆ.10ಕ್ಕೆ, ಮ.12.55ಕ್ಕೆ, ಮ.3.50ಕ್ಕೆ, ಸಂ.6.45ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 2	ಟಗರುಪಲ್ಯ (ಕ): ರಾ.10.05ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಲಿಯೋ (ತ): ಮ.12.55ಕ್ಕೆ.
ಸ್ಕ್ರೀನ್ 3	ಕೀಡಾ ಕೋಲ (ತೆ): ಬೆ.9.55ಕ್ಕೆ, ಮ.3.25ಕ್ಕೆ, ಟಗರು ಪಲ್ಯ (ಕ): ಮ.12.35ಕ್ಕೆ, ಲಿಯೋ (ಕ): ಸಂ.6.05ಕ್ಕೆ, ಲಿಯೋ (ತ): ರಾ.9.30ಕ್ಕೆ.
ಸ್ಕ್ರೀನ್ 4	ಲಿಯೋ (ತ): ಬೆ.10.30ಕ್ಕೆ, ಟಗರುಪಲ್ಯ (ಕ): ಮ.1.55ಕ್ಕೆ, ಟಿ.ಆರ್.ಪಿ. ರಾಮ (ಕ): ಸಂ.4.45ಕ್ಕೆ, ಗರುಡನ್ (ಮ): ರಾ.7.30ಕ್ಕೆ, ಕೀಡಾ ಕೋಲ(ತೆ): ರಾ.10.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪರಿಶುದ್ಧಂ (ಕ): ಬೆ.10.30ಕ್ಕೆ, ಹನಿಮೂನ್ ಇನ್ ಬ್ಯಾಂಕಾಕ್(ಕ): ಮ.1.30ಕ್ಕೆ, ಧ್ವಂದ್ವ (ಕ): ಸಂ.4.20ಕ್ಕೆ, ಬನ್ ಟೀ (ಕ): ಸಂ.6.45ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಜವಾನ್ (ಹಿಂ): ಸಂ.4.15ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ದಿ ನನ್ 2 (ಇಂ): ಸಂ.4.45ಕ್ಕೆ, ಜವಾನ್ (ಹಿಂ): ರಾ.7ಕ್ಕೆ.
ಸ್ಕ್ರೀನ್ 4	ಜವಾನ್ (ಹಿಂ): ಬೆ.10.30ಕ್ಕೆ, ಸಪ್ತ ಸಾಗರದಾಚೆ ಎಲ್ಲೋ (ಕ): ಮ.1.45ಕ್ಕೆ, ಸಂ.4.45ಕ್ಕೆ, ದಿ ನನ್ 2 (ಇಂ): ರಾ.7.35ಕ್ಕೆ

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಭಗವಂತ್ ಕೇಸರಿ (ತೆ): ಮ.1.05ಕ್ಕೆ, ಮ.3.20ಕ್ಕೆ, ರಾ.10.30ಕ್ಕೆ, ಗಣಪತ್ (ಹಿಂ): ಬೆ.9.20ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ, ಘೋಸ್ಟ್ (ಕ): ಬೆ.9.30ಕ್ಕೆ, ಮ.12.25ಕ್ಕೆ, ಸಂ.4.30ಕ್ಕೆ, ರಾ.7.25ಕ್ಕೆ, ರಾ.10.20ಕ್ಕೆ, ಲಿಯೋ (ಕ): ಮ.12.15ಕ್ಕೆ, ಲಿಯೋ (ತ): ಬೆ.8.20ಕ್ಕೆ, ಮ.11.45ಕ್ಕೆ, ಮ.3.10ಕ್ಕೆ, ಸಂ.6.15ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಲಿಯೋ (ತ): ಬೆ.8.50ಕ್ಕೆ, ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ, ಟೈಗರ್ ನಾಗೇಶ್ವರ್ ರಾವ್ (ತೆ): ಬೆ.8.35ಕ್ಕೆ, ಮ.3.40ಕ್ಕೆ, ರಾ.9.40ಕ್ಕೆ, ಯಾರಿಯನ್ 2 (ಹಿಂ): ಬೆ.9.55ಕ್ಕೆ, ರಾ.7.20ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ತಿ.ನರಸೀಪುರ ತಾಲೂಕಿನ ಬಿಳಿಗೆರೆಹುಂಡಿ ಹಾಗೂ ಮನ್ನೆಹುಂಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಡಮಕ್ಕಳಿಗೆ ಕನ್ನಡ ರಾಜ್ಯೋತ್ಸವ ಅಂಗವಾಗಿ ತ್ರಿಷಿಕಾ ಫೌಂಡೇಷನ್ ವತಿಯಿಂದ ಉಚಿತ ಕಲಿಕಾ ಸಾಮಗ್ರಿಗಳನ್ನು ವಿತರಿಸಲಾಯಿತು. ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ವೈದ್ಯಕೀಯ ವಿಭಾಗದ ಅಧ್ಯಕ್ಷ ಡಾ.ಬಿ.ಪ್ರದೀಪ್, ನಿವೃತ್ತ ಕೆಎಂಎಫ್ ಜಂಟಿ ನಿರ್ದೇಶಕ ಎಂ.ಸಿದ್ದಾರ್ಥ, ಗುತ್ತಿಗೆದಾರ ಬಿಳಿಗೆರೆಹುಂಡಿ ಬಸವರಾಜು, ಮಹೇಶ್, ಡೇರಿ ಶಿವಣ್ಣ, ಆಟೋ ಪ್ರಮೋದ್, ದೇವರಾಜ್, ಐಬಿ ಶಿವು ಮತ್ತಿತರರಿದ್ದರು.



ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವಾಕ್ ಮತ್ತು ಶ್ರವಣ ವಿಭಾಗದ ಬಿಎಸ್ಸಿ ಪದವಿಯಲ್ಲಿ ಚಿನ್ನದ ಪದಕ ಪಡೆದ ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಹೋಬಳಿಯ ಶಿರಮಳ್ಳಿ ಗ್ರಾಮದ ಶಿಕ್ಷಕ ಲೋಕೇಶ್ ಪುತ್ರಿ ಎಲ್.ಹೇಮಲತಾಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪದವಿ ಪ್ರದಾನ ಮಾಡಿದರು.



ಕಡಕೊಳದ ಕನ್ನಡ ಗೆಳೆಯರ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಡಕೊಳ ಪಪಂ ಮುಖ್ಯಾಧಿಕಾರಿ ಶ್ರೀಮತಿ ದೀಪಾ ಧ್ವಜಾರೋಹಣ ನೆರವೇರಿಸಿದರು. ಸಂಘದ ಅಧ್ಯಕ್ಷ ಲಕ್ಷ್ಮಿಕಾಂತ್, ನಟರಾಜು, ವೇದಾಂತ್, ರಮೇಶ್, ಪುಟ್ಟಮಾದು, ನಂಜಪ್ಪಸ್ವಾಮಿ ನಾಯಕ, ವಿಶ್ವನಾಥ್, ರಂಗಸ್ವಾಮಿ, ಶಿವಪ್ಪ, ಡೈರಿ ಮಹದೇವು, ಗೌಡಿಕೆ ಮಹೇಶ್, ಜಿಪಂ ಮಾಜಿ ಸದಸ್ಯ ನಾರಾಯಣ್, ನಟೇಶ್ ಜವರೇಗೌಡ ಉಪಸ್ಥಿತರಿದ್ದರು.

ಸಿವಿಲ್ ನ್ಯಾಯಾಧೀಶರ ಹುದ್ದೆ ಪರೀಕ್ಷೆಗೆ ಉಚಿತ ತರಬೇತಿ



ಮೈಸೂರು, ನ. 6–ಸಿವಿಲ್ ನ್ಯಾಯಾಧೀಶರ ಹುದ್ದೆಯ ಪರೀಕ್ಷೆ ಅಭ್ಯರ್ಥಿಗಳಿಗೆ ಮೈಸೂರು ಜಿಲ್ಲಾ ವಕೀಲರ ಸಂಘ ಹಾಗೂ ಲಾ ಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ವತಿಯಿಂದ ಏರ್ಪಡಿಸಿದ್ದ 6 ದಿನದ ಉಚಿತ ತರಬೇತಿ ಶಿಬಿರಕ್ಕೆ ಮೈಸೂರು ನ್ಯಾಯಾಲಯದ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ಜಿಎಸ್ ಸಂಗ್ರೇಶಿ ಅವರು ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಒಂದನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರಾದ ಪುಟ್ಟಸ್ವಾಮಿ, ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರಾದ ಹೆಚ್.ಎನ್.ವೆಂಕಟೇಶ್, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಂ ಮಹದೇವಸ್ವಾಮಿ ಉಪಾಧ್ಯಕ್ಷರಾದ ಪುಟ್ಟಸಿದ್ದೇಗೌಡ ಸೇರಿ ಹಲವರು ಉಪಸ್ಥಿತರಿದ್ದರು. ಇದೇ ವೇಳೆ ಅಭ್ಯರ್ಥಿಗಳಿಗೆ ಲಾಗೈಡ್ ಬಳಗದ ವತಿಯಿಂದ ಉಚಿತ ಸ್ಟಡಿ ಮೆಟಿರಿಯಲ್ ನೀಡಲಾಯಿತು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಮೈಸೂರು ಜಿಲ್ಲಾ ಪ್ರಧಾನ ಸತ್ರ ನ್ಯಾಯಾಧೀಶರಾದ ಜಿ.ಎಸ್. ಸಂಗ್ರೇಶಿ ಅವರು, ಅಭ್ಯರ್ಥಿಗಳಿಗೆ ಹಲವು ಕಿವಿ ಮಾತು ಹೇಳಿದರು. ಸಿವಿಲ್ ನ್ಯಾಯಾಧೀಶರಾಗುವುದು, ಜಿಲ್ಲಾ ನ್ಯಾಯಾಧೀಶರಾಗುವುದು, ಹೈಕೋರ್ಟ್ ನ್ಯಾಯಾಧೀಶರಾಗುವುದು ಒಂದು ತಪಸ್ಸು. ಆ ತಪಸ್ಸು ಸಾಕಾರವಾಗಬೇಕಾದರೆ ಕಠಿಣ ಪರಿಶ್ರಮ ಅಗತ್ಯ. ಲಾಗೈಡ್ ವೆಂಕಟೇಶ್ ಹಾಗೂ ಜಿಲ್ಲಾ ವಕೀಲರ ಸಂಘ ಸಾಕಷ್ಟು ಶ್ರಮ ವಹಿಸಿ ಉತ್ಸಾಹದಿಂದ ಶಿಬಿರ ಆಯೋಜಿಸಿದ್ದಾರೆ. ಎಲ್ಲರೂ ಇದರ ಸದುಪಯೋಗಪಡಿಸಿ ಕೊಳ್ಳಿ ಎಂದು ಕಿವಿ ಮಾತು ಹೇಳಿದರು. ತಾವು ಯಾವ ರೀತಿ ಅಭ್ಯಾಸ ನಡೆಸುತ್ತಿದ್ದರು ಎಂಬುದನ್ನು ಅಭ್ಯರ್ಥಿಗಳಿಗೆ ಜಿ.ಎಸ್. ಸಂಗ್ರೇಶಿ ಅವರು ತಿಳಿಸಿದರು.

ಪಾಕ್‌ನಿಂದ 6,500 ಮಂದಿ ಅಫ್ಘನ್ನರ ಗಡಿಪಾರು

ಗಡಿಪಾರಾದವರ ಸಂಖ್ಯೆ 1.7 ಲಕ್ಷಕ್ಕೇರಿಕೆ

ಇಸ್ಲಾಮಾಬಾದ್: ಪಾಕಿಸ್ತಾನ ಇಂದು ಮತ್ತೆ 6,500 ಮಂದಿ ಅಫ್ಘನ್ನರನ್ನು ಗಡಿಪಾರು ಮಾಡಿದ್ದು, ಈ ವರೆಗೂ ಒಟ್ಟು 1,70,000 ಮಂದಿಯನ್ನು ಗಡಿಪಾರು ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೋಂದಣಿ ಮಾಡಿಕೊಳ್ಳದ ಎಲ್ಲಾ ವಿದೇಶಿ ಪ್ರಜೆಗಳಿಗೂ ನ.1 ರ ವೇಳೆಗೆ ದೇಶ ತೊರೆಯುವಂತೆ ಪಾಕ್ ಈ ಹಿಂದೆ ಗಡುವು ನೀಡಿತ್ತು. ಒಂದು ವೇಳೆ ಗಡುವು ಮೀರಿ ದೇಶದಲ್ಲೇ ಇದ್ದವರ ವಿರುದ್ಧ ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳುವ ಎಚ್ಚರಿಕೆಯನ್ನೂ ನೀಡಿತ್ತು. ಸೆ.17 ರಿಂದ ಈವರೆಗೂ ಒಟ್ಟು 1,74,358 ಮಂದಿ ಅಫ್ಘನ್ನರು ಪಾಕ್ ತೊರೆದಿದ್ದು, ಸ್ವಯಂಪ್ರೇರಿತ ರಾಗಿಯೂ ಕೆಲವು ವಾಪಸ್ ತೆರಳುತ್ತಿದ್ದಾರೆ. ಆದರೆ ಇವರ ಸಂಖ್ಯೆ ದಿನದಿಂದ ದಿನಕ್ಕೆ ಕುಸಿಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಗಡುವು ಮುಗಿದ ಕೂಡಲೇ ಗಡಿ ದಾಟುವಿಕೆಯಲ್ಲಿ ಅಪಾರ ಸಂಖ್ಯೆಯ ಅಕ್ರಮ ವಲಸಿಗರು ಇದ್ದರು. ಅದು ಈಗ ಕಡಿಮೆಯಾಗುತ್ತಿದೆ ಎಂದು ಅಫ್ಘನ್ ಪ್ರಜೆಗಳ ಸ್ವಯಂಪ್ರೇರಿತ ವಾಪಸಾತಿ ಪ್ರಕ್ರಿಯೆಯಲ್ಲಿ ತೊಡಗಿರುವ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಧಿಕೃತ ಮಾಹಿತಿಯ ಪ್ರಕಾರ, ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ 6,584 ಅಫ್ಘನ್ನರು ಭಾನುವಾರ ಪಾಕಿಸ್ತಾನದಿಂದ ನಿರ್ಗಮಿಸಿದ್ದಾರೆ. ಶನಿವಾರ, ಖೈಬರ್ ಪಖ್ತುಂಖ್ವಾ ಮತ್ತು ಪಂಜಾಬ್‌ನ ವಿವಿಧ ಜೈಲುಗಳಿಂದ 209 ಗಡೀಪಾರು ಮಾಡಿದವರನ್ನು, 46,936 ಪುರುಷರು, 35,507 ಮಹಿಳೆಯರು ಮತ್ತು 85,331 ಮಕ್ಕಳೊಂದಿಗೆ ವಾಪಸ್ ಕಳುಹಿಸಲಾಗಿದೆ.

ಪ್ರತಿಮಾ ಕೊಲೆ ಪ್ರಕರಣ: ನವೆಂಬರ್ 15ರವರೆಗೆ

ಪೊಲೀಸ್ ಕಸ್ಟಡಿಗೆ ಆರೋಪಿ ಕಿರಣ್



ಬೆಂಗಳೂರು: ಸಾಕಷ್ಟು ಸುದ್ದಿಗೆ ಗ್ರಾಸವಾಗಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ ಪ್ರತಿಮಾ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಕಿರಣ್‌ಗೆ ನವೆಂಬರ್ 15ರವರೆಗೆ ಪೊಲೀಸ್ ಕಸ್ಟಡಿಗೆ ಬೆಂಗಳೂರಿನ 2ನೇ ಎಸಿಎಂಎಂ ಕೋರ್ಟ್ ಆದೇಶಿಸಿದೆ.

ಪ್ರತಿಮಾ ಅವರ ಮಾಜಿ ಕಾರು ಚಾಲಕ ಕಿರಣ್‌ನನ್ನು ಬೆಂಗಳೂರು ಪೊಲೀಸರು ಬಂಧಿಸಿದ್ದು ಇಂದು ಕೋರ್ಟ್ ಮುಂದೆ ಹಾಜರು ಪಡಿಸಿದ್ದರು. ಇನ್ನು ಆರೋಪಿಯನ್ನು 11 ದಿನಗಳ ಕಾಲ ಕಸ್ಟಡಿಗೆ ನೀಡುವಂತೆ ಮನವಿ ಮಾಡಿದ್ದರು. ಆದರೆ ಕೋರ್ಟ್ 10 ದಿನಗಳ ಕಾಲ ಕಸ್ಟಡಿಗೆ ನೀಡಿದೆ.

ಸುಬ್ರಮಣ್ಯಪುರ ಪೊಲೀಸರು ಪ್ರತಿಮಾ ಕೊಲೆಗೆ ಸಂಬಂಧಿಸಿದಂತೆ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದು ಈ ವೇಳೆ ತಾನೇ ಕೊಲೆ ಮಾಡಿರುವುದಾಗಿ ಕಿರಣ್ ಒಪ್ಪಿಕೊಂಡಿದ್ದಾನೆ ಎಂದು ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ರಾಹುಲ್ ಕುಮಾರ್ ಸ್ಪಷ್ಟಪಡಿಸಿದ್ದಾರೆ. ಪೊಲೀಸ್ ವಿಚಾರಣೆ ವೇಳೆ ಪ್ರತಿಮಾ ಒಂದು ವಾರದ ಹಿಂದೆ ಕಿರಣ್‌ನನ್ನು ಕೆಲಸದಿಂದ ತೆಗೆದಿದ್ದರು. ಕೆಲ ವಿಚಾರಗಳಿಗೆ ಪ್ರತಿಮಾ ಮತ್ತು ಕಿರಣ್ ನಡುವೆ ಭಿನ್ನಾಭಿಪ್ರಾಯ ಬಂದಿತ್ತು ಎಂದು ಹೇಳಲಾಗಿದೆ. ಕೆಲಸದಿಂದ ವಜಾಗೊಳಿಸಿದ್ದಕ್ಕೆ ಕೋಪಗೊಂಡಿದ್ದ ಕಿರಣ್ ಈ ಕೃತ್ಯ ವೆಸಗಿದ್ದಾರೆ ಎಂದು ಹೇಳಿದ್ದಾರೆ.

ಬೆಂಗಳೂರಿನ ಸುಬ್ರಹ್ಮಣ್ಯ ಪುರ ಪೊಲೀಸ್ ಠಾಣೆ ವ್ಯಾಪ್ತಿಯ ದೊಡ್ಡಕಲ್ಲಸಂದ್ರದ ಗೋಕುಲ್ ಅಪಾರ್ಟ್‌ಮೆಂಟ್‌ನಲ್ಲಿ ಗಣಿ–ಭೂವಿಜ್ಞಾನ ಇಲಾಖೆಯ ಅಧಿಕಾರಿ ಪ್ರತಿಮಾ ಒಬ್ಬರೇ ವಾಸಿಸುತ್ತಿದ್ದರು. ಕಳೆದ ರಾತ್ರಿ ಮಹಿಳಾ ಅಧಿಕಾರಿ ಒಬ್ಬರೇ ಇದ್ದಾಗ ದುಷ್ಕರ್ಮಿಗಳು ಬಂದು ಕೊಲೆ ಮಾಡಿ ಪರಾರಿಯಾಗಿದ್ದರು.

ಸರ್ಕಾರದ ವೈಫಲ್ಯವೇ ಕಾರಣ: ಕಾಂಗ್ರೆಸ್ ಸರ್ಕಾರದಲ್ಲಿ ಅಧಿಕಾರಿಗಳಿಗೆ, ಜನಸಾಮಾನ್ಯರಿಗೆ ರಕ್ಷಣೆ ಇಲ್ಲ. ರಾಜ್ಯದ ಹಿರಿಯ ಅಧಿಕಾರಿನ್ನು ಮನೆಗೆ ನುಗ್ಗಿ ಹತ್ಯೆ ಮಾಡಿದ್ದಾರೆ ಅಂದರೆ ಇವರ ಉದ್ಧಟತನ ಎಷ್ಟಿದೆ ಅಂತ ಗೊತ್ತಾಗುತ್ತಿದೆ. ಈ ಘಟನೆಗೆ ಸರ್ಕಾರದ ವೈಫಲ್ಯವೇ ಕಾರಣ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಗಣಿ ಮತ್ತು ಭೂವಿಜ್ಞಾನ ಅಧಿಕಾರಿ ಪ್ರತಿಮಾ ಹತ್ಯೆ ವಿಚಾರದ ಕುರಿತು ಚನ್ನಪಟ್ಟಣದಲ್ಲಿ ಮಾತನಾಡಿದ ಅವರು, ಇಂತಹ ವಾತಾವರಣ ನಿರ್ಮಾಣ ಆದರೆ ಯಾವ ಅಧಿಕಾರಿ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯ? ಸಮಾಜಘಾತುಕ ಶಕ್ತಿಗಳಿಗೆ ಯಾವುದೇ ಲಂಗುಲಗಾಮು ಇಲ್ಲದಂತಾಗಿದೆ. ಇದರಲ್ಲಿ ಗೃಹ ಇಲಾಖೆಯ ವೈಫಲ್ಯ ಎದ್ದು ಕಾಣುತ್ತಿದೆ. ಯಾವ ಯಾವ ಭಾಗದಲ್ಲಿ ಏನೇನು ನಡೆಯುತ್ತದೆ ಎಂದು ಪೊಲೀಸ್ ಇಲಾಖೆಗೆ ಮಾಹಿತಿ ಇರುತ್ತದೆ. ಆದರೂ ಅಧಿಕಾರಿಗಳು ಸ್ವತಂತ್ರವಾಗಿ ಕೆಲಸ ಮಾಡುವ ವಾತಾವರಣ ಇಲ್ಲ ಎಂದು ಕಿಡಿಕಾರಿದರು. ಸರ್ಕಾರವೇ ವರ್ಗಾವಣೆ ಮಾಡಿ ಹಣ ವಸೂಲಿ ಮಾಡುತ್ತಾ ನಿಂತಿದ್ದರೆ ಅಧಿಕಾರಿಗಳು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಾರಾ? ಸರ್ಕಾರದ ನಡೆಯಿಂದಲೇ ಇಂತಹ ಘಟನೆ ಜರುಗುತ್ತಿದೆ. ಸರ್ಕಾರ ಈ ಘಟನೆ ಬಗ್ಗೆ ಕಠಿಣವಾದ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಐದು ದಿನಗಳ ಕನ್ನಡ ಹಬ್ಬಕ್ಕೆ ತೆರೆ ; ಕನ್ನಡ–ಕರ್ನಾಟಕದ ಬಗ್ಗೆ ಪ್ರಜ್ಞಾಪೂರಕವಾಗಿ ತಿಳಿದುಕೊಳ್ಳಲು

ವಾಸ್ತವಾಂಶ ಮರೆಮಾಚಿ ಇತಿಹಾಸ ಬರೆದವರನ್ನು ಪ್ರಶ್ನಿಸಬೇಕು

ಇತಿಹಾಸಕೋರರು ನಮಗೆ ದಾರಿ ತಪ್ಪಿಸಿದ್ದಾರೆ; ನಟಿ ಮಾಳವಿಕ ಅವಿನಾಶ್



ಮೈಸೂರಿನ ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ಕನ್ನಡ ಹಬ್ಬ–2023'ರ (ಐದು ದಿನಗಳ ಉತ್ಸವ) ಸಮಾರೋಪ ಸಮಾರಂಭದಲ್ಲಿ 'ಕರ್ನಾಟಕ ವೈಭವ' ಪುಸ್ತಕ ಬಿಡುಗಡೆ ಮಾಡಲಾಯಿತು.

ಮೈಸೂರು,ನ.6(ಪಿಎಂ)– ಕರ್ನಾಟಕ–ಕನ್ನಡದ ಬಗ್ಗೆ ತಿಳಿದುಕೊಳ್ಳುವಂತಹ ಪ್ರಜ್ಞಾವಂತಿಕೆ ಬೆಳೆಸಿಕೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ವಾಸ್ತವಾಂಶ ಮರೆಮಾಚಿ ತಮಗೆ ಬೇಕಾದಂತೆ ಇತಿಹಾಸ ರಚಿಸಿದವರನ್ನು ಪ್ರಶ್ನಿಸಬೇಕಿದೆ. ತಪ್ಪಾದ ವ್ಯಕ್ತಿಗಳನ್ನು ನಾಯಕರೆಂದು ಬಿಂಬಿಸಿ, ಇತಿಹಾಸಕೋರರರು ನಮಗೆ ದಾರಿ ತಪ್ಪಿಸಿದ್ದಾರೆ ಎಂದು ಚಿಂತಕಿ ಹಾಗೂ ಚಲನಚಿತ್ರ ನಟಿ ಮಾಳವಿಕ ಅವಿನಾಶ್ ಮಾರ್ಮಿಕವಾಗಿ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ರಾಷ್ಟ್ರ ಭಾರತಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸೋಮವಾರ ಹಮ್ಮಿಕೊಂಡಿದ್ದ 'ಕನ್ನಡ ಹಬ್ಬ–2023'ರ (ಐದು ದಿನಗಳ ಉತ್ಸವ) ಸಮಾರೋಪ ಸಮಾರಂಭ'ದಲ್ಲಿ ಸಮಾರೋಪ ಭಾಷಣ ಮಾಡಿದ ಅವರು, ಮುಮ್ಮಡಿ ಗೋವಿಂದ ಹೆಸರು ಕೇಳಿದ್ದೀರಾ? ಕೇಳಿರಲು ಸಾಧ್ಯವಿಲ್ಲ. ಏಕೆಂದರೆ ನಮ್ಮ ಇತಿಹಾಸಕೋರರು ಇವರ ಹೆಸರನ್ನು ನಮಗೆ ಹೇಳುವುದೇ ಇಲ್ಲ. ಬದಲಿಗೆ ದೆಹಲಿ ಸುಲ್ತಾನರು, ಅಲ್ಲಾವುದ್ದಿನ್ ಖಿಲ್ಜಿ, ಮೊಹಮ್ಮದ್ ಬಿನ್ ತೊಘಲಕ್ ಇವರನ್ನೆಲ್ಲಾ ಹೇಳಿಕೊಡುತ್ತಾರೆ ಎಂದು ಕಿಡಿಕಾರಿದರು.

ಹೊಯ್ಸಳರ ಕೊನೆ ಸಾಮ್ರಾಟ 3ನೇ ಬಲ್ಲಾಳನು ಅಲ್ಲಾವುದ್ದಿನ್ ಖಿಲ್ಜಿ, ಮೊಹಮ್ಮದ್ ಬಿನ್ ತೊಘಲಕ್‌ಗೆ ತಕ್ಕ ಉತ್ತರ ಕೊಟ್ಟವನು. ತಮಿಳುನಾಡಿನಲ್ಲಿ ಮಧುರೈ ಸುಲ್ತಾನರ ವಿರುದ್ಧವೂ ಹೋರಾಟ ಮಾಡಿದ್ದಾನೆ. ಇವನ ಹೆಸರನ್ನು ಪರಿಚಯ ಮಾಡದೇ ಇರುವುದು ದೊಡ್ಡ ದ್ರೋಹ. ಅಂದಿನ ಸರ್ಕಾರದವರಿಗೆ ಪ್ರೀತಿಪಾತ್ರರಾಗುವಂತೆ, ಅವರಿಗೆ ಓಟು ಬರುವಂತೆ ಇತಿಹಾಸ ರಚನೆ ಮಾಡಲಾಗಿದೆ. ಮಹಾನ್ ಸಾಹಿತಿ, ಜ್ಞಾನಪೀಠ ಪುರಸ್ಕೃತರು 'ತೊಘಲಕ್' ನಾಟಕ ಬರೆದಿದ್ದಾರೆಯೇ ಹೊರತು 3ನೇ ಬಲ್ಲಾಳನ ಬಗ್ಗೆ ಬರೆಯುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡದ ಆಡಳಿತ ಭಾಷೆಯಲ್ಲಿ ಅದೆಷ್ಟೋ ಉರ್ದು, ಪರ್ಷಿಯನ್ ಸೇರಿದಂತೆ ಮತ್ತೊಂದನ್ನು ತುರುಕಲಾಗಿದೆ. ಈ ಎಲ್ಲವನ್ನು ಬದಲಾಯಿಸಲು ಬಹಳ ವರ್ಷದಿಂದ ಹೋರಾಟ ನಡೆಯುತ್ತಿದೆ. ಕನ್ನಡ ಧ್ವಜದ ಸೂತ್ರಧಾರಿ ಮ. ರಾಮಮೂರ್ತಿಯವರಿಂದ ಅಂದೇ ಈ ಹೋರಾಟ ನಡೆದಿತ್ತು. ನಮ್ಮ ನೆಲದ ನಿಜವಾದ ನಾಯಕರು, ಈ ನೆಲ–ಭಾಷೆ, ಜನತೆಗಾಗಿ ದುಡಿದವರು ಯಾರೆಂದು ಪ್ರಜ್ಞಾಪೂರಕವಾಗಿ ಅರಿತುಕೊಳ್ಳುವ ಸಮಯ ಬಂದಿದೆ. ನಮ್ಮಲ್ಲಿ ರಾಷ್ಟ್ರಾಭಿಮಾನ ಮೂಡದಿರಲೆಂದು ನೈಜ ಕೊಡುಗೆ ಇಲ್ಲದ ವ್ಯಕ್ತಿಗಳ ಹೆಸರನ್ನು ಹೇಳಿ ನಮ್ಮ ತಲೆಕೆಡಿಸಲಾಗಿದೆ. ಭುವನೇಶ್ವರಿ ಮತ್ತು ಭಾರತಾಂಬೆ ಇಬ್ಬರಲ್ಲೂ ಅಭಿಮಾನ ಹೊಂದಬೇಕು ಎಂದು ಹೇಳಿದರು.

'ದ್ವಾರ ಸಮುದ್ರ'ವೆಂದು ಮರು ನಾಮಕರಣ ಆಗಲಿ: ಕರ್ನಾಟಕ–ಕನ್ನಡದ ಹಿರಿಮೆಯ ದೇವಸ್ಥಾನಗಳು ಇರುವ ಊರನ್ನು 'ಹಳೇ ಬೀಡು' ಎಂದು ಮಾಡಿಬಿಟ್ಟಿದ್ದು, ಇದು ಅನ್ಯಾಯ. ಅದು 'ದ್ವಾರ ಸಮುದ್ರ' ಆಗಿರಬೇಕಿತ್ತು. ಈಗಲಾದರೂ 'ದ್ವಾರ ಸಮುದ್ರ' ಎಂದು ಮರು ನಾಮಕರಣ ಮಾಡಿದವರಿಗೆ ಶ್ರೇಯಸ್ಸು ಸಲ್ಲುತ್ತದೆ ಎಂದರು.

'ಕರ್ನಾಟ' ಎನ್ನುವ ಪದ ಕದಂಬ ವಂಶದ ಮಯೂರ ವರ್ಮನ ಕಾಲದಲ್ಲೇ ಬಳಕೆಯಲ್ಲಿತ್ತು. ಮಹಾಭಾರತ ಕಾವ್ಯದಲ್ಲೂ ಈ ಪದದ ಉಲ್ಲೇಖವಿದೆ. ಧರಣಿ ಮಂಡಲ ಮಧ್ಯದೊಳಗೆ ಎಂಬ ಗೋವಿನ ಹಾಡಿನಲ್ಲೂ 'ಕರ್ನಾಟ'ವೆಂಬ ಉಲ್ಲೇಖವಿದ್ದು, ಕರ್ನಾಟ ಪದ ಮತ್ತು ಪ್ರಾದೇಶವು ಅತ್ಯಂತ ಪ್ರಾಚೀನತೆ ಹೊಂದಿದೆ ಎಂದು ಹೇಳಿದರು. ಇದಕ್ಕೂ ಮುನ್ನ 'ಕರ್ನಾಟಕ ವೈಭವ' ಪುಸ್ತಕ ಬಿಡುಗಡೆ ಮಾಡಲಾಯಿತು. ಚಿತ್ರ ನಟ ವಶಿಷ್ಠ ಸಿಂಹ, ಮೇಯರ್ ಶಿವಕುಮಾರ್ ಅತಿಥಿಯಾಗಿ ಪಾಲ್ಗೊಂಡಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮುಖಂಡ ಹರೀಶ್‌ಶೆಣೈ ಸೇರಿದಂತೆ ಮತ್ತಿತರರು ಹಾಜರಿದ್ದರು.

ಆಲೂರು ವೆಂಕಟರಾಯರ ಹೆಸರು ಕೈಬಿಡಲು ಮುಂದಾಗಿದ್ದರು

ಹೆಸರೇಳದೇ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ನಟಿ ಮಾಳವಿಕ ಅವಿನಾಶ್ ಕಿಡಿ

ಮೈಸೂರು,ನ.6(ಪಿಎಂ)– ಇಂದಿನ ಮುಖ್ಯಮಂತ್ರಿಗಳು ಈ ಹಿಂದೆ ಮುಖ್ಯಮಂತ್ರಿ ಆಗಿದ್ದಾಗ, ಬೆಂಗಳೂರಿನಲ್ಲಿರುವ ಏಕೀಕರಣದ ರೂವಾರಿ ಆಲೂರು ವೆಂಕಟರಾಯರ ಹೆಸರಿನ ರಸ್ತೆಯ ಹೆಸರನ್ನು ಬದಲಾಯಿಸಲು ಮುಂದಾಗಿದ್ದರು ಎಂದು ಸಿದ್ದರಾಮಯ್ಯನವರ ಹೆಸರು ಪ್ರಸ್ತಾಪಿಸದೇ ನಟಿ ಮಾಳವಿಕ ಅವಿನಾಶ್, ಪರೋಕ್ಷ ವಾಗ್ದಾಳಿ ನಡೆಸಿದರು.

ಇತಿಹಾಸ ಹಾಗೂ ಪಠ್ಯಪುಸ್ತಕದಲ್ಲಿ ರಾಜಕಾರಣ ನಡೆದಿರುವ ಹಿನ್ನೆಲೆಯಲ್ಲಿ ರಾಜಕಾರಣ ಪ್ರಸ್ತಾಪವಿಸುವ ಅನಿವಾರ್ಯತೆ ಇದೆ. ಆಲೂರು ವೆಂಕಟರಾಯರ ಹೆಸರಿನಲ್ಲಿ ಯಾವುದೇ ಸ್ಮಾರಕವಿಲ್ಲ. ಪ್ರಾಯಶಃ ಮುಂದಿನ 20–30 ವರ್ಷಗಳಲ್ಲಿ ಮಕ್ಕಳಿಂದ ಅವರ ಹೆಸರು ಕೇಳಲು ಸಾಧ್ಯವಿಲ್ಲ ಎಂದರು. ಬೆಂಗಳೂರಿನಲ್ಲಿ ಅವರ ಹೆಸರಿನಲ್ಲಿ ಒಂದು ರಸ್ತೆ ಇದೆ. ಅದನ್ನು ಈಗ ಮುಖ್ಯಮಂತ್ರಿ ಆಗಿರುವವರು, ಹಿಂದೆ ಮುಖ್ಯಮಂತ್ರಿಯಾಗಿದ್ದಾಗ, ಆಲೂರು ವೆಂಕಟ ರಾಯರ ಹೆಸರು ಕೈಬಿಟ್ಟು, ಬೇರೆ ಹೆಸರು ನಾಮಕರಣ ಮಾಡಲು ಮುಂದಾಗಿದ್ದರು. ಆಗ ನಾವೆಲ್ಲಾ ಹೋರಾಟ ಮಾಡಿದೆವು. ವೆಂಕಟರಾಯರ ವಂಶಸ್ಥರನ್ನು ಹುಡುಕಿ ಅವರ ಮೂಲಕ ಹೆಸರು ಬದಲು ಮಾಡದಂತೆ ಅಂದಿನ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದೆವು ಎಂದು ಹೇಳಿದರು. ಇತಿಹಾಸ ಕಾರರು ಇತಿಹಾಸ ಹೇಳಿಕೊಟ್ಟಿದ್ದರೆ ಚೆನ್ನಾಗಿತ್ತು. ಆದರೆ ಇವರಲ್ಲಿ ಇತಿಹಾಸ ಕೋರರೇ ಹೆಚ್ಚು. ಹಾಗಾಗಿ ಅನೇಕ ಐತಿಹಾಸಿಕ ವಿಚಾರಗಳು, ನಮ್ಮ ಮನಸ್ಸುಗಳನ್ನು ತಲುಪಿಲ್ಲ ಎಂದು ದೂರಿದರು.

ಮಹಿಷಾ ದಸರಾ ಕೊನೆಗಾಣಿಸಬೇಕು: ದಸರಾ ನಾಡಹಬ್ಬವಾಗಿದ್ದು, ಚಾಮುಂಡೇ ಶ್ವರಿಯ ಸಂಭ್ರಮದ ಈ ಆಚರಣೆಯಲ್ಲಿ ಕೆಲವು ಬುದ್ಧಿ ವಂತರು ಮಹಿಷನಿಗೆ ಸಂಭ್ರಮ ಮಾಡಿದ್ದು, ಇದೊಂದು ರೀತಿಯಲ್ಲಿ ಅತೀ ಬುದ್ಧಿವಂತಿಕೆಯಾಗಿದೆ. ಈ ತರದ ಚೇಷ್ಟೆ ಮಾಡುವವರು ಕೆಲವರು ಇರುತ್ತಾರೆ. ಈ ರೀತಿಯದ್ದಕ್ಕೆ ಪ್ರೋತ್ಸಾಹ ದೊರೆಯಬಾರದು. ಆದರೆ ಪರೋಕ್ಷ ಪ್ರೋತ್ಸಾಹ ಕೆಲವು ಬಾರಿ ರಾಜಕಾರಣಿಗಳಿಂದಲೇ ಸಿಕ್ಕಿ ಬಿಡುತ್ತದೆ. ಅದು ಅವರು ಮೈಸೂರಿನ ರಾಜಕಾರಣಿ ಬೇರೆ. ದಸರಾ ಚಾಮುಂಡೇಶ್ವರಿಯ ಹಬ್ಬ, ಇದರಲ್ಲಿ ಯಾರಿಗೂ ಬೇರೆ ರೀತಿಯ ಅಭಿಪ್ರಾಯ ಇರಬಾರದು. ಇಂತಹ ಅಭಿಪ್ರಾಯ 700 ವರ್ಷಗಳು ಈ ಭೂಮಿ ಕಾಯ್ದ ಒಡೆಯರ್ ವಂಶಕ್ಕೆ ಮಾಡಿದ ಅವಮಾನ ಎಂದು ಹೇಳಿದರು.

ಇತಿಹಾಸ ಮತ್ತು ಪರಂಪರೆ ಗೊತ್ತಿಲ್ಲದವರ ಈ ಮಹಿಷ ದಸರಾವನ್ನು ಮೈಸೂರಿನವರೇ ಕೊನೆಗಾಣಿಸಬೇಕು. ಇವರಿಗೆ ಮೈಸೂರಿನ ಜನ ಬರುವ ವರ್ಷಗಳಲ್ಲಿ ಬುದ್ಧಿ ಕಲಿಸಬೇಕು ಎಂದು ತಿಳಿಸಿದರು.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

Drinking Borewell Water @ Rs. 80/-
Maruthi Tube Wells (R.)
Call: 8184000444

DTCP SITES FOR SALE
DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

ಹೊಸ ಮನೆ ಮಾರಾಟಕ್ಕಿದೆ
ಸರ್ದಾರ್ ವಲ್ಲಭಾಯಿಪಟೇಲ್ ನಗರ
ಮುಡಾ ಅನುಮೋದಿತ ಲೇಔಟ್
20*40 ಅಡಿ, ಪೂರ್ವ ದಿಕ್ಕು,
3 ಬಿಹೆಚ್‌ಕೆ, ಬೋರ್‌ವೆಲ್ ಮತ್ತು
ಪಿಲ್ಲರ್ ಹೊಂದಿದೆ, 100% ವಾಸ್ತು,
ಉತ್ತಮ ಗುಣಮಟ್ಟದ ಹೊಸ ಮನೆ
Call: 9380284276

JOB OPPORTUNITY
SALES/MARKETING EXECUTIVE
For Marketing Commercial & Residential Kitchen Units
2 Wheeler/Licence Preferred
R.J.CORPORATION
Ring Road, Bogadi, Mysore
Contact:- 98201 20182 87220 01666

JOB OPPORTUNITY
Any Degree / Diploma
PUC / SSLC / 8th Std.,
HELPER ASSISTANT
Call: 82097 50147 / 81238 06990

neem BOND PLATINUM®
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಹಸಿರು ನಮ್ಮ ಉಸಿರು

8ನೇ ವರ್ಷದ ಪುಣ್ಯಸ್ಮರಣೆ



ಮೇಸ್ತ್ರಿ ರಮೇಶ್
ಎನ್.ಆರ್.ಮೊಹಲ್ಲಾ, ಮೈಸೂರು.
ಇಂತಿ ದುಃಖತಪ್ತರು : ಪತ್ನಿ, ಮಕ್ಕಳು, ತಮ್ಮಂದಿರು ಹಾಗೂ ಕುಟುಂಬವರ್ಗದವರು

10ನೇ ವರ್ಷದ ಪುಣ್ಯಸ್ಮರಣೆ



ಪಿ. ರಾಮಚಂದ್ರ (ವಿಜಿ) (ಕೆ.ಆರ್.ಆಸ್ಪತ್ರೆ)
ದುಃಖತಪ್ತರು: ಪತ್ನಿ ಗಾಯಿತ್ರಿ ರಾಮಚಂದ್ರ ಮಕ್ಕಳು ಮತ್ತು ಮೊಮ್ಮಕ್ಕಳು.

4ನೇ ವರ್ಷದ ಸವಿನೆನಪು



ಕೆಂಡಗಣ್ಣಶೆಟ್ಟಿ.ಎಂ.ಎ
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ: ಶ್ರೀಮತಿ ಸುಜಾತ ಮತ್ತು ಮಕ್ಕಳು, ಶ್ರೀ ರಾಮೇಶ್ವರ ಪ್ರಾವಿಷನ್ ಸ್ಟೋರ್ & ಶ್ರೀ ಅನ್ನಪೂರ್ಣೇಶ್ವರಿ ಅಕ್ಕಿ ಅಂಗಡಿ
9945768413 & 8971369413
ಬಸವನಗುಡಿ, ಮೈಸೂರು

4ನೇ ವರ್ಷದ ಸವಿನೆನಪು



ನಿಮ್ಮ ಆದರ್ಶಗಳೇ ನಮಗೆ ದಾರಿದೀಪ
ಎಂ. ನಾಗರಾಜು (ನಿವೃತ್ತ ಶಿಕ್ಷಕರು)
ನಿಧನ: 07.11.2019
ಸದಾ ನಿಮ್ಮ ನೆನಪಿನಲ್ಲಿರುವ
ಪತ್ನಿ ಸಿದ್ದಮ್ಮ ಕೆ.ಎಸ್, ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮೊಮ್ಮಕ್ಕಳು ಹಾಗೂ ಕುಟುಂಬವರ್ಗ, ಕುವೆಂಪುನಗರ, ಮೈಸೂರು

FOR ADVERTISEMENT
STAR OF MYSORE
Please Call: 0821-2496522 / 23
Email: ad@starofmysore.com
ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com

MUDA APPROVED SITES FOR SALE
Last 9
30X40 EAST FACING Available.
Ready for Registration
Location: Adjacent J P Nagar, At Mysore-Ooty Road & Ring Road Junction.
Price @ Rs 65 lakhs onwards
Book now to avail attractive Deepavali Discount
Call: 96200 99122

WANTED
For Reputed Mattress Manufacturing Company
* Digital Marketing Representative
* Co-ordinator Sales and Marketing
* Area Sales Manager (Mysore surrounding district)
Send us your resume to: comfortsleepmysuru@gmail.com
Call: 9611417014. Interview on 11-11-2023
Time: 11 am. Place: Nagawala, Mysore.

ವಧು–ವರರ ಅನ್ವೇಷಣೆ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ.
http://www.hoysalakarnatakabrahmins.com
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಸುಮ ಗೋಪಾಲಕೃಷ್ಣ, ದೂರವಾಣಿ : 9886908152

PUBLIC NOTICE

It is hereby notified that, my clients have agreed to purchase the Schedule property from its owner **Dr.A.M.SRINIVASA** S/o Late A.Muniswariah, residing at: No.38, ORMEAU, Vaughan Drive, Queensland-4208, Australia.

If any person/s have any manner of right, title, interest or claim or charge or lien over the Schedule property or otherwise have any lawful objection/s for sale of the Schedule property by the aforesaid owner, they are hereby called upon to file their objections in writing, along with the photocopies of documents on which they rely, with the undersigned, within 14 days from the date of publication of this notice. Objection/s received thereafter will not be binding on my clients.

SCHEDULE

All that piece and parcel of the residential property bearing MUDA Site No.1373, Mysore Mahanagara Palike (MMP) PID No.45206, measuring East to West 120ft and North to South 80ft, situated at Saraswathipuram T.Koppal, C & D Block Layout, Jayanagar, Mysore and bounded on:

East by : Vishwamanava Double Road
West by : Site No.1375 & 1376
North by : Site No.1372
South by : Site No.1374

Sd/- S.F. Goutam Chand
Advocate
Goutam Associates
No.60, 2nd Floor, Kanakapura Road,
Basavanagudi, Bangalore – 560 004

ನಗರಸಭಾ ಕಾರ್ಯಾಲಯ, ಬಿ.ಎಂ. ರಸ್ತೆ,
ಸಂತೇಪೇಟೆ ವೃತ್ತ, ಹಾಸನ.

ದೂ.ಸಂ:08172–268276, 233702 Email:commn_hassan@yahoo.com
ಸಂ:ಪೌಆ/ಹಾನಸ/ಟೆಂಡರ್ ಶಾಖೆ/04/2023–24 ದಿನಾಂಕ:02.11.2023

ಮರು ಟೆಂಡರ್ ಪ್ರಕಟಣೆ: ಇ ಪ್ರೊಕ್ಯೂರ್‌ಮೆಂಟ್ ಮೂಲಕ

ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2023–24ನೇ ಸಾಲಿನ ನಗರಸಭಾ ಅನುದಾನದಡಿಯಲ್ಲಿ ವಿವಿಧ ಕಾಮಗಾರಿ/ ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ದ ಅನ್ವಯ ಐಟಂವಾರು ದರಗಳ ಟೆಂಡರನ್ನು ಹೊಸ ಇ–ಪ್ರೊಕ್ಯೂರ್‌ಮೆಂಟ್ ಕೆ.ಪಿ.ಪಿ.ಪಿ ಪೋರ್ಟಲ್ (https://www.kppp.karnataka.gov.in) ಮೂಲಕ ಕರೆಯಲಾಗಿದ್ದು, ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ:17/11/2023ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ: 08172–268276. ಕಾಮಗಾರಿ ವಿವರ ಈ ಕೆಳಕಂಡಂತಿದೆ. 2023–24ನೇ ಸಾಲಿನ ನಗರಸಭಾ ಅನುದಾನ ಕ್ರ.ಸಂ.1)ಕಾಮಗಾರಿ ಹೆಸರು: ಹಾಸನ ನಗರದ ವಾರ್ಡ್ ನಂ:34 ಕೆ.ಹೆಚ್.ಬಿ ಕಾಲೋನಿಯಲ್ಲಿ ಹಾದು ಹೋಗಿರುವ ದೊಡ್ಡ ಚರಂಡಿಯ ಹೂಳು ತೆಗೆಯಲು ಹೊಸದಾಗಿ ರ‍್ಯಾಂಪ್‌ಗಳ ನಿರ್ಮಾಣ ಮಾಡುವುದು ಹಾಗೂ ದೊಡ್ಡ ಚರಂಡಿಯ ಹೂಳು ತೆಗೆಯುವ ಕಾಮಗಾರಿ. (Indent No: DMA/2023-24/OW/WORK_INDENT3802/CALL-2) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)49.00 ಕಾಲಾವಧಿ 06 ತಿಂಗಳು (ಮಳೆಗಾಲ ಹೊರತುಪಡಿಸಿ) ಅನ್ವಯಿಸುವ ಟೆಂಡರ್ ದಸ್ತಾವೇಜು KW-2 ದಿನಾಂಕಗಳಲ್ಲಿ ಸಾರ್ವಜನಿಕರಜೆಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಕೆಲಸದ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸಿಕೊಳ್ಳತಕ್ಕದ್ದು.

ಸಹಿ/–ಅಧ್ಯಕ್ಷರು, ನಗರಸಭೆ, ಹಾಸನ
ಸಹಿ/–ಪೌರಾಯುಕ್ತರು, ನಗರಸಭೆ, ಹಾಸನ

ವಾಸಾಸಂಇ/ಹಿಸನಿ/ಹಾಸನ/467/ಕೆಎಸ್‌ಎಂಪಿಎ/478/2023–24